ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೯೯
ವಿಚಾರ ಸಾಹಿತ್ಯಮಾಲೆ – ೨೦
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಸತ್ಯಾನ್ವೇಷಣೆಗೆ ಉತ್ತರ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ
ಮೂಲ ಸಂಪಾದಕರು
**ಕೆ. ಎಂ. ಮುನ್ಷಿ**
**ಆರ್. ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್. ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)



# ಸತ್ಯಾನ್ವೇಷಣೆಗೆ ಉತ್ತರ

**ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**

ಮೂಲ
**ರೇ ಹೌಸರ್‌ಮನ್**

ಅನುವಾದ
**ವತ್ಸಲಾ ಅಯ್ಯಂಗಾರ್**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Satyanveshanege Uttara :** Kannada translation of *Answer to the Quest* by **Ray Hauserman;** Kannada translation by **Smt. Vatsala Iyengar;** Editor-in-Chief: **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxviii + 53 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxviii + ೫೩
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.



ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀಮತಿ ವತ್ಸಲಾ ಅಯ್ಯಂಗಾರ್ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಬಾ.ವೇ. ಶ್ರೀಧರ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಸತ್ಯಾನ್ವೇಷಣೆಗೆ ಉತ್ತರ' ಎಂಬ ಪುಸ್ತಕ ಖ್ಯಾತ ಲೇಖಕಿ ಶ್ರೀಮತಿ ವತ್ಸಲಾ ಅಯ್ಯಂಗಾರ್ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

## ಕೃಜ್ಞತೆಗಳು

ಈ ಪುಸ್ತಕದಲ್ಲಿ ಬಳಸಲಾಗಿರುವ ಶ್ರೀ ಶ್ರೀ ಥಾಕೂರ್ ಅನುಕೂಲ ಚಂದ್ರ ಅವರ ವಾಕ್ಯಗಳನ್ನು ಉದ್ಧೃತಪಡಿಸಲು ಸತ್ಸಂಗ್ ಪ್ರಕಾಶಕರು ಪರವಾನಗಿ ನೀಡಿರುವುದಕ್ಕಾಗಿ, ಅವರಿಗೆ ಕೃತಜ್ಞತೆಯನ್ನು ಅರ್ಪಿಸಲಾಗಿದೆ.



## ಮುನ್ನುಡಿ

"ಇವರೇನೇ ಥಾಕೂರ್ ಎನ್ನುವವರು" – ಇದೇ ನಾನು ಕಲ್ಕತ್ತಾದಿಂದ ಕಠಿಣ ಪ್ರಯಾಣ ಕೈಗೊಂಡು ಭೇಟಿಯಾಗಬೇಕೆಂದು ಬಯಸಿದ್ದ ವ್ಯಕ್ತಿಯ ಮುಂದೆ ನಿಂತಾಗ ನನ್ನ ಮನಸ್ಸಿಗೆ ತೋರಿದ ಮೊದಲ ಉದ್ಗಾರ ! ಹಬೆ ಲಾಂಡ್ರಿಯೆಂದು ನನಗೆ ತಿಳಿಸಲಾಗಿದ್ದ ಒಂದು ಕಟ್ಟಡದ ತಗ್ಗು ಗೋಡೆಯ ಹಿಂದೆ ಮರದ ಮಂಚದ ಮೇಲೆ ಅವರು ಕುಳಿತಿದ್ದರು. ಥೇಟ್ ಬಂಗಾಲಿ ಪುರುಷರಂತೆ ಪಂಚೆ ಮತ್ತು ಕಾಲರ್ ಇಲ್ಲದ ಕಿರುಗೈ–ಷರ್ಟ್ ತೊಟ್ಟಿದ್ದರು. ಅವರ ತ್ವಚೆ ಬಹುತೇಕವಾಗಿ ಹೊಂಬಣ್ಣ ಎನ್ನುವಷ್ಟು ತೆಳುವಾಗಿತ್ತು ಹಾಗೂ ಮೋಟು ಕೂದಲು ಮತ್ತು ಮೀಸೆ ಅಲ್ಲಲ್ಲಿ ಬೆಳ್ಳಿಯಂತೆ ಮಿಂಚುತ್ತಿದ್ದವು. ಸ್ಥೂಲ ಶರೀರದವರಾಗಿದ್ದರೂ, ಚಲಿಸಿದಾಗ ಅವರಲ್ಲಿ ಒಂದು ಸರಳತೆ ಮತ್ತು ಠೀವಿ, ಅವರ ಮುಖಲಕ್ಷಣಗಳಲ್ಲಿ ತೇಜಸ್ಸು ಮತ್ತು ಗಾಂಭೀರ್ಯತೆ ಎದ್ದು ಕಾಣುತ್ತಿದ್ದವು. ಆದರೂ ಸಹ, ಅವರ ಸಾಧಾರಣತೆಯ ಬಗ್ಗೆ ನನ್ನಲ್ಲಿ ಮೂಡಿದ ಮೊದಲ ಅಭಿಪ್ರಾಯ ನಿರಾಸೆಯಿಂದ ಕೂಡಿತ್ತು. ಅನೇಕರ ಬಾಯಲ್ಲಿ ಇವರ ಬಗ್ಗೆ ಅಸಂಗತ ಮತ್ತು ವಿವಾದಾತ್ಮಕ ಅಭಿಪ್ರಾಯಗಳನ್ನು ಬಹಳವಾಗಿ ಕೇಳಿದ್ದ ನನಗೆ ಥಾಕೂರ್ ಅನುಕುಲ್ ಚಂದ್ರ ಹೆಸರಿನ ಒಬ್ಬ ಸಂತ ಮತ್ತು ವೈದ್ಯ, ಒಬ್ಬ ವಿಜ್ಞಾನಿ ಮತ್ತು ದಾರ್ಶನಿಕ, ಒಬ್ಬ ಶಿಕ್ಷಣ ತಜ್ಞ ಮತ್ತು ಕೈಗಾರಿಕೋದ್ಯಮಿ – ಇಷ್ಟು ವಿಭಿನ್ನ ವ್ಯಕ್ತಿತ್ವವುಳ್ಳವರು ನನ್ನ ಮುಂದೆ ಕುಳಿತಿದ್ದಾರೆಯೇ ಎನಿಸಿತು. ಇವರು ಎಷ್ಟು ನಿಗರ್ವಿ ಮತ್ತು ಮುಗ್ಧರು ಎಂದು ತೋರಿತು.

ಈ ಅಸಾಧಾರಣ ಮತ್ತು ವಿವಾದಾತ್ಮಕ ವ್ಯಕ್ತಿಯ ಹೆಸರನ್ನು ನಾನು ಮೊಟ್ಟಮೊದಲಾಗಿ ಎರಡನೆಯ ಮಹಾಯುದ್ಧದ ನಂತರವೇ ಕೇಳಿದ್ದೆ. ಕಲ್ಕತ್ತಾದಿಂದ ೧೪೦ ಮೈಲಿ ಉತ್ತರಕ್ಕೆ ಇರುವ ಅವರ ಸ್ವ–ಗ್ರಾಮದಲ್ಲಿ ನಾನು ಅವರನ್ನು ಭೇಟಿಯಾದಾಗ, ಅವರಿಗೆ ೫೮ ವರ್ಷ ವಯಸ್ಸಾಗಿತ್ತು. ಪುಟ್ಟ ಮಗುವಿನ ರೀತಿಯ ಅವರ ಮುಕ್ತ ಮತ್ತು ನಿಷ್ಕಪಟ ಮುಗುಳುನಗು, ನಾನು ಅವರನ್ನು ತುಂಬಾ ಕಾಲದಿಂದ ಅರಿತಿದ್ದೇನೆ ಎನ್ನುವ ಆತ್ಮೀಯತೆಯನ್ನು ಮೂಡಿಸಿತು. ನಮ್ಮಿಬ್ಬರ ನಡುವೆ ಸಂಭಾಷಣೆ ಮತ್ತು ಚರ್ಚೆ ಮುಂದುವರೆದಂತೆ ಇವರ ಮಾತುಗಳಲ್ಲಿ ಇರುವ ಒಳನೋಟ ಮತ್ತು ಪ್ರೀತಿ ವಿಶ್ವಾಸಗಳನ್ನು ಮನವರಿತುಕೊಂಡೆ. ಇಷ್ಟು ನಿಷ್ಠೆ......... ಮತ್ತು ಇಷ್ಟು ವಿರೋಧವನ್ನು ಅವರು ಜನರಲ್ಲಿ ಮೂಡಿಸಬಲ್ಲರು ಎನ್ನುವುದನ್ನು ಅರ್ಥಮಾಡಿಕೊಳ್ಳಲು ಆರಂಭಿಸಿದೆ.

ಅನುಕುಲ್ ಚಂದ್ರ ಚಕ್ರಬೊರ್ತಿಯವರು ೧೮೮೮ರ ಇಸವಿಯಲ್ಲಿ ಹಿಮಾಯತ್‌ಪುರ್‌ದಲ್ಲಿ ಜನಿಸಿದರು. ಅವರ ಬಾಲ್ಯವು ಯಾವುದೇ ಅತ್ಯದ್ಭುತ ಶೈಕ್ಷಣಿಕ ದಾಖಲೆಗೆ ಪ್ರತಿಯಾಗಿ, ಸಂತ್ರಸ್ತರತ್ತ ಸಹಾನುಭೂತಿ ವ್ಯಕ್ತಪಡಿಸುವುದರಲ್ಲಿಯೇ ಮೇಲುಗೈ ಪಡೆದಿತ್ತು. ವಾಸ್ತವಿಕವಾಗಿ ತಾವು ತಮ್ಮ ಅಧ್ಯಾಪಕರಿಗೆ ಸಕಾಲಿಕ ಉಡುಗೊರೆಗಳು ಮತ್ತು ಸೇವೆ ಸಲ್ಲಿಸಿದ ಮುಖ್ಯ ಕಾರಣದಿಂದಲೇ ಹೈಸ್ಕೂಲಿನ

ಅಂತಿಮ ಪರೀಕ್ಷೆಯನ್ನು ತಲುಪಿದ್ದಾಗಿ ಅವರು ಹೇಳಿಕೊಂಡಿದ್ದಾರೆ. ಆದರೆ ಈ ಆತುರದ ವರ್ತನೆ ಅವರ ಹಿರಿಯರಿಗಾಗಿ ಮಾತ್ರ ಮೀಸಲಾಗಿರಲಿಲ್ಲ. ಒಮ್ಮೆ ತುರ್ತು ಅಗತ್ಯವಿದ್ದ ಮಿತ್ರನೊಬ್ಬನಿಗೆ ತಮ್ಮ ಪರೀಕ್ಷಾ ಶುಲ್ಕವನ್ನು ಹಿಂಜರಿಯದೇ ಹಠಾತ್ತನೆ ಕೊಟ್ಟಾಗ, ಅವರ ಪ್ರೌಢ ಶಿಕ್ಷಣ ಅಲ್ಲಿಗೇ ಮುಗಿಯಿತು. ನಂತರವಾಗಿ ಅವರು ಕಲ್ಕತ್ತಾದಲ್ಲಿನ ರಾಷ್ಟ್ರೀಯ ವೈದ್ಯಕೀಯ ಸಂಸ್ಥೆಯಲ್ಲಿ, ವೈದ್ಯಶಾಸ್ತ್ರದ ಅಧ್ಯಯನವನ್ನು ಕೈಗೆತ್ತಿಕೊಂಡಾಗ ಕೂಲಿಗಳೊಂದಿಗೆ ವಾಸ ಮಾಡಿ, ಅವರುಗಳ ರೋಗಗಳಿಗೆ ಚಿಕಿತ್ಸೆ ನೀಡುವುದು, ಅವರುಗಳ ಬಟ್ಟೆಗಳನ್ನು ಒಗೆಯುವುದು ಮತ್ತು ಅವರುಗಳ ವೈಯಕ್ತಿಕ ತೊಂದರೆಗಳನ್ನು ನಿವಾರಿಸುವ ಮೂಲಕ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದರು. ಇದಲ್ಲದೇ ಪ್ರಸವಶಾಸ್ತ್ರದ ಅಂತಿಮ ಮೌಖಿಕ ಪರೀಕ್ಷೆಯನ್ನು ತಲುಪಿದಾಗ, ಅವರ ವ್ಯಕ್ತಿತ್ವದ ಒಂದು ವಿಶೇಷ ಗುಣವು, ವೈದ್ಯಶಾಸ್ತ್ರದಲ್ಲಿ ಪದವಿ ಪಡೆಯುವ ಸಾಧ್ಯತೆಯನ್ನು ತೊಡೆದುಹಾಕಿತು. ತ್ರಿ–ಸದಸ್ಯ ಪರೀಕ್ಷಾ ಮಂಡಳಿಯ ಮುಂದೆ ಹಾಜರಾದಾಗ ಅವರುಗಳ ಪೈಕಿ ಯಾರದ್ದು ಮೊದಲ ಪ್ರಶ್ನೆಯಾಗಿರಬೇಕೆಂದು ಸೂಚಿಸಬೇಕಾಗಿ ಅನುಕುಲ್ ಅವರನ್ನು ಕೇಳಿದಾಗ, ಅವರೆಲ್ಲರೂ ತಮ್ಮ ತಮ್ಮ ಪ್ರಶ್ನೆಗಳನ್ನು ಕೇಳಬೇಕೆಂದೂ, ಆದರೆ ತಾವು ಇವೆಲ್ಲಕ್ಕೂ ಒಂದೇ ಉತ್ತರವನ್ನು ನೀಡುವುದಾಗಿಯೂ ಹೇಳಿದರು. ಪರಸ್ಪರ ಸಂಬಂಧ ಕಲ್ಪಿಸಿ ಎಲ್ಲವನ್ನೂ ಒಗ್ಗೂಡಿಸುವ ಈ ಕಾತುರತೆ, ಪ್ರೊಫೆಸರ್‌ಗಳಿಗೆ ಮೆಚ್ಚುಗೆಯಾಗಲಿಲ್ಲ. ಪರಿಣಾಮವಾಗಿ, ಅನುಕುಲ್ ಯಾವುದೇ ಡಿಪ್ಲೊಮ ಗಳಿಸದೇ ಸ್ವ–ಗ್ರಾಮಕ್ಕೆ ಹಿಂತಿರುಗಿದರು.

ಗ್ರಾಮೀಣ ಬಂಗಾಳದ ಹಿಂದುಳಿದ ವಾತಾವರಣದಲ್ಲಿ ವೈದ್ಯ ನಡೆಸಲು ಅವರಿಗೆ ಯಾವುದೇ ಪದವಿಯ ಅಗತ್ಯವಿರಲಿಲ್ಲ. ಯಾರಿಂದಲೂ ಏನನ್ನೂ ನಿರೀಕ್ಷಿಸದೇ, ರೋಗಿಗಳು ಕೃತಜ್ಞತಾಪೂರ್ವಕವಾಗಿ ಕೊಟ್ಟಿದ್ದನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದರು. ಇದರೊಂದಿಗೆ ಅವರ ಅಸಾಧಾರಣಾ ಚಿಕಿತ್ಸಾ ಯಶಸ್ಸು ಜೊತೆಗೂಡಿದ್ದರಿಂದ ಅವರು ಶೀಘ್ರದಲ್ಲೆ ದೊಡ್ಡದಾದರೂ ಅತ್ಯಂತ ಬಡವರನ್ನು ಗಿರಾಕಿಗಳಾಗಿಸಿಕೊಂಡರು.

೧೯೧೨ರ ಆರಂಭದ ವೇಳೆಗೆ ಆ ಪ್ರದೇಶದ ಪುಂಡರು ಮತ್ತು ಅಪರಾಧಿಗಳನ್ನು ಒಳಪಡಿಸಿ ಏರ್ಪಡಿಸಲಾಗುತ್ತಿದ್ದ ಕೀರ್ತನ ಸಭೆಗಳಿಗೆ ಜನರನ್ನು ಆಕರ್ಷಿಸಲು ಆರಂಭಿಸಿದರು. ೧೯೧೪ ರ ವೇಳೆಗೆ ಮತ್ತು ತದನಂತರದ ಹಲವಾರು ವರ್ಷಗಳಿಗಾಗಿ ಅವರ ನೃತ್ಯ ಮತ್ತು ಹಾಡುವಿಕೆಯಿಂದ ಭಾರಿ ಸಂಖ್ಯೆಯಲ್ಲಿ ಆಕರ್ಷಿತರಾದ ಜನರು ಅವರ ಧರ್ಮಶ್ರದ್ಧೆಯಿಂದ ಭಾವಾವೇಶಗೊಂಡರಲ್ಲದೇ ಅವರು ಪವಾಡಸದೃಶರಾಗಿ ರೋಗಗಳನ್ನು ಗುಣಮಾಡುತ್ತಾರೆಂದು ಸಹ ನಂಬಿದರು. ಇದು ಅವರಿಗೆ ಥಾಕೂರ್ ಅಥವಾ ಒಡೆಯ ಎನ್ನುವ ಹೆಸರು ಅಥವಾ ಬಿರುದನ್ನು ಗಳಿಸಿಕೊಟ್ಟಿತು – ಇದು ಆಡು ಭಾಷೆಯಲ್ಲಿ ಬಾಣಸಿಗನೇ ಹೊರತು ಬೇರೇನೂ ಇಲ್ಲವೆಂದು ಅನುಕುಲ್ ಒತ್ತಿಹೇಳುತ್ತಾರೆ.

೧೯೧೯ರ ವೇಳೆಗೆ ಥಾಕೂರ್ ತಮ್ಮೊಂದಿಗೆ ಉಳಿದ, ನೃತ್ಯ, ಸಂಗೀತಗಳಿಂದ ಸ್ವರ್ಗಕ್ಕೆ ನೇರ ಹಾದಿಯನ್ನು ಕಂಡುಕೊಂಡಿರುವುದಾಗಿ ನಂಬಿದ್ದ ಸಾವಿರಾರು ಅನುಯಾಯಿಗಳನ್ನು ಯಾವುದೇ ಕಾರಣವಿಲ್ಲದೇ ಮತ್ತು ಹಠಾತ್ತನೆ ತೊರೆದು ತಮ್ಮ ಹಿಂದುಳಿದ ಗ್ರಾಮಕ್ಕೆ ಹಿಂತಿರುಗಿದರು. ಆಧ್ಯಾತ್ಮಿಕ ಪರಮಾನಂದದ ಆವೇಶವು ದೈಹಿಕ ಮತ್ತು ಮಾನಸಿಕ ಪರಿಶ್ರಮವಾಗಿ ಬದಲಾದಾಗ, ಅನುಯಾಯಿಗಳ ಬೃಹತ್



ಸಂಖ್ಯೆ ತಾತ್ಕಾಲಿಕವಾಗಿ ಕ್ಷೀಣಿಸಿತು. ಚಟುವಟಿಕೆಗಳಲ್ಲಿ ಬದಲಾವಣೆಯು ಇದಕ್ಕೆ ಭಾಗಶಃ ಸ್ಫೂರ್ತಿಯಾಗಿತ್ತು. ಇದಕ್ಕೆ ಅವರ ಅಭಿಪ್ರಾಯ ಮತ್ತಷ್ಟು ಇಂಬು ನೀಡಿತು: "ಹೆಸರು ಮತ್ತು ಶ್ರೀಮಂತಿಕೆಯ ಆಶಯದಿಂದ ಅನುಯಾಯಿಗಳಾಗುವವರೇ, ಜಾಗರೂಕರಾಗಿರಿ. ನಿಮ್ಮೊಳಗಿನ ಮಾಲಿಕತ್ವ ಬೆಳೆಯದಿದ್ದಲ್ಲಿ, ನಿಮಗೆ ಯಾವುದೇ ಮಾಲೀಕರು ಇರುವುದಿಲ್ಲ, ಥಾಕೂರ್ ಇರುವುದಿಲ್ಲ ಮತ್ತು ನಿಮಗೆ ವಂಚನೆ ಮಾಡುವವರು ವಂಚಿತರಾಗುತ್ತಾರೆ". ಭಾವಪರವಶತೆಯ ಮತ್ತೊಂದು ಜಗತ್ತಿನ ಅಧ್ಯಾತ್ಮಜ್ಞಾನಕ್ಕೆ ಬದಲಾಗಿ ಮಾನವನು ತನ್ನ ದೈನಂದಿನ ಜೀವನವನ್ನು ಹೆಚ್ಚು ಉತ್ಪಾದಕ ಮತ್ತು ಹೆಚ್ಚು ಅರ್ಥಪೂರ್ಣಗೊಳಿಸುವಂತೆ ಪ್ರೇರೇಪಿಸುವ ವಾಸ್ತವಿಕ ಚಟುವಟಿಕೆಗೆ ಸಂಬಂಧಪಟ್ಟ ಸರಳ ಮತ್ತು ವ್ಯಾವಹಾರಿಕ ವಿವರಣೆ ಇದಾಗಿತ್ತು.

ಧಾರ್ಮಿಕತೆಯಲ್ಲಿ ರೋಮಾಂಚನವನ್ನು ಹುಡುಕುತ್ತಿರುವವರಿಗೆ ಬದಲಾಗಿ, ದೈಹಿಕ ಮತ್ತು ಮಾನಸಿಕ ಅಸ್ವಸ್ಥ್ಯತೆಗೆ ತುತ್ತಾಗಿದ್ದ ಸಾವಿರಾರು ಮಂದಿ ಮತ್ತು ಸತ್ಯಾನ್ವೇಷಣೆಯ ಪ್ರಾಮಾಣಿಕ ಶೋಧಕರು ಹಾಗೂ ಸಮಾಜ ಚಿಂತಕರು ಥಾಕೂರ್ ಅವರ ಜೊತೆಗೂಡಿದರು. ಅನೇಕರು ಅವರ ಸಂಗಾತಿಗಳಾಗಿದ್ದರಿಂದ, ಅವರ ಅಗತ್ಯಗಳು, ಶಾಲೆಗಳು, ಆಸ್ಪತ್ರೆ, ಕಾರ್ಯಾಗಾರಗಳು, ಗಿರಣಿ, ತೋಟಗಳು ಮತ್ತು ಪ್ರಯೋಗಾಲಯಗಳ ನಿರ್ಮಾಣಕ್ಕೆ ಸ್ಫೂರ್ತಿಯಾದವು. ಹಿಂದುಳಿದ ಆ ಗ್ರಾಮ ನಿಧಾನವಾಗಿ ಏಳಿಕೆಯುಕ್ತ ಮತ್ತು ಚಲನಶೀಲ ಸಮುದಾಯವಾಗಿ ಮಾರ್ಪಟ್ಟಿದ್ದು, ಇದನ್ನು ಅಸ್ಸಾಂನ ದಿವಂಗತ ಮುಖ್ಯಮಂತ್ರಿ ಗೋಪಿನಾಥ್ ಬಾರ್ಡೊಲೋಯ್ ಭಾರತದ ಗ್ರಾಮೀಣ ಪುನರ್ ನಿರ್ಮಾಣದ ಶ್ರೇಷ್ಠ ಉದಾಹರಣೆಯೆಂದು ೧೯೩೪ರಲ್ಲಿ ವರ್ಣಿಸಿದರು.

ಥಾಕೂರ್ ಅವರ ವ್ಯಾವಹಾರಿಕ ಧರ್ಮ, ದೂರದೃಷ್ಟಿಯ ಆದರ್ಶವಾದ ಮತ್ತು ಪ್ರತ್ಯಕ್ಷಜ್ಞಾನದ ಸೂಕ್ಷ್ಮದೃಷ್ಟಿಯ ಅಸಾಧಾರಣ ಸಂಯೋಗವು ದಿನೇ ದಿನೇ ಜನರನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸಿದ ಸಮಯದಲ್ಲೇ, ಹತಾಶರು, ಸಾಮಾಜಿಕವಾಗಿ ಬಹಿಷ್ಕೃತರು, ಬುದ್ಧಿವಿಕಲರು ಹಾಗೂ ಅಸಮರ್ಥರ ಬಗ್ಗೆ ಅವರು ಆಳವಾದ ಅನುಕಂಪ ತೋರಿ, ಮನಃಪೂರ್ವಕವಾಗಿ ಅವರುಗಳನ್ನು ಅಂಗೀಕರಿಸಿದ್ದು, ಒಂದು ರೀತಿಯಲ್ಲಿ ಅವರ ಮಹಾನ್ ಆಸ್ತಿಯಾಯಿತೆಂದು ವರ್ಣಿಸಬಹುದಾದರೂ, ಇದೇ ಅವರ ಮೇಲೆ ಅತ್ಯಧಿಕ ಹೊರೆಯನ್ನು ವಹಿಸಿತು. ಥಾಕೂರ್ ಅವರಲ್ಲಿಗೆ ಬಂದ ಎಲ್ಲರ ಬಗ್ಗೆಯೂ ಅಸೀಮಿತವಾಗಿ ಜವಾಬ್ದಾರಿ ವಹಿಸಿಕೊಳ್ಳಬೇಕೆಂಬ ಈ ಮನೋಭಾವನೆಯೇ ಸರ್ವವ್ಯಾಪಿ ಒಲುಮೆಯ ಚಿತ್ರಣವನ್ನು ಮೂಡಿಸಿತು. ಆದರೆ ಒಲುಮೆ ಮತ್ತು ಪ್ರೀತಿ ಎನ್ನುವುದು ಒಂದು ಸುಂದರ ಜಗತ್ತಿಗೆ ಮಾತ್ರ ಮೀಸಲು ಎಂದು ಭಾವಿಸಿದವರಿಗೆ ರೋಗಿಷ್ಟರು, ಮಾಂದ್ಯರು ಮತ್ತು ಅನರ್ಹರೆಲ್ಲರೂ, ಥಾಕೂರ್ ಅವರಲ್ಲಿ ಆಸರೆ ಮತ್ತು ಆಶಯವನ್ನು ಕಂಡುಕೊಂಡಿದ್ದಾರೆ ಎನ್ನುವ ಅಂಶ ಚಿಂತಾಜನಕವಾಗಿತ್ತಲ್ಲದೇ...ಕೆಲವೊಮ್ಮೆ ಚಿತ್ತಸ್ಥೈರ್ಯವನ್ನೂ ಉಡುಗಿಸುತ್ತಿತ್ತು.

ಬಿಹಾರಿನ ಖ್ಯಾತ ವಕೀಲ ಮತ್ತು ಶಿಕ್ಷಣತಜ್ಞರಾದ ಒಬ್ಬರು ಥಾಕೂರ್ ಅವರು ಕೇಡನ್ನು ಯಾಕೆ ಬೆಂಬಲಿಸುತ್ತಾರೆ ಎನ್ನುವ ಸವಾಲನ್ನು ಒಡ್ಡಿದಾಗ, ಅವರು ತಮ್ಮ ಭಾವಪೂರ್ಣ ಮತ್ತು ಪ್ರಕಾಶಮಾನ ಕಣ್ಣುಗಳನ್ನು ಈ ವಕೀಲರ ಮೇಲೆ ಬೀರಿ, "ನಾನು ಎಂದಿಗೂ ಕೆಡುಕನ್ನು ಬೆಂಬಲಿಸುವುದಿಲ್ಲವಾದರೂ, ಅದಕ್ಕೆ ಆಸರೆ ನೀಡುತ್ತೇನೆ. ಮೂರ್ಖ ಮಕ್ಕಳ ಮೂರ್ಖ ತಂದೆ ನಾನಾಗಿರಬಹುದು. ಆದರೆ ಒಂದಲ್ಲ ಒಂದು

ದಿನ ಅವರುಗಳು ಬದಲಾಗುತ್ತಾರೆ ಎಂದೇ ನಾನು ನಂಬುತ್ತೇನೆ.” ಎಂದು ಸರಳ ಉತ್ತರ ನೀಡಿದರು.

ನಂಬಲು ಆಗದಂತಹ ಸಂಗತಿಯೆಂದರೆ ಇವರುಗಳು ಬದಲಾಗುತ್ತಿದ್ದಾರೆ ಮತ್ತು ಥಾಕೂರ್ ಅವರು ತಪ್ಪಭಿಪ್ರಾಯಗಳು ಮತ್ತು ಆರೋಪಗಳಿಗೆ ಬೆಲೆ ಕೊಡದೇ ತಾಳ್ಮೆಯಿಂದ ಅವರುಗಳನ್ನು ಪ್ರೇರೇಪಿಸುತ್ತಾರೆ. ಫಲಿತಾಂಶಗಳು ಸರ್ವವೇದ್ಯವಾಗಿವೆ. ಭಾರತವು ೧೯೪೬ರ ಅಂತ್ಯದಲ್ಲಿ ಮತ್ತು ೧೯೪೭ರಲ್ಲಿ ದಂಗೆಗಳಿಗೆ ಸಿಲುಕಿದಾಗ ನಾನು ಥಾಕೂರ್ ಅವರನ್ನು ಮೊಟ್ಟಮೊದಲಾಗಿ ಭೇಟಿಯಾಗಿದ್ದ ಅದ್ಭುತ ಸಮುದಾಯವನ್ನು ತ್ಯಜಿಸಿ, ಅವರು ನೂರಾರು ಕ್ಷುಧಾರ್ತರು ಮತ್ತು ನಿರಾಶ್ರಿತರೊಂದಿಗೆ ಬಿಹಾರಿನ ದೇವ್‌ಘಡ್‌ಗೆ ಬಂದರು.

“ನೀವು ಏನನ್ನು ಕಳೆದುಕೊಂಡಿದ್ದೀರಿ? ಎಲ್ಲವನ್ನೂ – ಭೂಮಿ, ಮನೆ, ವ್ಯಾಪಾರ – ನಿಮ್ಮ ದಕ್ಷತೆಯಿಂದ ನಿರ್ಮಿಸಲಾಗಿತ್ತು ಮತ್ತು ನೀವು ಇದನ್ನು ಕಳೆದುಕೊಂಡಿಲ್ಲ. ಈ ದಕ್ಷತೆಯಿಂದಲೇ ನಾವು ಮತ್ತೆ ಎಲ್ಲವನ್ನೂ ನಿರ್ಮಿಸೋಣ”. ಥಾಕೂರ್‌ರ ಈ ಆತ್ಮವಿಶ್ವಾಸ ಮತ್ತು ದೃಢನಂಬಿಕೆಯಿಂದಲೇ ನೂರಾರು ಮಂದಿ, ಸಾವಿರಾರು ಜನರಾದರು. ಉತ್ತರ ಬಂಗಾಳದ ಮೂಲ ಸಮುದಾಯವನ್ನು ತ್ಯಜಿಸಿದ್ದರಿಂದ ಥಾಕೂರ್ ಎರಡು ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಸಲಕರಣೆಗಳನ್ನು ಹಿಂದೆ ಬಿಟ್ಟು ಬಂದರೆಂದು ಅಂದಾಜು ಮಾಡಲಾಗಿದೆ. ಆದರೆ ಅವರಿಗೆ ಇದರ ಬಗ್ಗೆ ಯಾವುದೇ ವಿಷಾದ ಅಥವಾ ಹಿಂಜರಿಕೆ ಇರಲಿಲ್ಲವಾದ್ದರಿಂದ ತಮ್ಮ ಸುತ್ತಮುತ್ತಲ ಜನರನ್ನೂ ಇದೇ ರೀತಿಯಲ್ಲಿ ಹುರಿದುಂಬಿಸಿದರು. ಇಂದು ಸರ್ಕಾರದಿಂದ ಯಾವುದೇ ಸಹಾಯವನ್ನು ಕೋರದೇ ತಮ್ಮ ಕಾಲುಗಳ ಮೇಲೆ ತಾವು ನಿಂತಿರುವ ಸಾವಿರಾರು ನಿರಾಶ್ರಿತರೇ, ಒಬ್ಬ ಮನುಷ್ಯ ಸಾಧಾರಣ ಮತ್ತು ಅಸಹಾಯಕನಾಗಿದ್ದರೂ ಸಹ – ಅವನ ವೃದ್ಧಿತ ದಕ್ಷತೆಯೇ ಅವನ ಏಕೈಕ ಶ್ರೀಮಂತಿಕೆಯಾಗಿದೆ ಎನ್ನುವುದಕ್ಕೆ ಪರಮೋಚ್ಚ ಉದಾಹರಣೆಯಾಗಿದ್ದಾರೆ.

ವರ್ಷಗಳು ಕಳೆದಂತೆ ಕೆಲಸಗಾರರು ಮತ್ತು ಭೇಟಿಗರಿಬ್ಬರೂ ಥಾಕೂರ್ ಅವರನ್ನು ಅವರ ಸಿದ್ಧಾಂತಗಳು ಹಾಗೂ ಅವನ್ನು ದೈನಂದಿನ ಸಮಸ್ಯೆಗಳತ್ತ ವಾಸ್ತವಿಕವಾಗಿ ಪ್ರಯೋಗಿಸುವ ವಿಧಾನಗಳ ಬಗ್ಗೆ ಪ್ರಶ್ನಿಸುತ್ತಿದ್ದರು. ತದನಂತರದ ತಿಂಗಳುಗಳು ಮತ್ತು ವರ್ಷಗಳಲ್ಲಿ ಕ್ರಮೇಣವಾಗಿ ಪ್ರೀತಿ ಮತ್ತು ಖ್ಯಾತ, ಈ ಮೊದಲಿನ ಸಂಗೀತ ನೃತ್ಯದ ದಿನಗಳಿಗೆ ಪ್ರತಿಯಾಗಿ ಈ ಭೂಮಿಯಲ್ಲಿ ಸ್ವರ್ಗವನ್ನು ಸಾಧಿಸಬಹುದೆಂಬ ಥಾಕೂರ್ ಅವರ ಮೂಲ ಮತ್ತು ಸರಳ ಚಿಂತನೆಯ ಸುತ್ತಲೂ ಒಂದು ಸೊಗಸಾದ ವಿವೇಚನೆಯನ್ನು ಹಾಸುಹೊಕ್ಕಾಗಿ ಹೆಣೆದವು. ಈ ಸಮೃದ್ಧ ನೇಯ್ಗೆಯು ಜನನದಿಂದ ಮರಣದವರೆಗಿನ ಬಾಳಿನ ಪ್ರತಿ ಅಂಶ, ಮಾನವನ ಪ್ರತಿ ಅಗತ್ಯ ಮತ್ತು ವೈಯಕ್ತಿಕದಿಂದ ಸಾರ್ವತ್ರಿಕ ಜಗತ್ತಿನ ಎಲ್ಲಾ ಆಯಾಮಗಳನ್ನು ಒಳಪಟ್ಟಿತ್ತು. ಈ ಚರ್ಚೆಗಳು, ಅನಿಸಿಕೆಗಳು ಮತ್ತು ವಿಚಾರಧಾರೆಗಳನ್ನು ಅನೇಕ ಸಂಪುಟಗಳಲ್ಲಿ ಸಂಕಲಿಸಲಾಗಿದೆ. ಅವು ಇಪ್ಪತ್ತನೆಯ ಶತಮಾನದ ಜೀವನಕ್ಕೆ ಅನ್ವಯಿಸುವ ವ್ಯಾವಹಾರಿಕ ಪರಿಹಾರಗಳೊಂದಿಗೆ ಪೂರ್ಣ ಅಸ್ತಿತ್ವ ಮತ್ತು ಯೋಗ್ಯತೆಯನ್ನು ಕುರಿತ ಥಾಕೂರ್ ಅವರ ತತ್ವಜಿಜ್ಞಾಸೆಯನ್ನು ಹೊಂದಿವೆ.

ಎರಡನೇ ಮಹಾಯುದ್ಧ ಮುಗಿದ ಕೂಡಲೇ ಭಾರತಕ್ಕೆ ಕಳುಹಿಸಲಾಗಿದ್ದ



ಅಮೆರಿಕನ್ನರು ಥಾಕೂರ್ ಅವರನ್ನು ಭೇಟಿಯಾಗಲು ಆರಂಭಿಸಿದರು. ಇವರ ಪೈಕಿ ಬಹುತೇಕ ಮಂದಿ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಮಯಕ್ಕಾಗಿ ಮಾತ್ರ ತಂಗಿದರಾದರೂ, ಭೀತಿ ಮತ್ತು ಗೊಂದಲದ ಜಗತ್ತಿನಲ್ಲಿ ಶಾಂತಿ ಮತ್ತು ಚಿತ್ತಸ್ವಾಸ್ಥ್ಯದ ಒಂದು ಪ್ರಶಾಂತ ಸ್ಥಳದ ನೆನಪುಗಳೊಂದಿಗೆ ಸ್ವದೇಶಕ್ಕೆ ಮರಳಿದರು. ಇನ್ನೂ ಕೆಲವರು, ಥಾಕೂರ್ ಅವರೊಂದಿಗೆ ಉಳಿಯಲು ನಿರ್ಧರಿಸಿದರು. ಸಮುದಾಯವು ಬಿಹಾರಿನ ದೇವಘಡಕ್ಕೆ ಸ್ಥಳಾಂತರಗೊಂಡಾಗ, ವಿಭಿನ್ನ ಹಿನ್ನೆಲೆಯ ಅನೇಕ ಅಮೆರಿಕನ್ನರು ಅವರನ್ನು ಭೇಟಿಯಾಗಲು ಬರುತ್ತಿದ್ದರು.

ಇತರ ಧಾರ್ಮಿಕ ನಂಬಿಕೆಗಳು ಮತ್ತು ಹಿನ್ನೆಲೆಗಳಿಗೆ ಸೇರಿದ ಮಂದಿಯಂತೆಯೇ, ಅಮೆರಿಕನ್ನರು ತಾತ್ವಿಕ ಮತ್ತು ವಾಸ್ತವಿಕ ಸಮಸ್ಯೆಗಳಿಗೆ ಪರಿಹಾರವನ್ನು ಅರಸಿ ಬಂದರು. ಅಣುಯುಗದಲ್ಲಿ ಬಾಳುವ ಉಪಾಯಗಳು ಮತ್ತು ನಿಯಮಗಳನ್ನು ತಿಳಿದುಕೊಳ್ಳಲು ಬಂದ ಅವರುಗಳಿಗೆ ಥಾಕೂರ್ ಅವರ ಸರಳ ಮತ್ತು ಸಾದಾ ವರ್ತನೆಯು ಬಿಚ್ಚುಮನಸ್ಸಿನಿಂದ ಮಾತನಾಡಲು ಕರೆನೀಡಿತು. ಕೆಲವರು ಅತಿ ಉಚ್ಚ ಆದರ್ಶಗಳಿಂದ ಬಹುಶಃ ಪ್ರೇರೇಪಿತರಾಗಿರದಿದ್ದರೂ ಸಹ, ಥಾಕೂರ್ ಎಲ್ಲಾ ಪ್ರಶ್ನೆಗಳನ್ನು ಸ್ವಾಗತಿಸುತ್ತಿದ್ದರು. ತಾಳ್ಮೆಯಿಂದ ಎಲ್ಲರ ಮಾತನ್ನು ಕೇಳುತ್ತಿದ್ದರು ಮತ್ತು ಬೆಳಗಿನ ಜಾವದಿಂದ ರಾತ್ರಿಯವರೆಗೆ ನಿಶ್ಚಿಂತೆಯಾಗಿ ಉತ್ತರ ನೀಡುತ್ತಿದ್ದರು. ಮರದಡಿ ಅಥವಾ ಮೈದಾನ ಅಥವಾ ನಕ್ಷತ್ರಗಳಡಿ ಅಥವಾ ಬಿಸಿಲಿನಲ್ಲಿ ಎಲ್ಲೇ ಕುಳಿತಿದ್ದರೂ ಸಹ, ಥಾಕೂರ್ ಅವರು ಧನಿಕರು, ಬಡವರು, ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಅಥವಾ ಯೆಹೂದಿ, ಭಾವಿ ಪ್ರವೇಶಿಗಳು ಮತ್ತು ಮೋಹವಿಮೋಚಿತ ವಿವಾಹವಿಚ್ಛೇದಕರು ಮುಂತಾಗಿ ಎಲ್ಲರನ್ನು ತುಂಬುಮನದಿಂದ ಸ್ವಾಗತಿಸುತ್ತಿದ್ದರು. ಪ್ರಶ್ನೆಗಳು ಜಗತ್ತಿಗೆ ಸಂಬಂಧಪಟ್ಟಿದ್ದರೂ ಸಹ, ಅವು ಪ್ರಶ್ನೆಯನ್ನು ಕೇಳುವವರ ಕ್ರೈಸ್ತ ಹಿನ್ನೆಲೆಗೆ ಅನ್ವಯಿಸಬೇಕೆಂದು ಥಾಕೂರ್ ಸದಾ ಒತ್ತಾಯಿಸುತ್ತಿದ್ದರು.

ಥಾಕೂರ್ ಅವರ ಉತ್ತರಗಳು ಒಬ್ಬನೇ ಅಮೆರಿಕನ್‌ಗಾಗಿ ನಿರ್ದಿಷ್ಟವಾಗಿ ಉದ್ದೇಶಿತವಾಗಿದ್ದರೂ ಸಹ, ಅವು ವ್ಯಾಪಕ ಉಪಯೋಗವನ್ನು ಹೊಂದಿದ್ದವು ಎನ್ನಬಹುದಾಗಿದೆ. ಸಮಕಾಲೀನ ವಿಷಯಗಳಿಗೆ ಅನ್ವರ್ಥವಾಗಿದ್ದವು ಎಂದು ಭಾವಿಸಲಾದವುಗಳನ್ನು ಈ ಕಿರುಪುಸ್ತಕದಲ್ಲಿ ಒಗ್ಗೂಡಿಲಾಗಿದೆ. ಇದರಲ್ಲಿ ಒಳಪಟ್ಟಿದ್ದ ಜನರನ್ನು ಉದ್ದೇಶಪೂರ್ವಕವಾಗಿ ಅನಾಮಧೇಯಗೊಳಿಸಲಾಗಿದೆ. ಅವರುಗಳು ಇದನ್ನು ಬಯಸಿದ್ದರು ಮತ್ತು ಇದು ಥಾಕೂರ್ ಅವರ ಪರಿಕಲ್ಪನೆಗಳಿಗೆ ಹೆಚ್ಚಿನ ಕೊಡುಗೆ ಸಲ್ಲಿಸಲಿಲ್ಲ ಎನ್ನುವ ಕಾರಣಗಳಿಂದಾಗಿ. ಪ್ರಶ್ನೆ ಕೇಳಿದವರಲ್ಲಿ ಒಬ್ಬ ಪತ್ರಕರ್ತ, ಒಬ್ಬ ನಿವೃತ್ತ ಶಾಲಾ –ಅಧ್ಯಾಪಕ, ಒಬ್ಬ ಪ್ರೊಫೆಸರ್, ಈ ಮೊದಲು ವಿವಾಹವಿಚ್ಛೇದನ ಪಡೆದಿದ್ದ ಗಂಡಸು ಮತ್ತು ಹೆಂಗಸು, ಮಧ್ಯ ವಯಸ್ಸಿನ ಕೈಗಾರಿಕೋದ್ಯಮಿ ಮತ್ತು ಅವರ ಪತ್ನಿ ಹಾಗೂ (ಅಮೆರಿಕಾದ) ಮಿಡ್–ವೆಸ್ಟರ್ನ್ ವಿಶ್ವವಿದ್ಯಾಲಯದ ಒಬ್ಬ ಇತ್ತೀಚಿನ ಪದವೀಧರ ಸೇರಿದ್ದರು ಎಂದರೆ ಸಾಕು. ಇವರುಗಳ ಪೈಕಿ ಮೂವರು ಪ್ರಾಟೆಸ್ಟೆಂಟ್ ಗುಂಪನ್ನೂ, ಒಬ್ಬರು ಯೆಹೂದಿ ಸಮುದಾಯವನ್ನೂ, ಇಬ್ಬರು ರೋಮನ್ ಕ್ಯಾಥೋಲಿಕ್‌ರನ್ನೂ ಪ್ರತಿನಿಧಿಸಿದ್ದರು. ಇವರೆಲ್ಲರೂ ಮಧ್ಯಮ ಮತ್ತು ಶ್ರೀಮಂತ ವರ್ಗಗಳಿಗೆ ಸೇರಿದವರಾಗಿದ್ದರಿಂದ, ಅಮೆರಿಕಾವನ್ನು ಸಂಪೂರ್ಣವಾಗಿ ಪ್ರತಿನಿಧಿಸಿದ್ದರು ಎಂದು ಹೇಳಲಾಗದು. ಆದರೂ, ಅವರ ಪ್ರಶ್ನೆಗಳು ಇಂದಿನ ಎಲ್ಲಾ ವಯಸ್ಸುಗಳ

ಮತ್ತು ವರ್ಗಗಳ ಅಮೆರಿಕನ್ನರಿಗೆ ಸಂಬಂಧಪಟ್ಟಿದಂತೆ ತೋರಿಬಂದವು.

ಠಾಕೂರ್ ಅವರ ಉತ್ತರಗಳು ಆಡುಭಾಷೆಯ ಬಂಗಾಳಿಯಲ್ಲಿದ್ದರೂ ಸಹ, ಅವರು ಬಹಳ ಸಲ, ಜೋಪಾನವಾಗಿ ತೂಕ ಮಾಡಿದ ಮತ್ತು ಅನುರಣನ ಆಂಗ್ಲದಲ್ಲಿ ತಮ್ಮ ಹೇಳಿಕೆಯನ್ನು ಕೊನೆಗೊಳಿಸುತ್ತಿದ್ದರು. ಸುಲಭ ಓದುವಿಕೆಗಾಗಿ ಇವೆರಡನ್ನೂ ಪ್ರತ್ಯೇಕಗೊಳಿಸಿಲ್ಲ. ಮೂಲ ದಾಖಲೆಯಲ್ಲಿ ಆಸಕ್ತಿಯುಳ್ಳವರಿಗೆ ಇದು ಸತ್ಸಂಗದಲ್ಲಿ ಲಭ್ಯವಿದೆ. ಆಧುನಿಕ ಅಮೆರಿಕನ್ ಮದುವೆಗಳು, ವಿಚ್ಛೇದನದ ದುರಂತಮಯ ಪರಿಣಾಮಗಳು ಹಾಗೂ ಸಾಂಪ್ರದಾಯಿಕ ಕ್ರೈಸ್ತ ನಂಬಿಕೆಗಳೊಳಗೆ ಒಳಪಟ್ಟಿರಬಹುದಾದ ಪರಿಹಾರಗಳು ಮತ್ತು ತಕ್ಷಣದ ವಾತಾವರಣ – ಈ ವಿಷಯಗಳನ್ನು ಮೊದಲನೆಯ ಅಧ್ಯಾಯದಲ್ಲಿ ಒಳಪಡಿಸಲಾಗಿದೆ.

ಜೀವವಿಜ್ಞಾನದ ಪ್ರೊಫೆಸರ್ ಒಬ್ಬರಿಂದ ಉತ್ತೇಜಿತವಾದ ಎರಡನೆಯ ಅಧ್ಯಾಯವು ಸುಸಂತಾನ ಮತ್ತು ಸಹವರ್ತನಶೀಲ ವಿವಾಹಗಳಿಗಾಗಿ ಇದನ್ನು ಬಳಸಬಹುದಾದ ಸಾಧ್ಯತೆಗಳನ್ನು ಚರ್ಚಿಸುತ್ತದೆ.

ಈ ಕಿರುಪುಸ್ತಕವು ಪ್ರವಾದಿಗಳ ನ್ಯೂನರಹಿತ ವರ್ತನೆ ಕುರಿತಂತೆ ಮಾಡಲಾಗುವ ಅಸಾಧ್ಯ ಒತ್ತಾಯಗಳ ಮೇಲಿನ ಪ್ರಶ್ನೆಗಳು ಮತ್ತು ಇವುಗಳನ್ನು ಈಡೇರಿಸುವಲ್ಲಿ ಯಾವುದೇ ವಾಸ್ತವಿಕ ಕಾರ್ಯ ವಿಧಾನದ ಅಭಾವದ ಬಗ್ಗೆ ಚರ್ಚಿಸಿ ಮುಕ್ತಾಯಗೊಳ್ಳುತ್ತದೆ. ಆದ್ದರಿಂದಲೇ, ೧೯೫೫ರಲ್ಲಿ ಜರುಗಿದ ಕೆಲವೇ ದಿನಗಳ ಸಂವಾದದ ಈ ದಾಖಲೆಯನ್ನು ಸಂಕಲಿಸುವಲ್ಲಿ, ಹಲವಾರು ಅಂಶಗಳು ಪ್ರಸ್ತಾಪವಾಗಿಲ್ಲವೆಂದು ತೋರಿದರೂ ಸಹ, ಮದುವೆ, ಸುಸಂತಾನ, ಸಂಪ್ರದಾಯ, ಧರ್ಮ, ಪ್ರಾಟೆಸ್ಟೆಂಟ್ ಪಂಥ, ಕ್ಯಾಥೋಲಿಕ್ ಪಂಥ, ಪ್ರವಾದಿಗಳು ಮತ್ತು ಭಕ್ತಿಯತ್ತ ಠಾಕೂರ್ ಅವರ ಅಭಿಪ್ರಾಯಗಳು ಮತ್ತು ನಿಲುವುಗಳ ಬಗ್ಗೆ ಓದುಗರಿಗೆ ಒಂದು ಇಣಕು ನೋಟ ಸಿಗಬಹುದು.

ಓದುಗರ ಸ್ವಂತ ಸಾಂಪ್ರದಾಯಿಕ ನಂಬಿಕೆಗಳನ್ನು ಪರಿಶುದ್ಧಗೊಳಿಸಿ, ಪುನರುಜ್ಜೀವನಗೊಳಿಸುವಲ್ಲಿ ಠಾಕೂರ್ ಅವರ ಅನಿಸಿಕೆಗಳು ನೆರವಾದಲ್ಲಿ ಈ ಪುಸ್ತಕದ ಉದ್ದೇಶ ಸಂಪನ್ನವಾಗುತ್ತದೆ.

ಪ್ರಬುದ್ಧವಾದರೂ ಠಾಕೂರ್ ಅವರ ವಾಸ್ತವಿಕ ವ್ಯಕ್ತಿತ್ವವು, ನಿರುಪಯೋಗ ಮತ್ತು ಸಿನಿಕತೆಯ ಧೂಳಿನ ಕಾರಣ ಮರೆಯಾಗಿರುವ ಆದರ್ಶಗಳಿಗೆ ಮರು–ಚೇತನ ನೀಡುವಲ್ಲಿ ಸಹಾಯಕವಾದಲ್ಲಿ ಈ ಪ್ರಶಂಸೆ ನಿಜಕ್ಕೂ ಠಾಕೂರ್ ಅವರಿಗೆ ಸಲ್ಲುತ್ತದೆ. ಇದರಲ್ಲಿನ ಲೋಪದೋಷಗಳಿಗೆ ನಾನು ಮಾತ್ರ ಹೊಣೆ.

ಅಂಚೆ ಕಚೇರಿ ಸತ್ಸಂಗ್, ದೇವಘಡ (ಎಸ್ ಪಿ)
ಬಿಹಾರ

**ರೇ ಹೌಸರ್‌ಮ್ಯಾನ್**



## ಪರಿವಿಡಿ


| | | |
|---|---|---|
| | ಮೊದಲ ಮಾತು | v |
| | ಶುಭಾಕಾಂಕ್ಷೆ | vi |
| | ಪ್ರಾಸ್ತಾವಿಕ ನುಡಿ | viii |
| | ಪೀಠಿಕೆ | x |
| | ಅರಿಕೆ | xvi |
| | ಮೂಲ ಸಂಪಾದಕರ ಪ್ರಸ್ತಾವನೆ | xvii |
| | ಕೃಜ್ಞತೆಗಳು | xviii |
| | ಮುನ್ನುಡಿ : ರೇ ಹೌಸರ್‌ಮ್ಯಾನ್ | xix |
| ೧. | ಮದುವೆ ಮತ್ತು ಮೌಲ್ಯಗಳ ಬಗ್ಗೆ | ೧ |
| ೨. | ಜೀವವಿಜ್ಞಾನ ಮತ್ತು ಜೀವಿಗಳ ಬಗ್ಗೆ | ೯ |
| ೩. | ಪ್ರಾಟೆಸ್ಟೆಂಟಿಸಮ್ : ಅಸಾಂಪ್ರದಾಯಿಕ ಮತವೇ ಅಥವಾ ಅತ್ಯುತ್ತಮ ನಂಬಿಕೆಯೇ | ೧೯ |
| ೪. | ಪೋಪ್ : ಪ್ರಮುಖ ಅಥವಾ ಪ್ರತಿಕೂಲ | ೨೭ |
| ೫. | ಪ್ರವಾದಿಗಳು ಮತ್ತು ಭವಿಷ್ಯವಾದಿಗಳ ಬಗ್ಗೆ | ೩೬ |
| ೬. | ಭಕ್ತಿ – ಒಂದು ಕಾರ್ಯಸಾಧ್ಯ ವಿಧಾನ | ೪೨ |

Blank Page



# ಸತ್ಯಾನ್ವೇಷಣೆಗೆ ಉತ್ತರ

# ೧. ಮದುವೆ ಮತ್ತು ಮೌಲ್ಯಗಳ ಬಗ್ಗೆ

ಠಾಕೂರ್ ಅವರನ್ನು ಭೇಟಿಯಾಗಲು ಅಮೆರಿಕನ್ನರು ಬಂದಾಗ, ಅವರು ಬೊರಲ್ ಬಂಗಲೆಯ ಅಂಗಳದಲ್ಲಿ ಜನರ ಗುಂಪಿನ ಮಧ್ಯೆ ಕುಳಿತಿದ್ದರು. ಅವರ ಪಕ್ಕದಲ್ಲಿನ ಬೆಂಚಿನ ಮೇಲೆ ಇಡಲಾಗಿದ್ದ ಒಂದು ಪುಟ್ಟ ಕಂದೀಲು ಅವರುಗಳ ಸುತ್ತಲೂ ಪ್ರಕಾಶವನ್ನು ಚೆಲ್ಲುತ್ತಿತ್ತು. ಭೇಟಿಗರು ಆಸೀನರಾಗಿ ಅನೌಪಚಾರಿಕ ಪರಿಚಯಗಳಾದ ನಂತರ, ಅವರ ಪೈಕಿ ಒಬ್ಬರು ಮೊದಲು ಮಾತನಾಡಿ, “ಠಾಕೂರ್ ಅವರೇ, ವಿಜ್ಞಾನವು ಮಾನವರಿಗೆ ಪ್ರಕೃತಿಯ ವಿರುದ್ಧ ಮೇಲುಗೈ ಒದಗಿಸಿದೆಯಾದರೂ, ಅದನ್ನು ಸೂಕ್ತವಾಗಿ ಬಳಸಿಕೊಳ್ಳುವ ವಿವೇಕವನ್ನು ಕೊಟ್ಟಿಲ್ಲ. ಇಂದಿನ ದಿನಗಳಲ್ಲಿ ಮನುಷ್ಯನು ನೈತಿಕ ಬಲವನ್ನು ಸರಿಸಮಾನವಾಗಿ ಬೆಳೆಸಿಕೊಳ್ಳದಿದ್ದಲ್ಲಿ, ಅವನು ವಿನಾಶಕ್ಕೆ ತುತ್ತಾಗುತ್ತಾನೆ.”

“ನನ್ನ ಅಭಿಪ್ರಾಯದಲ್ಲಿ ಪ್ರೀತಿಯೆನ್ನುವುದು, ಪ್ರೀತಿಯಲ್ಲಿನ ಎಲ್ಲಾ ಕ್ಲಿಷ್ಟತೆಗಳನ್ನು ಕರಗಿಸುವಾಗ, ನೈತಿಕ ನಿಯಮಗಳತ್ತ ನಿಷ್ಠೆಯು ಸ್ವಯಂಪ್ರೇರಿತವಾಗಿರುತ್ತದೆ. ಆದರೂ ಪ್ರೀತಿ ಮತ್ತು ಭೋಗಾಪೇಕ್ಷೆಯ ನಡುವೆ ತೊಳಲಾಡಿದಾಗ ಪ್ರೀತಿ ಕಣ್ಮರೆಯಾಗುತ್ತದೆ, ಸಂದಿಗ್ಧತೆಯಡಿ ತತ್ತರಿಸುತ್ತದೆ ಹಾಗೂ ಸಂಪೂರ್ಣ ಅವ್ಯವಸ್ಥೆಯ, ಆತ್ಮಹತ್ಯಾಕಾರಕ ಸಮಾಜವನ್ನು ಕಲ್ಪಿಸಿದಾಗ ದುರ್ಗತಿ ಮುನ್ನಡೆಯುತ್ತದೆ,” ಎಂದು ಠಾಕೂರ್ ತಮ್ಮ ಮಾತನ್ನು ಆರಂಭಿಸಿದರು.

“ಪ್ರೀತಿ ಮತ್ತು ಭೋಗಾಪೇಕ್ಷೆಯ ನಡುವಣ ವ್ಯತ್ಯಾವೇನು, ಠಾಕೂರ್?”

ಠಾಕೂರ್ ಉತ್ತರಿಸಿದರು, “ಪ್ರೀತಿಯ ಅನಿವಾರ್ಯ ಆವಶ್ಯಕತೆಯೆಂದರೆ, ನನ್ನ ಪ್ರಕಾರ, ಕೊಡುವ ಮನಸ್ಸು. ಇದರ ಸಂತೃಪ್ತಿ ಕೊಡುವುದರಲ್ಲಿ ಮಾತ್ರ ಅಡಗಿದೆ. ಇದಕ್ಕೂ ಕೊಟ್ಟುಕೊಡುವ ವ್ಯಾಪಾರ ಧೋರಣೆಗೂ ಯಾವುದೇ ಸಂಬಂಧವಿಲ್ಲ. ಇದರಲ್ಲಿ ಯಾವುದೇ ನಿರೀಕ್ಷೆಗಳಿಲ್ಲ, ಯಾವುದೇ ಪ್ರತಿಫಲದ ಆಶಯವಿಲ್ಲ, ಭೋಗಾಪೇಕ್ಷೆ ಇದಕ್ಕೆ ತದ್ವಿರುದ್ಧ. ಇದು ತೆಗೆದುಕೊಳ್ಳುವ ಧೋರಣೆಯನ್ನು ಮಾತ್ರ ಹೊಂದಿದೆ. ಇದು ಚಂಚಲ ಸ್ವಭಾವದ್ದಾಗಿದೆ (ತತ್ವನಿಷ್ಠೆಗಳಿಲ್ಲದ, ಮಾರ್ಗದರ್ಶನವಿಲ್ಲದ ಶಿಕ್ಷಣದ ಅಭಾವ). ಪ್ರೀತಿಯು ಮೆಚ್ಚುಗೆ, ಸೇವೆ ಮತ್ತು ಪ್ರತಿಯೊಂದು ಪ್ರಾಮಾಣಿಕತೆಯ ನಂತರ ಕೃತಜ್ಞತೆಯ ಕೊಡುಗೆಯಾಗಿದೆ. ಭೋಗಾಪೇಕ್ಷೆಯು ಒತ್ತಾಯ, ಬದುಕಿನ ಸತ್ವಾಂಶಗಳ ಅಪಹರಣ, ಉಪೇಕ್ಷೆ

ಮತ್ತು ಜಡತೆಯ ಮೂಲಕ ಪ್ರಕಟವಾಗುತ್ತದೆ. ನರಳಿಕೆಯನ್ನು ಸೈರಿಸಲಾಗದೆ ಹಿಂಜರಿದಾಗ, ಪ್ರೀತಿಪಾತ್ರರ ಕಷ್ಟಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳದಿದ್ದಾಗ ಅಥವಾ ಎಡೆಬಿಡದೆ ಉಪಕಾರಕವಾಗಿ ಪೋಷಿಸದಿದ್ದಾಗ, ಆ ರೀತಿಯ ಪ್ರೀತಿಯು ನನ್ನ ಪ್ರಕಾರ ಸಂದೇಹಾಸ್ಪದವಾಗಿರುತ್ತದೆ, ಪೊಳ್ಳಾಗಿರುತ್ತದೆ ಮತ್ತು ಅಸ್ತಿತ್ವದ ಮೇಲೆ ಆಧಾರಗೊಂಡಿರುವುದಕ್ಕೆ ಬದಲಾಗಿ ಕಾಮೋದ್ರೇಕವಾಗಿರುತ್ತದೆ.”

“ಆದರೆ ಠಾಕೂರ್ ಅವರೇ, ಕಾಮೋದ್ರೇಕ ಎನ್ನುವುದ ಆದ್ಯರೂಪದ್ದಲ್ಲವೇ? ಇದು ಮಾನವಜೀವನದ ಮೂಲಪ್ರಕೃತಿಯಾಗಿದೆ. ಮನುಷ್ಯನು ಮೂಲ ಪಾಪದೊಂದಿಗೆ ಜನಿಸಿದ್ದಾನೆ ಎಂದು ತತ್ವ ಸಹ ಹೇಳುತ್ತದೆ.”

“ಇದರಲ್ಲಿ ಸಂದೇಹವಿಲ್ಲ” ಎಂದು ಠಾಕೂರ್ ವಿವರಣೆ ನೀಡುತ್ತಾ, “ಕಾಮೋದ್ರೇಕವು ನಿಸರ್ಗದ ಕೃಪೆಯಾಗಿದೆ. ಆದರೆ ಜೀವನದ ದುಷ್ಕರ ವಿಕಸನದಲ್ಲಿ ಮಾನವ ಅಸ್ತಿತ್ವವನ್ನು ಪೋಷಿಸಲೆಂದೇ ಇದು ಇದೆ. ಸಹವರ್ತನ ವೈವಾಹಿಕ ಜೀವನದಲ್ಲಿ ಇದರ ಯೋಗ್ಯ ಬಳಕೆಯು, ದಾಂಪತ್ಯ ಜೀವನದ ಹೊಳಪನ್ನು ಮತ್ತಷ್ಟು ಉಜ್ವಲಮಯಗೊಳಿಸುವ ಪೋಷಕ ಆಹಾರವಾಗಿದೆ. ಇದನ್ನು ಅತಿಯಾಗಿ ವ್ಯಕ್ತಪಡಿಸುವುದು ಅಥವಾ ಸಮತೋಲನವಿಲ್ಲದೆ ನಿಗ್ರಹಿಸುವುದರಿಂದ ದೇಹಕ್ಕೆ ಮತ್ತು ಮಿದುಗಳಿಗೆ ಒಂದು ಬಗೆಯ ಮಂಕುತನ ಮತ್ತು ಕೆಡುಕನ್ನು ಉಂಟುಮಾಡುತ್ತದೆ. ಆದ್ದರಿಂದಲೇ ನಾನು ನಿಮಗೆ ಹೇಳುವುದೇನೆಂದರೆ: ಯಾವಾಗಲೂ ಹಿತಮಿತವಾಗಿ ಮತ್ತು ಪ್ರಾಮಾಣಿಕವಾಗಿ ಸಂಯಮದಿಂದ ವರ್ತಿಸಿರಿ; ನಿಮ್ಮ ಕಟ್ಟಾಸೆಯು ನಿಮ್ಮ ಅಸ್ತಿತ್ವವನ್ನು ಹದಗೊಳಿಸಲಿ. ಈ ರೀತಿಯಾಗಿ ಯಾವುದೇ ದುರುಪಯೋಗವನ್ನು ತ್ಯಜಿಸಿ, ವಾಡಿಕೆಯ ಸಂಯಮದಿಂದ ವರ್ತಿಸಿದಲ್ಲಿ, ನಿಮ್ಮ ಮನೆಯಲ್ಲಿ ನಿಮಗೆ ಪರಮಾನಂದವಿರುತ್ತದೆ... ಜೊತೆಗೆ ಪುಣ್ಯಶಾಲಿ ಮಕ್ಕಳೂ ಇರುತ್ತಾರೆ.”

“ಈ ರೀತಿಯ ಸಂಯಮ ಸಾಧ್ಯವೆಂದು ನೀವು ಭಾವಿಸುತ್ತೀರಾ, ಠಾಕೂರ್ ಅವರೇ?”

“ಕಾಮೋದ್ರೇಕವು ಜೀವನದ ಸ್ವಾರಸ್ಯವನ್ನು ಹೀರಿ, ಬರಿದುಮಾಡಿದಾಗ, ವಿಚ್ಛಿದ್ರತೆಯು ಅಸ್ತಿತ್ವವನ್ನು ನಾಶಮಾಡುತ್ತದೆ ಮತ್ತು ಹಣೆಬರಹವು ಸಂಕೋಲೆಗೆ ಸಿಲುಕಿ ಕಣ್ಣೀರಿನಿಂದ ಹೀನಾಯಗೊಳಿಸುತ್ತದೆ. ಆದರೆ ಕಾಮೋದ್ರೇಕವು ಜೀವನಕ್ಕೆ ಗಾಢಾನುರಕ್ತವಾಗಿ ಸೇವೆ ಸಲ್ಲಿಸಿ, ಅಸ್ತಿತ್ವದಲ್ಲಿ ಮಾಡಿಕೊಳ್ಳಬೇಕಾದ ಹೊಂದಾಣಿಕೆಯನ್ನು ಅರ್ಥಪೂರ್ಣಗೊಳಿಸಿದಲ್ಲಿ, ಆಗ ಆ ಒಲವು ಪ್ರೀತಿಯಿಂದ ತೋಯ್ದುಹೋಗಿ, ನಿಮ್ಮ ಸ್ವಂತ ಮತ್ತು ಇತರರ ಬಾಳಿಗೆ ಸಕ್ರಿಯ ಪರಮಾನಂದವನ್ನು ಕಲ್ಪಿಸುತ್ತದೆ. ದೈವಾನುಗ್ರಹ ಮುಗುಳುನಗುತ್ತಾ ನಿಮ್ಮನ್ನು ಅಪ್ಪಿಕೊಳ್ಳಲು ತನ್ನ ಕೃಪಾಯುಕ್ತ ತೋಳುಗಳನ್ನು ಚಾಚುತ್ತದೆ. ಆಗ ಇಂತಹ ಸಂಯಮ ಸಾಧ್ಯವಾಗುತ್ತದೆ. ಎಂದರೆ



ನಿಮ್ಮ ಪ್ರೀತಿಪಾತ್ರರ ಬಗ್ಗೆ ಹಾತೊರೆತ ಮತ್ತು ಆಸಕ್ತಿಯಿಂದ ನೀವು ಆಲೋಚಿಸಲಾಗುವುದಿಲ್ಲವೆ? ಇದು ನಿಮ್ಮ ಸಾಮರ್ಥ್ಯವನ್ನು ಉತ್ತೇಜಿಸಿ, ಪರಕೀಯವಾದ ಯಾವುದೇ ಸಂಪರ್ಕವನ್ನು ಹಿಮ್ಮೆಟ್ಟಿಸುತ್ತದೆ. ಅವ್ಯಭಿಚಾರತೆ ನಿಮ್ಮ ಮನಸ್ಸಿನಲ್ಲಿ ಪ್ರಜ್ವಲಿಸುತ್ತದೆ, ನಿಮ್ಮ ದೇಹದಲ್ಲಿ ವಾಸಿಸುತ್ತದೆ ಮತ್ತು ನಿಮ್ಮ ಪ್ರತಿಯೊಂದು ಮಾತು ಯಾ ಕಾರ್ಯದಲ್ಲಿ ಒಂದು ತೇಜೋಮಯ ಪವಿತ್ರ ಭಾವನೆ ಪ್ರತಿಧ್ವನಿಸುತ್ತದೆ. ಪರಿಣಾಮವಾಗಿ ಜೀವನವಿಡೀ ಒಂದು ರೋಮಾಂಚಕ ಪ್ರೀತಿಯುತ ಸ್ಪರ್ಶ ಮೂಡಿ, ನೀವು ನಿಮ್ಮ ಮಕ್ಕಳಿಗೆ ಮತ್ತು ಸಮಾಜಕ್ಕೆ ಪೋಷಣೆ, ಆಶಯ ಮತ್ತು ಕಾರುಣ್ಯದ ಪ್ರತೀಕವಾಗುತ್ತೀರಿ.”

ಉಪಸ್ಥಿತರ ಪೈಕಿ ಓರ್ವ ಮಹಿಳೆ ಅಪನಂಬಿಕೆಯಿಂದ ತಲೆ ಅಲ್ಲಾಡಿಸಿ, “ಆದರೆ ಒಂದು ಮಾತ್ರ ಬಹಳ ಅನ್ಯಾಯವಾಗಿ ತೋರುತ್ತದೆ., ಠಾಕೂರ್. ಸಮಾಜವು ಮಹಿಳೆಯಿಂದ ಅವ್ಯಭಿಚಾರತೆಯನ್ನು ನಿರೀಕ್ಷಿಸುತ್ತದೆಯಾದರೂ, ಪುರುಷರಲ್ಲಿ ಇದರ ಅಭಾವವನ್ನು ಕಡೆಗಾಣಿಸುತ್ತದೆ. ಇಂತಹ ಇಬ್ಬಗೆ ನೀತಿ ಯಾಕೆ?” ಎಂದು ಕೇಳಿದಳು.

ಠಾಕೂರ್ ಇದಕ್ಕೆ ಉತ್ತರಿಸುತ್ತಾ “ಗಂಡಸಿನಲ್ಲಿ ಸದ್ಗುಣವಿರುವುದು ನಿಸ್ಸಂದೇಹವಾಗಿ ಅಸ್ತಿತ್ವಕ್ಕೆ ಅತಿಮುಖ್ಯವಾಗಿದೆ. ಆದರೆ ಸ್ತ್ರೀಯಲ್ಲಿ ವಿಶೇಷವಾಗಿ ಅಗತ್ಯವಾಗಿರುವುದಕ್ಕೆ ಕಾರಣವೆಂದರೆ ಆಕೆ ತಾಯಿಯಾಗಿದ್ದಾಳೆ ಮತ್ತು ಜೀವನ ಸುಖಸಂತೋಷ ಹಾಗೂ ಶಾಂತಿಗೆ ಜನನ ನೀಡುತ್ತಾಳೆ. ಅವಳೇ ಪಿತೃಮೂಲದ ಅಸ್ತಿತ್ವ ಸ್ವರೂಪದ ಸಂಪತ್ತನ್ನು ಆರಂಭಿಸುತ್ತಾಳೆ. ಅವಳು ತನ್ನ ವಿವೇಚನಾಯುಕ್ತ ಬುದ್ಧಿವಂತಿಕೆ ಮತ್ತು ವಾತ್ಸಲ್ಯದಿಂದ ಹುರಿದುಂಬಿಸುವುದರಿಂದಲೇ ಮಕ್ಕಳು ತಮ್ಮ ತಂದೆಯಿಂದ ಪಡೆದ ಆನುವಂಶಿಕ ಉತ್ತಮ ಗುಣವೈಶಿಷ್ಟ್ಯಗಳನ್ನು ಅಳವಡಿಸಿಕೊಂಡು ಬೆಳೆಯುತ್ತಾರೆ. ಹೀಗಾಗಿ ‘ಮಾತೆ’ ಎಂದರೆ ‘ಮಾನಕ’ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಅವಳೇ ಮಗುವಿನ ವ್ಯಕ್ತಿತ್ವದ ಮಾನಕವಾಗಿದ್ದಾಳೆ.”

“ಆದರೂ ಸಹ ಪ್ರೀತಿಯ ಬಗ್ಗೆ ನಿಮ್ಮ ವಿವರಣೆಯು, ಕೊಟ್ಟುಕೊಡುವುದಕ್ಕೆ ಯಾವುದೇ ಆಸ್ಪದಮಾಡಿಕೊಡುವುದಿಲ್ಲವಲ್ಲಾ? ಇಬ್ಬರ ನಡುವೆ ವಿಶ್ವಾಸ ಮತ್ತು ನಿಷ್ಠೆ ಪರಸ್ಪರವಾಗಿರಬೇಕಲ್ಲವೇ? ಒಬ್ಬ ಪತ್ನಿಯು ಯಾವುದೇ ಪ್ರೀತಿ ಪ್ರತ್ಯುಪಕಾರಗಳಿಲ್ಲದೆ ತಾನು ಮಾತ್ರ ಸೇವೆ ಸಲ್ಲಿಸುತ್ತಾ ಪ್ರೀತಿಸುತ್ತಾ ಒಣಜೀವನ ನಡೆಸಲು ಆಗುವುದಿಲ್ಲ.”

ಠಾಕೂರ್ ಮೆಲು ಧ್ವನಿಯಲ್ಲಿ ಮಧ್ಯೆ ಮಾತನಾಡಿ, “ನನ್ನ ಭಾವನೆಯಲ್ಲಿ ಸ್ವಾರ್ಥ ನಿರೀಕ್ಷೆಗಳು, ಜೀವನದಲ್ಲಿ ಅಮಲು ತುಂಬುವುದನ್ನು ತಡೆಗಟ್ಟಿ, ಅಸ್ತಿತ್ವವೆಂಬ ಪಾತ್ರೆಯಲ್ಲಿ ಬರೇ ಕಲ್ಲುಗಳನ್ನು ತುಂಬುತ್ತವೆ. ಪ್ರೀತಿಯೆನ್ನುವುದು ಅತಿ ವಿರಳವಾಗಿ ಅನೋನ್ಯವಾಗಿರುತ್ತದೆಯಾದರೂ, ಅದಕ್ಕೆ ಚುಂಬಕ ಶಕ್ತಿಯಿದೆ. ಯಾವುದೇ

ಹೃದಯವನ್ನು ಗೆಲ್ಲುವ ಪವಿತ್ರ ಆಯುಧಗಳೆಂದರೆ ಪ್ರೀತಿ, ಅನುಕಂಪ ಮತ್ತು ಸೇವೆ – ಇವು ನಿಮ್ಮ ಪ್ರೀತಿಪಾತ್ರರ ಅಸ್ತಿತ್ವಕ್ಕೆ ಸುಸ್ಥಿತಿಯನ್ನು ಕಲ್ಪಿಸಿ ಪೋಷಿಸಬಲ್ಲದು. ಇದು ಎಷ್ಟು ಸೂಕ್ತ ಮತ್ತು ಕುಶಲ ವಿಧಾನವಾಗಿದೆಯೆಂದರೆ ಎಂದಿಗೂ ನಂಟು ಬಿಡದಂತಹ ಸುಂದರ ಬಾಂಧವ್ಯವನ್ನು ಮೂಡಿಸುತ್ತದೆ. ಆದ್ದರಿಂದಲೇ ನಾನು ಹೇಳುತ್ತೇನೆ : ನಿಮ್ಮ ಸಂಗಾತಿಯೊಂದಿಗೆ ಸದಾ ಶಾಶ್ವತ ಮತ್ತು ಮುರಿಯಲಾಗದಂತಹ ಭದ್ರತೆಯನ್ನು ಕಲ್ಪಿಸಿಕೊಳ್ಳಿರಿ ಮತ್ತು ನೀವಿಬ್ಬರೂ ನಿಮ್ಮ ಭಗವಂತನಿಗೆ ಏಕಕೇಂದ್ರಕ ಮತ್ತು ಸತತ ಸೇವೆಯ ಮೂಲಕ ಶರಣಾಗಿರಿ."

ಒಬ್ಬ ಭಾರತೀಯ ಕೇಳುಗನು ಮಧ್ಯೆ ಮಾತನಾಡಿ, "ಥಾಕೂರ್, ಜನರು ಭಗವಂತನಿಗೆ ಶರಣಾದಾಗ ಒಂದು ಸಮಸ್ಯೆ ತಲೆದೋರುತ್ತದೆ. ವೈವಾಹಿಕ ಸಂಬಂಧಗಳ ಬಗ್ಗೆ ಅನೇಕಾನೇಕ ವಿರುದ್ಧ ಘೋಷಣೆಗಳಿವೆ. ಕ್ರಿಸ್ತನು ಏಕವಿವಾಹದಲ್ಲಿ ನಂಬಿದ್ದನೇ ಹೊರತು, ವಿವಾಹವಿಚ್ಛೇದನವನ್ನು ಸಮರ್ಥಿಸಲಿಲ್ಲ. ಮೋಸಸ್ ಮತ್ತು ಮೊಹಮದ್ ಬಹು–ವಿವಾಹ ಮತ್ತು ವಿಚ್ಛೇದನವನ್ನು ಪ್ರತಿಪಾದಿಸಿದರು. ಹಾಗೂ ಬೌದ್ಧ ಧರ್ಮದವರು ಬಹುಪತಿತ್ವ ಪದ್ಧತಿಯನ್ನು ನಂಬುತ್ತಾರೆ. ಎಲ್ಲರೂ ವಿಭಿನ್ನ; ಆದರೂ ತಮ್ಮ ವಿಧಾನವೇ ಅಸ್ತಿತ್ವಕ್ಕೆ ಪೂರಕವಾಗಿದೆಯೆಂದು ನಂಬುತ್ತಾರೆ."

ಥಾಕೂರ್ ಇದನ್ನು ಒಪ್ಪಿಕೊಳ್ಳಲಿಲ್ಲ. "ಪ್ರತಿ ಭಗವಂತನು ಜೀವನ ಮತ್ತು ಬೆಳವಣಿಗೆಗಾಗಿ ಇದ್ದಾನೆ. ಅವನು ಆಧ್ಯಾತ್ಮಿಕ ಸಾಧನೆಗೆ ಆಹಾರವಾಗಿದ್ದಾನೆ ಮತ್ತು ಇದನ್ನು ಜನರಿಗೆ ಬೋಧಿಸುತ್ತಾನೆ. ಎಲ್ಲಾ ಪ್ರವಾದಿಗಳು ಯುಗದ ಅಗತ್ಯಗಳಿಗೆ ಅನುಗುಣವಾಗಿ ಈ ಸತ್ವದ ಪ್ರತೀಕಗಳಾಗಿದ್ದಾರೆ. ಆದ್ದರಿಂದಲೇ ಸಹವರ್ತನೆ, ಸಂತೃಪ್ತಿ ಮತ್ತು ಸದ್ಗುಣವಿರುವ ಏಕವಿವಾಹ ಪದ್ಧತಿಯು ಗಂಡು ಮತ್ತು ಹೆಣ್ಣನ್ನು ಸಂತುಷ್ಟವಾಗಿ ಬೆಸೆದು ಮಾನಸಿಕ ಮತ್ತು ದೈವಿಕ ಸಂಪ್ರದಾಯಕ್ಕೆ ಜನನ ನೀಡುವುದರಿಂದ ಇದು ಅನೇಕರನ್ನು ಉದ್ಧಾರ ಮಾಡುವ ಸಮಾಜದ ಬೃಹತ್ ಪರಿಶುದ್ಧ ಕೊಡುಗೆಯಾಗಿದೆ...."

"..ಆದರೆ, ಥಾಕೂರ್ ಎಲ್ಲರ ತತ್ವವೂ ಒಂದೇ ಆಗಿದ್ದಲ್ಲಿ, ಯಾಕೆ ಮೋಸಸ್ ಮತ್ತು ಮೊಹಮದ್ ವಿಚ್ಛೇದನವನ್ನು ಅನುಮತಿಸಿ, ಬಹುವಿವಾಹವನ್ನು ಬೆಂಬಲಿಸಿದರೆಂದು ಹೇಳಬಲ್ಲಿರಾ?" ಎನ್ನುವುದು ಆ ಯುವಕನ ಪ್ರಶ್ನೆಯಾಗಿತ್ತು.

ಥಾಕೂರ್ ವಿವರಿಸುತ್ತಾ "ಮನುಷ್ಯನಿಗೆ ಅನುಮತಿಸಲಾದ ಎಲ್ಲಾ ಕಾನೂನುಗಳ ಪೈಕಿ ಅಲ್ಲಾ ಅತಿಯಾಗಿ ದ್ವೇಷಿಸುವ ಕಾನೂನೆಂದರೆ ವಿಚ್ಛೇದನ ಎಂದು ಹಜ್ರತ್ ರಸೂಲ್ ಹೇಳಿದ್ದಾರೆ. ಮತ್ತು ನನ್ನ ಪ್ರಕಾರ 'ಅಲ್ಲಾ ದ್ವೇಷಿಸುತ್ತಾರೆ' ಎಂದಲ್ಲಿ 'ಅಸ್ತಿತ್ವ ದ್ವೇಷಿಸುತ್ತದೆ' ಎಂದು ಅರ್ಥ. ಏಕೆಂದರೆ ಇದು ಜೀವನಕ್ಕೆ ಮತ್ತು ಬೆಳವಣಿಗೆಗೆ ವಿರುದ್ಧವಾಗಿದೆ. ಇದಲ್ಲದೆ, ಏಸು ಪರಮಾತ್ಮನು ಸಹ ಹೇಳಿರುವುದೇನೆಂದರೆ.... 'ಮೋಸಸ್ ವಿಚ್ಛೇದನವನ್ನು ಅನುಮತಿಸಿದ್ದಕ್ಕೆ ಕಾರಣವೆಂದರೆ



ನಿಮ್ಮ ಮನಗಳಲ್ಲಿನ ಕಠಿಣತೆಯಿಂದಾಗಿಯೇ ಹೊರತು, ಆರಂಭದಿಂದಲೂ ಇದು ಹೀಗೆ ಇತ್ತು ಎನ್ನುವುದಕ್ಕಾಗಿ ಇಲ್ಲ....' ಕಠಿಣ ಹೃದಯ ಎಂದಾಗ ಭಾವೋದ್ರೇಕದ ಕಠಿಣತೆ ಎಂದು ನಾನು ಭಾವಿಸುತ್ತೇನೆ" ಎಂದರು. "ಆದರೆ ಬಹುವಿವಾಹದ ಬಗ್ಗೆ ಏನು ಹೇಳುತ್ತೀರಿ, ಥಾಕೂರ್? ಇದು ಸಹ ವಾಸ್ತವಿಕವಾಗಿ ಒಂದೇ ಆಗಿದೆಯಲ್ಲವೇ?"

ಥಾಕೂರ್ ಇದಕ್ಕೆ ಒಪ್ಪದೇ ತಲೆಯಾಡಿಸಿದರು. "ಅತಿಯಾದ ಆಘಾತ ಮತ್ತು ಸಮತೋಲನವಿಲ್ಲದ ಚಪಲತೆಯಿಂದಾಗಿ ವಿಚ್ಛೇದಿತರು ಮತ್ತು ವ್ಯಭಿಚಾರಿಗಳು ಬಹಳವಾಗಿ ಕ್ರೂರ, ಕಠಿಣ ಮನಸ್ಸಿನ ಹಾಗೂ ವಿವಿಧ ಗೀಳುಗಳಿರುವ ಮಕ್ಕಳಿಗೆ ಜನನ ನೀಡುತ್ತಾರೆ. ಸಹವರ್ತನೆಯ ಮತ್ತು ಪೂರ್ವ ಆಯ್ಕೆಯ ಬಹುವಿವಾಹವು ಶ್ರೇಷ್ಠ ಬುದ್ಧಿವಂತಿಕೆ ಇರುವ ಗುಣಲಕ್ಷಣಗಳಿಗೆ ಜನನ ನೀಡುವುದರಿಂದ ಇದು ಹೆಚ್ಚು ಪ್ರೋತ್ಸಾಹಕವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ."

"ಪೂರ್ವ – ಆಯ್ಕೆಯ ಬಹುವಿವಾಹ ಎಂದರೇನು?"

"ಪೂರ್ವ – ಆಯ್ಕೆಯ ಬಹುವಿವಾಹ ಮಾನವ ಕುಲದ ಜನಕನಾಗಿದ್ದ ಏಬ್ರಹಾಮ್, ಸಾರಾಳ ಒತ್ತಾಯದ ಮೇರೆಗೆ ಹಾಗರ್ ಎನ್ನುವ ಹೆಣ್ಣಾಳನ್ನು ಮದುವೆಯಾದಾಗ ಜಾರಿಗೆ ಬಂದದ ಆಚರಣೆಯೆಂದು ನಾನು ಅಭಿಪ್ರಾಯ ಪಡುತ್ತೇನೆ. ತನ್ನ ಪತ್ನಿಯ ಒತ್ತಾಯಕ್ಕೆ ಮಣಿದು ಉಚ್ಚಕುಲದ ಒಬ್ಬ ಗಂಡಸು ಮತ್ತು ಕೆಳ ದರ್ಜೆಯ ಒಬ್ಬ ಸ್ತ್ರೀ, ವಿವಾಹದ ಪವಿತ್ರ ಬಂಧನಕ್ಕೆ ಒಳಪಟ್ಟಾಗ, ಅದು ಪೂರ್ವ–ಆಯ್ಕೆಯ ಬಹುವಿವಾಹವಾಗಿರುತ್ತದೆ. ಮತ್ತು ಬಹುತೇಕವಾಗಿ ಅಸ್ತಿತ್ವದ ಅಗತ್ಯಗಳನ್ನು ಈಡೇರಿಸಿ ಉದಾತ್ತವಾಗುತ್ತದೆ."

"ಆದರೆ ಥಾಕೂರ್, ಸಾರಾ ಅಂತಿಮವಾಗಿ ಹಾಗರ್ ಬಗ್ಗೆ ಅಸೂಯೆಪಟ್ಟು ಅವಳನ್ನು ಹೊರಗೆ ಅಟ್ಟಿದಳೆಂದು ಹೇಳಲಾಗುತ್ತದೆ. ಇದು ಹೇಗೆ ಯಾರದೇ ಅಸ್ತಿತ್ವವನ್ನು ಉದಾತ್ತಗೊಳಿಸುತ್ತದೆ ಎಂದು ನನಗೆ ಕಂಡುಬರುತ್ತಿಲ್ಲ" ಎಂದು ಯುವ ಅಮೇರಿಕನ್ ಮಹಿಳೆ ಆಕ್ಷೇಪಿಸಿದಳು. ಥಾಕೂರ್ ಮೃದುವಾಗಿ ಮುಗುಳುನಗುತ್ತಾ ಹೇಳಿದರು, "ಆದರೆ ಸಾರಾಳ ಮಗ ಜೇಕಬ್‌ನಿಂದ ದೈವಾನುಗ್ರಹವಾದ ಕ್ರಿಸ್ತನು ಹುಟ್ಟಿದನು. ಹಾಗರ್‌ಳ ಮಗ ಇಸ್ಮೈಲ್‌ನಿಂದ ಸತ್ವಪೂರ್ಣ ಉಳಿವಿನ ಸೇವಕನಾದ ಮೊಹಮದ್ ಪ್ರಾಪ್ತನಾದನು. ಇವರಿಬ್ಬರೂ ದೈವಾನುಗ್ರಹದ ದಿವ್ಯ ಪ್ರಭೆಯನ್ನು ವೃದ್ಧಿಸಲಿಲ್ಲವೇ ? ಇವರಿಬ್ಬರೂ ಸ್ವರ್ಗದ ಅಸಾಮಾನ್ಯ ಪರಂಪರೆಯ ಪ್ರಾರ್ಥನೆಯಾಗಿರಲಿಲ್ಲವೇ?"

ಮತ್ತೊಬ್ಬ ಯುವಕ ಮಧ್ಯೆ ಮಾತನಾಡಿ, "ಏನೇ ಆದರೂ ಥಾಕೂರ್, ಗತ ಐತಿಹ್ಯಘಟನೆಗಳ ಬಗ್ಗೆ ನಮಗೆ ತಕ್ಷಣದ ವರ್ತಮಾನದಷ್ಟು ಕಾಳಜಿ ಇಲ್ಲ. ಇಂದು ಬಹುತೇಕವಾಗಿ ಎಲ್ಲಾ ದೇಶಗಳಲ್ಲೂ ಸಿವಿಲ್ ಕಾನೂನು ಮತ್ತು ಅನೇಕ ದೇಶಗಳಲ್ಲಿ

ಚರ್ಚು ಶಾಸನಗಳು ಏಕವಿವಾಹ ಮತ್ತು ವಿಚ್ಛೇದನವನ್ನು ಮಾನ್ಯ ಮಾಡುತ್ತವೆ" ಎಂದನು.

ಥಾಕೂರ್ ಇದಕ್ಕೆ ಉತ್ತರಿಸುತ್ತಾ "ಆದರೂ ಸಹ ನನ್ನ ಅಭಿಪ್ರಾಯದಲ್ಲಿ ಸದ್ಗುಣ, ಸಂತೃಪ್ತ ಮತ್ತು ಸಹವರ್ತನೆಯುಳ್ಳ ಏಕವಿವಾಹವು, ಸ್ವರ್ಗವು ಅಪಾರವಾಗಿ ಮೆಚ್ಚುವ ಪರಮಾನಂದವಾಗಿರುತ್ತದೆ. ಏಕೆಂದರೆ ಇದು ಮಹಾನ್ ಸಂತತಿಯ ಜನನವನ್ನು ಕಟ್ಟಳೆಯುಕ್ತಗೊಳಿಸಿ, ಪೋಷಿಸುತ್ತದೆ. ಇದಕ್ಕೆ ಪ್ರತಿಯಾಗಿ ವಿಚ್ಛೇದನವು ಯಾವಾಗಲೂ ವಿಷಯಲಂಪಟತನಕ್ಕೆ ಕಾನೂನಿನ ಅನುಮತಿ ನೀಡುವ ಒಂದು ಸಿವಿಲ್ ಹೊಂದಾಣಿಕೆಯಾಗಿರುತ್ತದೆ. ಪರಿಶುದ್ಧ ಜೀವನಕ್ಕೆ ಬದಲಾಗಿ ದುರದೃಷ್ಟ ಸಂತತಿಯನ್ನು ಹುಟ್ಟುಹಾಕುವ ಚಪಲವನ್ನು ಇದು ತೀರಿಸುತ್ತದೆ."

"ಆದರೆ ಥಾಕೂರ್, ಮಾನವೀಯತೆಯ ಸಾಮಾನ್ಯ ಆಧಾರದ ಮೇಲೆ ವಿಚ್ಛೇದನ ಅಗತ್ಯವಾಗುವ ಸಂದರ್ಭಗಳು ಅನಿವಾರ್ಯವಾಗುತ್ತವೆಯೆಂದು ನೀವು ಭಾವಿಸುವುದಿಲ್ಲವೇ? ಸಂಗಾತಿಗಳ ಪೈಕಿ ಒಬ್ಬರು ದಮನಗೊಂಡಲ್ಲಿ ಅಥವಾ ಉಪೇಕ್ಷಿಸಲ್ಪಟ್ಟಲ್ಲಿ, ಒಬ್ಬ ಪತ್ನಿ ತನ್ನ ಗಂಡನನ್ನು ಪ್ರೀತಿಸುತ್ತಿದ್ದರೂ ಸಹ, ಅವಳಿಗೆ ವಿಚ್ಛೇದನ ಬಿಟ್ಟು ಬೇರೆ ಯಾವುದೇ ಮಾರ್ಗವಿರುವುದಿಲ್ಲ."

ಥಾಕೂರ್ ಅವರ ಕಣ್ಣುಗಳು ಅಪನಂಬಿಕೆಯಿಂದ ಅರಳಿದಂತೆ ಕಂಡುಬಂದವು. "ಪ್ರೇಮವೆನ್ನುವ ಪವಿತ್ರ ಗ್ರಂಥದಲ್ಲಿ ಪ್ರೀತಿಪಾತ್ರರಿಂದ ದೂರ ಸರಿಯುವುದನ್ನು ಎಲ್ಲಾದರೂ ಓದಿದ್ದೀರಾ? ಇಲ್ಲ, ಇಲ್ಲ, ಇಲ್ಲ ! ಅನುಗ್ರಹಿತ ಪ್ರೀತಿಯು ಎಂದೂ ಪ್ರೀತಿಪಾತ್ರರ ವಿರುದ್ಧ ಯಾವುದೇ ತದ್ವಿರುದ್ಧ ಕ್ರಮವನ್ನು ಇಷ್ಟಪಡುವುದಿಲ್ಲ. ಏಕೆಂದರೆ ಪ್ರೀತಿಯು ಪ್ರತಿಯೊಂದು ಅನುಕಂಪದೊಂದಿಗೆ ಪ್ರವಹಿಸುತ್ತದೆ; ಮಿಗಿಲಾಗಿ, ಇದು ಪ್ರೀತಿಪಾತ್ರರನ್ನು ಶಾಶ್ವತ ಬಂಧನದಲ್ಲಿ ಬಂಧಿಸುತ್ತದೆ."

"ಎಂದಲ್ಲಿ ಯಾವುದೇ ಪರಿಸ್ಥಿತಿಯಲ್ಲೂ ವಿಚ್ಛೇದನವನ್ನು ನೀವು ಅನುಮೋದಿಸುವುದಿಲ್ಲವೇ? ಒಟ್ಟಾಗಿ ಬಾಳುವಾಗಲೂ ಸಹ ಅವರುಗಳಿಗಾಗಿ ಮಾತ್ರವಲ್ಲದೆ ಅವರ ಮಕ್ಕಳಿಗಾಗಿಯೂ ಘರ್ಷಣೆ ಮತ್ತು ದುಃಖ ಉಂಟಾದಲ್ಲೂ ಪರವಾಗಿಲ್ಲವೇ?"

"ಪರಿಹಾರಕ್ಕಾಗಿ ಒಂದು ತೀವ್ರ ಪ್ರಯತ್ನದ ನಂತರವೂ ಸೈರಿಸಲಾಗದಷ್ಟು ಅಸಾಮರಸ್ಯ ಮುಂದುವರೆದಲ್ಲಿ, ದೈಹಿಕ ಅಗಲಿಕೆಯು ಘರ್ಷಣೆ ಮತ್ತು ದುಃಖವನ್ನು ನಿವಾರಿಸಬಹುದು" ಎಂದು ಹೇಳಿದ ಥಾಕೂರ್ ಮುಂದುವರೆದು ಮಾತನಾಡಿ, "ಆದರೂ ಸಹ ವಿಚ್ಛೇದನವು ಮಾನವೀಯತೆಯ ವಿರುದ್ಧ ಮತ್ತು ವಿಶೇಷವಾಗಿ ಸಂತತಿಯ ವಿರುದ್ಧ ಒಂದು ಘೋರ ಅಪಮಾನವಾಗಿದೆ. ಇದು ಮನಸ್ಸನ್ನು ಕಠಿಣಗೊಳಿಸುತ್ತದೆ. ಜೀವನದಲ್ಲಿ ಮಹೋನ್ನತ ಗುಣ ಮತ್ತು ಕರುಣಾ ಭಾವವನ್ನು ಹಿಡಿತದಲ್ಲಿಟ್ಟುಕೊಳ್ಳದೆ, ಜನರು ಮತ್ತು ಅವರ ಮಕ್ಕಳನ್ನು ದಯಾಹೀನರಾಗಿಸುತ್ತದೆ.



ವಿವೇಚನೆಯ ಅಂತರಾಳದಲ್ಲಿ ಹೇಸಿಗೆಯುಕ್ತ ನೈತಿಕತೆಯನ್ನು ಬೆಳೆಸಿ ವಾತಾವರಣವನ್ನು ಕಲುಷಿತಗೊಳಿಸುತ್ತದೆ. ಆದ್ದರಿಂದಲೇ ಇದು ಪಾಪ ಎಂದು ನಾನು ಭಾವಿಸುತ್ತೇನೆ. ಒಳ್ಳೆಯತನ ಮತ್ತು ದೈವಿಕತೆಯ ಅಸ್ತಿತ್ವವನ್ನು ಬರಿದುಮಾಡುವ ಈ ಪೈಶಾಚಿಕ ಪರಿಹಾರವು ನಿಸರ್ಗದತ್ತ ಉತ್ಸಾಹದ ಆಸರೆಯನ್ನು ಕಳೆದುಕೊಳ್ಳುತ್ತದೆ."

ಅಮೆರಿಕನ್ ಹುಡುಗಿಗೆ ಹುಬ್ಬುಗಂಟಾಯಿತು. "ಥಾಕೂರ್... ಆದರೆ.... ಆದರೆ... ಈಗಾಗಲೇ ವಿಚ್ಛೇದನ ಪಡೆದಿರುವ ನಮ್ಮ ಪೈಕಿ ಕೆಲವರ ಪಾಡೇನು?... ನಮ್ಮ ಮಕ್ಕಳ ಗತಿಯೇನು... ನಾವು ದುರವಸ್ಥೆಗೆ ತುತ್ತಾಗಿದ್ದೀವಿ ಎಂದು ನೀವು ಭಾವಿಸುತ್ತೀರಾ?"

ಥಾಕೂರ್‌ರ ಕಣ್ಣಿನಲ್ಲಿ ಆಶಯ ಮಿಂಚಿತು. "ಎಲ್ಲವೂ ತೀರ್ಮಾನಿತವಾಗಿದೆ ಅಥವಾ ಯಾವುದೇ ಮನುಷ್ಯನು ದುರವಸ್ಥೆಗೆ ತುತ್ತಾಗಿದ್ದಾನೆ ಎಂದು ಆಲೋಚಿಸುವುದು, ಅನಂತನೂ, ಕರುಣಾಮಯಿಯೂ ಆದ ಭಗವಂತನನ್ನು ಕೊನೆಗಾಣಿಸುವ ಘಾತಕತನವಾಗಿರುತ್ತದೆ. ಒಳ್ಳೆಯದು ಮತ್ತು ಕೆಟ್ಟದ್ದು – ಎರಡೂ ಭೂಮಿಯ ಮೇಲೆ ಇವೆ ಎಂದು ನನಗೆ ಗೊತ್ತು. ಕೆಟ್ಟದ್ದರ ಬಗ್ಗೆ ಪ್ರಜ್ಞೆ ಇರುವ ಬಲಿಷ್ಠ ಮನವು ಒಳ್ಳೆಯತನ ವೃದ್ಧಿಯಾಗುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುತ್ತದೆ. ಆದ್ದರಿಂದಲೇ ನನ್ನ ಪ್ರಕಾರ, ವಿಚ್ಛೇದನ ಜಾರಿಯಲ್ಲಿರುವ ಸಮಾಜದಲ್ಲಿ ವೈವಾಹಿಕ ಜೀವನವನ್ನು ಅಧಾರ್ಮಿಕಗೊಳಿಸುವುದು ಮತ್ತು ಸಂಗಾತಿಗಳನ್ನು ಅವಿಶ್ವಾಸಾರ್ಹ ಆಸರೆಗಳಾಗಿಸುವುದು... ಇಂತಹ ಪ್ರಕರಣಗಳಲ್ಲಿ ಮತ್ತು ನಿರ್ದಿಷ್ಟವಾಗಿ ಈ ಮೊದಲು ವಿಚ್ಛೇದಿತರಾಗಿದ್ದ ದಂಪತಿಗಳಲ್ಲಿ ದ್ವೇಷವನ್ನು ಸ್ಥಾಪಲ್ಲಟಗೊಳಿಸಿ, ಅವರಿಬ್ಬರೂ ಪರಮಪ್ರೀತ್ಯರ್ಥನಾದ ಪರಮಾತ್ಮನತ್ತ ಪ್ರೀತಿಯಿಂದ ಬೆಸೆದು ಸಹನಶೀಲತೆ, ಅನುಕಂಪ ಮತ್ತು ತಿಳುವಳಿಕೆಯಿಂದ ಒಬ್ಬರು ಮತ್ತೊಬ್ಬರನ್ನು ಶಾಂತಗೊಳಿಸಿ, ಸುಖದುಃಖದಲ್ಲಿ ಸಮಭಾಗಿಗಳಾಗಬೇಕು. ಅಲ್ಲದೆ, ವಿಚ್ಛೇದನದ ಪರಮ ದೌರ್ಜನ್ಯವನ್ನು ಅಸಡ್ಡೆಮಾಡುವ ಸಮಯದಲ್ಲೇ, ಅವಮಾನಕರ ಹಾದರದ ಪ್ರಕರಣಗಳನ್ನು ಹೊರತುಪಡಿಸಿ, ತಮ್ಮ ಮಕ್ಕಳು ಸಹ ಇದನ್ನು ಉಪೇಕ್ಷಿಸುವಂತೆ ಕಲಿಸಬೇಕು. ತಮ್ಮ ಮಕ್ಕಳು ಅವರ ಸಂಗಾತಿಗಳನ್ನು ಎಚ್ಚರಿಕೆಯಿಂದ ಆಯ್ದುಕೊಂಡು ಮುರಿಯಲಾಗದಂತಹ ಪವಿತ್ರ ವಿವಾಹಬಂಧನದಲ್ಲಿ ಒಂದುಗೂಡುವಂತೆ ಪ್ರೇರೇಪಿಸಬೇಕು."

ಥಾಕೂರ್ ಅವರ ಮಾತು ಗಂಭೀರವಾಯಿತು. "ನಾನು ಮತ್ತೆ ಹೇಳುತ್ತೇನೆ: ಪ್ರತಿಜ್ಞೆ ಮಾಡಿರಿ! ವಿಚಲಿತರಾಗಬೇಡಿರಿ ! ಬೇರ್ಪಡಬೇಡಿರಿ.... ವಿಚ್ಛೇದಿತರಾಗಬೇಡಿರಿ. ಜೀವನವನ್ನು ಬೆಂಬಲಿಸಿರಿ ಮತ್ತು ಅದಕ್ಕೆ ಚಾಲನೆ ನೀಡಿರಿ. ಪರಸ್ಪರರ ಕಲ್ಯಾಣಕ್ಕಾಗಿ ಸಹನೆಯನ್ನು ತೋರಿಸಿರಿ ; ಒಬ್ಬರು ಮತ್ತೊಬ್ಬರನ್ನು ಸೈರಿಸಿರಿ. ನಿಮ್ಮ ಭಗವಂತನನ್ನು ಪ್ರೀತಿಸಿರಿ. ಕಾಯೇನ ವಾಚಾ ಮನಸಾ ಸಮಾಜದಲ್ಲಿ ವಿಚ್ಛೇದನವ್ಯವಸ್ಥೆಯನನ್ನು

ಕಟ್ಟುನಿಟ್ಟಾಗಿ ಉಪೇಕ್ಷಿಸಿ, ತ್ಯಜಿಸಿರಿ. ನಿಮ್ಮ ಮಕ್ಕಳು ಅವರ ತಂದೆತಾಯಿಯರೊಂದಿಗೆ ಬದುಕನ್ನು ಸವಿಯಲಿ. ಇದರಿಂದ ಅವರನ್ನು ಆಶೀರ್ವದಿಸುವಲ್ಲಿ ನೀವು ಸಹ ಕೃಪೆಯನ್ನು ಗಳಿಸಿ ಎಲ್ಲರೂ ಸ್ವರ್ಗಸುಖವನ್ನು ಆನಂದಿಸುತ್ತೀರಿ."

ಕೆಲವು ಕ್ಷಣಗಳ ಮೌನದ ನಂತರ ಕಂದೀಲಿನ ಬೆಳಕು ಕುಗ್ಗುತ್ತಿರುವಂತೆಯೇ ಥಾಕೂರ್ ಎದ್ದು ನಿಂತು "ಬನ್ನಿರಿ, ಆ ಮರದ ಸಮೀಪ ಹೋಗೋಣ" ಎಂದರು. ಜನರು ಎದ್ದು, ಅವರನ್ನು ಕಗ್ಗತ್ತಲಿನಲ್ಲಿ ಹಿಂಬಾಲಿಸಿದರು.

* * * *



## ೨. ಜೀವವಿಜ್ಞಾನ ಮತ್ತು ಜೀವಿಗಳ ಬಗ್ಗೆ

ಥಾಕೂರ್ ಅವರು ಬಿಳಲು ಬಿಟ್ಟಿದ್ದ ಅರಳೀ ಮರದ ಕೆಳಗೆ ಕುಳಿತಾಗ, ಓರ್ವ ಯುವ ಅಮೆರಿಕನ್ ಭೇಟಿಗನು ಮಾತನಾಡುತ್ತಾ, "ಕೌಟುಂಬಿಕ ಜೀವನದ ಸಾಧ್ಯತೆಗಳನ್ನು ನೀವು 'ಸ್ವರ್ಗದ ಒಂದು ಇಣುಕು ನೋಟ' ಎಂದು ಬಣ್ಣಿಸಿದ್ದೀರಿ. ಆದರೆ, ಥಾಕೂರ್ ಅನೇಕ ಕುಟುಂಬಗಳಲ್ಲಿ, ವಿಚ್ಛೇದನದ ಇತಿಹಾಸ ಇಲ್ಲದಿದ್ದರೂ ಸಹ, ಮನೆಯ ವಾತಾವರಣವು ನೀವು ವರ್ಣಿಸಿರುವ ದೃಶ್ಯಕ್ಕಿಂತ ತುಂಬಾ ಭಿನ್ನವಾಗಿದೆ. ಅಮೆರಿಕಾದಲ್ಲಿ ಎಲ್ಲಾ ತಂದೆ ತಾಯಂದಿರು ಮದುವೆಯಲ್ಲಿ ಸಂತೋಷವನ್ನು ಅರಸುತ್ತಾರೆ. ತಮಗೆ ಮತ್ತು ತಮ್ಮ ಕುಟುಂಬಕ್ಕೆ ಕೀರ್ತಿ ತರುವಂತಹ ನಿಷ್ಠಾವಂತ ಮತ್ತು ಬುದ್ಧಿವಂತ ಮಕ್ಕಳು ಇರಬೇಕೆಂದು ಬಯಸುತ್ತಾರೆ. ಆದರೂ ನಾವು ಎಲ್ಲೋ ವಿಫಲರಾಗಿದ್ದೇವೆ ಎಂದು ತೋರುತ್ತದೆ. ಹಣ ಒದಗಿಸಬಹುದಾದ ಶ್ರೇಷ್ಠ ಶಿಕ್ಷಣವನ್ನು ಮಕ್ಕಳಿಗೆ ಕೊಡಲಾಗುತ್ತದೆ.. ಆರೋಗ್ಯ, ಅವಕಾಶ ಯಾವುದಕ್ಕೂ ಕೊರತೆಯಿಲ್ಲ. ಆದರೂ ಸಹ ಮಕ್ಕಳು ಬಹುತೇಕವಾಗಿ ಈ ಅವಕಾಶಗಳನ್ನು ಬಳಸಿಕೊಳ್ಳುವುದಿಲ್ಲ ಮತ್ತು ನಾವು ಆಶಯವಿಟ್ಟುಕೊಂಡಿರುವ ರೀತಿಯಲ್ಲಿ ಬೆಳೆಯುವುದಿಲ್ಲ. ಇದಕ್ಕೆ ಪ್ರತಿಯಾಗಿ ಸಾಧನೆಯ ಅವಕಾಶಗಳು ಕಡಮೆ ಇರುವ ಮಕ್ಕಳು ಸಾಧಕರಾಗುತ್ತಾರೆ ಮತ್ತು ಕುಟುಂಬ ಹಾಗೂ ಸಮಾಜಕ್ಕೆ ಅತಿ ಹೆಚ್ಚು ಕೊಡುಗೆ ನೀಡುತ್ತಾರೆ. ನಾನು ಯಾವುದೇ ಧ್ಯೇಯವನ್ನು ಆರಿಸಿದಾಗ ಗೊಂದಲಕ್ಕೆ ಒಳಪಡುತ್ತೇನೆ. ತತ್ಪರಿಣಾಮವಾಗಿ ನನ್ನ ವಿಧಿಯನ್ನು ದೂಷಿಸುತ್ತೇನೆ, ನನ್ನ ಅದೃಷ್ಟವನ್ನು ಕೊಂಡಾಡುತ್ತೇನೆ."

ಥಾಕೂರ್ ಈ ಮಾತನ್ನು ಒಪ್ಪಿಕೊಳ್ಳುತ್ತಾ, "ನಾನು ಹೇಳುವುದೇನೆಂದರೆ, ಮಗುವಿಗೆ ಜನನ ನೀಡುವ ನೈಸರ್ಗಿಕ ನಿಯಮವನ್ನು ಅಸಡ್ಡೆಮಾಡಬೇಡಿರಿ. ಏಕೆಂದರೆ ಇದಕ್ಕಾಗಿ ಜೀವನದ ಅಸ್ತಿತ್ವಕ್ಕೆ ಕೊಡುಗೆಯಾಗಿಸುವ ಗುಣವಿಶೇಷಗಳ ಸಾಂಪ್ರದಾಯಿಕ ಹರಿವು ಅಗತ್ಯವಾಗಿರುವುದರಿಂದ, ಇದು ಸೂಕ್ಷ್ಮ ಭಾವನೆಗಳು ಮತ್ತು ಹುಟ್ಟುಗುಣವನ್ನು ಉತ್ಪತ್ತಿಮಾಡುವ ಆನುವಂಶಿಕ ಅಂಶಗಳನ್ನು ಪೋಷಿಸಿ, ಏಕರೀತಿಯ ಪರಂಪರೆಯನ್ನು ಬೆಳೆಸುತ್ತದೆ. ಇದನ್ನು ಅಸಡ್ಡೆಮಾಡಿದಲ್ಲಿ ಆತ್ಮಹತ್ಯಾಸ್ವರೂಪದ ಅಪರಾಧವಾಗುತ್ತದೆ ಮತ್ತು ಇದು ಕ್ರಮೇಣ ಕುಟುಂಬ, ರಾಜ್ಯ ಮತ್ತು ಸಮಾಜವನ್ನು ಬಾಧಿಸಿ, ಬೆರಕೆ ಜಾತಿಯಾಗಿ ವ್ಯಕ್ತಗೊಳ್ಳುತ್ತದೆ. ಆಗ ವಿದ್ಯಾವಂತರು ಮತ್ತು ಅನಕ್ಷರಸ್ಥರು ಒಳಪಟ್ಟಂತೆ ಪ್ರತಿ

ಹೃದಯ ಮತ್ತು ಪ್ರತಿ ಮನೆಗೆ ಸೋಂಕು ತಗುಲಿ, ಎಲ್ಲವೂ ನಾಶವಾಗುತ್ತದೆ."

"ಬಹುಶಃ ಈ ರೀತಿಯ ಅವನತಿ ಎಲ್ಲಾ ನಾಗರಿಕತೆಗಳ ಹಣೆಬರಹವಾಗಿದೆ. ಥಾಕೂರ್, ವಾಸ್ತವಿಕವಾಗಿ ನಾಗರಿಕತೆಯೇ ಒಂದು ರೋಗವಾಗಿದ್ದು, ಅಂತಿಮವಾಗಿ ಮಾರಕವಾಗುತ್ತದೆಯೆಂದು ಒಬ್ಬ ದಾರ್ಶನಿಕರು ಸೂಚಿಸಿದ್ದಾರೆ."

ಥಾಕೂರ್ ತಲೆಯಾಡಿಸಿದರು "ನಿಸ್ಸಂದೇಹವಾಗಿ ನಾಗರಿಕತೆಯು ಅಸ್ತಿತ್ವದ ಸುಸಂತಾನ ಮತ್ತು ಕಠಿಣ ಮಾನವ ವಿಕಸನವನ್ನು ಅಲಕ್ಷ್ಯ ಮಾಡಿದಾಗ, ದಿಟ್ಟತನ, ಸಾಂಪ್ರದಾಯಿಕ ಗುಣಗಳು ಮತ್ತು ದೂರದೃಷ್ಟಿಯ ಅಭಾವವಿರುವ ಹಾಗೂ ಸತ್ವರಹಿತವಾದ ವಿವೇಚನೆಯು ಅನುಚಿತ ಮತ್ತು ನಿಗ್ರಹರಹಿತ ಕಾಮೋದ್ರೇಕದಿಂದ ಕಲುಷಿತಗೊಳ್ಳುತ್ತದೆ. ಅಶ್ಲೀಲತೆಯ ಕಾರಣ ಬಹುಸಂಖ್ಯಾತ ಜನರನ್ನು ದುರ್ಗತಿಗೆ ತಳ್ಳುತ್ತದೆ. ಆಗ ನಾಗರಿಕತೆಯನ್ನು ಗೌಣಗೊಳಿಸುವ ರೋಗವು ಅದನ್ನು ತಾಗುತ್ತದೆ. ಆದರೆ ಯಾರೇ ಆಗಲಿ ಮಾನವ ವಿಕಸನದ ದಕ್ಷತೆಯನ್ನು ಕಾಪಾಡುವಂತಹ ವಿಭಿನ್ನ ಮತ್ತು ವಿಶಿಷ್ಟ ಅನುವಂಶಿಕ ಅಂಶಗಳನ್ನು ಪೋಷಿಸುವಂತಹ ಯೋಗ್ಯ ಮತ್ತು ಸಹವರ್ತನೆಯ ವೈವಾಹಿಕ ಸಂಬಂಧದ ಮೂಲಕ ತನ್ನ ಕುಟುಂಬ ಮತ್ತು ನಾಗರಿಕತೆಯನ್ನು ಕಾಪಾಡಿದಲ್ಲಿ ಹೃದಯಗಳು ಹಾಡುತ್ತವೆ ಮತ್ತು ನಾಗರಿಕತೆಯು ಶಾಶ್ವತವಾಗಿ ವಿಸ್ತರಿಸಿ, ಉಚ್ಚ ಸ್ಥಿತಿಗೆ ಏರುತ್ತದೆ."

"ಥಾಕೂರ್, ಇವೆಲ್ಲವೂ ಕೇಳುವುದಕ್ಕೆ ಚೆನ್ನಾಗಿರುತ್ತದೆ," ಎಂದು ಅಮೆರಿಕನ್ ತರುಣಿ ಟೀಕೆ ಮಾಡುತ್ತಾ, "ಆದರೆ ಮಾನವ ಸುಸಂತಾನದ ವಿಷಯವು, ಜೀವನದ ಪ್ರಜಾಸತ್ತಾತ್ಮಕ ಆಯ್ಕೆಯಡಿ ನಾಪತ್ತೆಯಾಗುತ್ತದೆ. ಪ್ರಜಾಸತ್ತೆಗೆ ಮೂಲವಾಗಿರುವುದು, ಒಬ್ಬರ ಅಧಿಪತಿಗಳ ಮುಕ್ತ ಆಯ್ಕೆ ಮಾತ್ರವಲ್ಲದೆ, ಸುಸಂತಾನದ ಸಹವರ್ತನೆ ಏನೇ ಆಗಿದ್ದರೂ ಸಹ, ಒಬ್ಬರ ವೈವಾಹಿಕ ಸಂಗಾತಿಯ ಆಯ್ಕೆಯೂ ಸೇರಿರುತ್ತದೆ. ಈ ಮುಕ್ತ ಆಯ್ಕೆಯು, ಸಂತೋಷವನ್ನು ಪಡೆದುಕೊಳ್ಳುವಲ್ಲಿ ಮಾನವನ ಪರಭಾರೆಯಾಗದಂತಹ ಪ್ರಾಥಮಿಕ ಹಕ್ಕೆಂದು ಭಾವಿಸಲಾಗುತ್ತದೆ" ಎಂದಳು.

ಥಾಕೂರ್ ವಿವರಿಸುತ್ತಾ, "ಆದರೂ ಸಹ ನನ್ನ ನಂಬಿಕೆಯೆಂದರೆ ಸಾಮರಸ್ಯವಿಲ್ಲದ ಮದುವೆಯು, ಅನೇಕ ಸಲ, ನೈತಿಕತೆಯ ಸ್ಥೈರ್ಯವನ್ನು ಅಶಕ್ತಗೊಳಿಸುತ್ತದೆ ಮತ್ತು ತೇಜೋಹೀನಗೊಳಿಸುತ್ತದೆ. ಆಗ ಕುಟುಂಬ ಮತ್ತು ಸಮಾಜ, ಮನಸ್ಸಾಕ್ಷಿ ಮತ್ತು ತತ್ಪರಿಣಾಮಗಳ ಘರ್ಷಣೆಯಲ್ಲಿ ಸಿಲುಕಿ ನಿಟ್ಟುಸಿರು ಬಿಡುತ್ತವೆ. ಇದಕ್ಕೆ ಪ್ರತಿಯಾಗಿ, ಜೈವಿಕ – ಮಾನಸಿಕ ಸಾಮರಸ್ಯವಿರುವ ಸಂಗಾತಿಗಳ ಮಿಲನದಿಂದ ಜನಿಸುವ ಸುಭದ್ರ ಮತ್ತು ಉತ್ತಮ ವಿಭಜನೆಯ ಜೀವವು, ನಿಜಕ್ಕೂ ಸುಖಸಂತೋಷವನ್ನು ಈಡೇರಿಸುವುದರಿಂದ, ದೇವರ ಚರಣಕ್ಕೆ ಸಮರ್ಪಿತವಾದ ಪ್ರತಿಭಾನ್ವಿತ ಪ್ರಭೆಯಿರುವ ಸಂತಾನವು ಪ್ರಜ್ವಲಿಸುತ್ತದೆ. ಇದು ಕುಟುಂಬ, ಸಮಾಜ ಮತ್ತು ನಾಡಿನ ಮೂಲಭೂತ ಸಂತೋಷವಾಗುವುದಿಲ್ಲವೇ?"



"ಇದ್ದಿರಬಹುದು, ಥಾಕೂರ್ ಅವರೇ, ಆದರೆ ಜೈವಿಕ ಮಾನಸಿಕ ಸಾಮರಸ್ಯವೆಂದರೇನು? ಇಂತಹ ಸಾಮರಸ್ಯವನ್ನು ಹೇಗೆ ಗುರುತಿಸಬಹುದು," ಎನ್ನುವುದು ಆ ಮಹಿಳೆಯ ಪ್ರಶ್ನೆಯಾಗಿತ್ತು.

ಥಾಕೂರ್ ಇದಕ್ಕೆ ಉತ್ತರಿಸುತ್ತಾ, "ಕೆಲವು ಅವಯವ ಧಾತುಗಳನ್ನು ಸಂಯೋಗಗೊಳಿಸಿದಾಗ, ಅವು ಇತರವುಗಳ ವೈಶಿಷ್ಟ್ಯಗಳನ್ನು ಸಂಪನ್ನಗೊಳಿಸುವ ಸಮಯದಲ್ಲೇ, ಇತರ ಧಾತು ಸಂಯೋಗಗಳು ಅಸ್ಥಿರ ಅಥವಾ ನ್ಯೂನಗೊಂಡು, ವಿದ್ಯುಜ್ಜನಕ ಅಸಾಮರಸ್ಯದ ಕಾರಣ ತಮ್ಮ ಮೂಲಗುಣಗಳನ್ನು ಕಳೆದುಕೊಳ್ಳುತ್ತವೆ. ಇದೇ ರೀತಿ, ಪತ್ನಿಯ ವ್ಯಕ್ತಿಗತ ಗುಣಲಕ್ಷಣಗಳು, ಕೌಟುಂಬಿಕ ಪರಂಪರೆಗಳು ಮತ್ತು ಪ್ರವೃತ್ತಿಗಳು ಪತಿಯಲ್ಲಿನ ಈ ಅಂಶಗಳಿಗೆ ಪೂರಕವಾಗಿರದಿದ್ದಲ್ಲಿ ಮತ್ತು ಪೋಷಕವಾಗಿರದಿದ್ದಲ್ಲಿ, ಅವು ಪರಸ್ಪರರ ಸಾಮರಸ್ಯ ಮತ್ತು ಸಾರವನ್ನು ಮುರಿಯುತ್ತವೆ. ಇವು ಬಹುತೇಕವಾಗಿ ಮಕ್ಕಳ ನರವ್ಯೂಹವನ್ನು ಮೊದ್ದುಮಾಡಿ, ವಿರೂಪಗೊಳಿಸಿ, ಅವರು ತಮ್ಮ ಹಿರಿಯರ ಸಂಸ್ಕೃತಿಯನ್ನು ದ್ವೇಷಿಸುವಂತೆ ಮಾಡುತ್ತವೆ. ಭಾವಾತ್ಮಕ ಮೌಲ್ಯಗಳತ್ತ ದ್ವೇಷವನ್ನು ಕಲ್ಪಿಸುತ್ತವೆ ಮತ್ತು ಹಠಮಾರಿತನವನ್ನು ಉಂಟುಮಾಡುತ್ತವೆ. ಬದಲಿಗೆ ಸೂಕ್ತ ಜೈವಿಕ ಮಾನಸಿಕ ಹೊಂದಾಣಿಕೆಯು ಎರಡೂ ಪರಿಪೂರಕಗಳ ಆಂತರಿಕ ಮತ್ತು ಸಹಜ ಪ್ರವೃತ್ತಿಗಳನ್ನು ಸಂಪನ್ನಗೊಳಿಸುತ್ತದೆ ಮತ್ತು ಮಹಾನ್ ಸಂತತಿಗೆ ಎಡೆಮಾಡಿಕೊಡುತ್ತದೆ," ಎಂದರು.

ಆ ತರುಣಿ ಅಪನಂಬಿಕೆಯಿಂದ ಮಾತನಾಡುತ್ತಾ, "ಥಾಕೂರ್, ಜೈವಿಕ–ಮಾನಸಿಕ ಗುಣಲಕ್ಷಣಗಳೇನು ಎಂದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಪ್ರತಿಯೊಬ್ಬರಲ್ಲೂ ಲಕ್ಷಾಂತರ ಗುಣಲಕ್ಷಣಗಳಿರುತ್ತವೆ. ಇವೂ ಸಹ ವಿಭಿನ್ನ ವಯಸ್ಸುಗಳಲ್ಲಿ ಮತ್ತು ವಿಭಿನ್ನ ಪರಿಸ್ಥಿತಿಗಳಡಿ ಬದಲಾಗುತ್ತವೆ. ಇವುಗಳ ಲೆಕ್ಕ ವ್ಯತ್ಯಯಗಳು ಅಪರಿಮಿತ; ಹೀಗಾಗಿ ಯಾವುದು ಒಪ್ಪುತ್ತದೆ, ಯಾವುದು ಒಪ್ಪುವುದಿಲ್ಲ ಎನ್ನುವುದನ್ನು ತೀರ್ಮಾನಿಸಲು ವಾಸ್ತವಿಕವಾಗಿ ಅಸಾಧ್ಯವಾಗಿರುತ್ತದೆ" ಎಂದಳು.

ಥಾಕೂರ್ ಅನುಕಂಪದಿಂದ ಉತ್ತರಿಸುತ್ತಾ, "ಕನಿಷ್ಠಪಕ್ಷ, ಪ್ರಾಚೀನ, ಕುಲೀನ, ಸುಸಂಸ್ಕೃತ ದರ್ಜೆಯಿರುವ ಮಹಿಳೆಯನ್ನು ಒಬ್ಬ ಗಂಡಸು ಎಷ್ಟೇ ತೀಕ್ಷ್ಣ ಬುದ್ಧಿಯುಳ್ಳವನಾಗಿದ್ದರೂ ಸಹ, ಅವನ ದರ್ಜೆ ಇತ್ತೀಚಿನದಾಗಿದ್ದಲ್ಲಿ, ಇಂತಹ ವಿವಾಹವನ್ನು ಬೆಂಬಲಿಸಬೇಡಿರಿ ಅಥವಾ ಉತ್ತೇಜಿಸಬೇಡಿರಿ. ಈ ರೀತಿಯ ಮಿಲನಗಳು ದುರ್ಬಲವಾಗಿರುತ್ತವೆ, ದೋಷಯುಕ್ತವಾಗಿರುತ್ತವೆ ಮತ್ತು ಪರಸ್ಪರರ ಸೂಕ್ಷ್ಮ ಗುಣಗಳನ್ನು ನಾಶಗೊಳಿಸಿ ಪೈಶಾಚಿಕ ವಿರೂಪವಿರುವ ಮಕ್ಕಳಿಗೆ ಖಂಡಿತ ಜನನ ನೀಡುತ್ತವೆ ಮತ್ತು ಇವರುಗಳು ಒಬ್ಬರಾದ ಮೇಲೊಬ್ಬರು ಸಮಾಜವನ್ನು ನರಕಕ್ಕೆ ತಳ್ಳುತ್ತಾರೆ" ಎಂದರು.

ಬಿಳಿ ಕೂದಲಿನ ವಿದ್ವಾಂಸ ಭೇಟಿಗರು ಮುಗುಳುನಗುತ್ತಾ "ಲೇಡಿ ಚ್ಯಾಟರ್ಲಿ

ತನ್ನ ರೈತ ಪ್ರಿಯತಮನಿಗೆ ಉತ್ತಮ ಹೆಂಡತಿಯಾಗಿರಲಾರಳು ಎಂದು ಹ್ಯಾವ್‌ಲಾಕ್ ಎಲ್ಲಿಸ್ ಒಮ್ಮೆ ಅಭಿಪ್ರಾಯಪಟ್ಟಿದ್ದರು. ಈ ಅಭಿಪ್ರಾಯ ನಿಮ್ಮ ಅನಿಸಿಕೆಗೆ ಸರಿಹೊಂದುವಂತೆ ತೋರುತ್ತದೆ, ಥಾಕೂರ್. ಆದರೂ ಸಮಸ್ಯೆ ಏನೆಂದರೆ: ಒಂದು ಪ್ರಜಾಸತ್ತಾತ್ಮಕ ಸಮಾಜವು ಯಾವುದೇ ವರ್ಗವೈಶಿಷ್ಟ್ಯವನ್ನು ಅಂಗೀಕರಿಸುವುದಿಲ್ಲ ಅಥವಾ ಉತ್ತಮವೆಂದೋ ಅಧಮಗಳೆಂದೋ ಗುರುತಿಸಲಾಗುವುದಿಲ್ಲ. ಇದು ಪೊಳ್ಳು ಜಂಬ ಮತ್ತು ದುರಹಂಕಾರವನ್ನು ಸೂಚಿಸುತ್ತದೆಯೆಂದು ಜನರು ಹೇಳುತ್ತಾರೆ," ಎಂದು ಹೇಳಿದರು.

"ನನಗೆ ದುರಹಂಕಾರ ಅಥವಾ ಪೊಳ್ಳು ಜಂಬ ಅರ್ಥವಾಗುವುದಿಲ್ಲ, ನನಗೆ ಕಂಡುಬರುವುದನ್ನು ನಾನು ಹೇಳುತ್ತೇನೆ. ಪ್ರತಿ ವ್ಯಕ್ತಿಯು ದೈವಾನುಗ್ರಹದ ಅದ್ವಿತೀಯ ಸಾಮ್ರಾಜ್ಯವಾಗಿದ್ದಾನೆ, ಮತ್ತು ಅವನ ಸಹಜ ಪ್ರವೃತ್ತಿಯಿಂದ ಕೆರಳಿಸುವುದು, ಅವನ ಅಂತರ್ಗತ ಅಸ್ತಿತ್ವದ ಹಾದಿಯನ್ನು ಭಂಗಮಾಡಿದಂತೆ ಆಗುತ್ತದೆ. ಈ ರೀತಿಯಾಗಿ ನಿಮ್ಮ ಸಾಮ್ರಾಜ್ಯ, ನಿಮ್ಮ ಸಮಾಜ ಮತ್ತು ನಿಮ್ಮ ಇರುವಿಕೆಯನ್ನು ನೀವು ಕಳೆದುಕೊಳ್ಳುತ್ತೀರಿ. ನಂತರ ಈ ಕಳೆದುಹೋದ ಅಸ್ತಿತ್ವವು ನರಳುವಿಕೆಯಾಗಿ ಪ್ರತಿಧ್ವನಿಸಿ, ಜೀವನಗತಿಯನ್ನು ಮಂದತೆಯಿಂದ ಕೊರೆಯುತ್ತದೆ. ಆದ್ದರಿಂದಲೇ ನಾನು ನಿಮಗೆ ಹೇಳುತ್ತೇನೆ: ನಿಮಗಾಗಿ ನೀವು ಇಷ್ಟಪಡದೆ ಇರುವುದನ್ನು ಪ್ರಕಟಿಸಬೇಡಿರಿ ಅಥವಾ ಕೈಗೊಳ್ಳಬೇಡಿರಿ. ಅಸ್ತಿತ್ವದ ಸಂಜೀವಿನಿಯತ್ತ ನಮ್ಮನ್ನು ಸೆಳೆಯುವ ಅಸ್ತಿತ್ವ ವಿಕಸನದ ಆ ಖಚಿತ ಮತ್ತು ವಿಶಿಷ್ಟ ವ್ಯವಸ್ಥೆಯನ್ನು ಧ್ವಂಸ ಮಾಡಿ, ಮತ್ತೊಬ್ಬರನ್ನು ಅಪಜಯಿಯಾಗಿಸಬೇಡಿರಿ ಅಥವಾ ಖುದ್ದಾಗಿ ಸೋಲಬೇಡಿರಿ".

ತರುಣಿಯ ಹಣೆ ಸುಕ್ಕುಗಟ್ಟಿತು. "ಆದರೆ..ಆದರೆ...ಥಾಕೂರ್, ವಿಕಸನದ ಖಚಿತ ವ್ಯವಸ್ಥೆಯು ಸರಿಸಮಾನತೆಯ ಕಲ್ಪನೆಯನ್ನು ಆಧಾರವಾಗಿ ಹೊಂದಿಲ್ಲವೇ? ನೀವು ಸರಿಸಮಾನತೆಯನ್ನು ನಂಬುವುದಿಲ್ಲವೇ?"

ಥಾಕೂರ್ ವಿವರಿಸಿ ಮಾತನಾಡುತ್ತಾ, "ಸರಿಸಮಾನತೆಯ ಪರಿಕಲ್ಪನೆಯು ಒಂದನ್ನು ಮತ್ತೊಂದರಿಂದ ಅತಿ ವಿರಳವಾಗಿ ಪ್ರತ್ಯೇಕಿಸುವುದರಿಂದ, ಅದು ಬುದ್ಧಿಶಕ್ತಿಯನ್ನು ಸೃಷ್ಟಿಮಾಡಬಹುದೆಂದು ನಾನು ನಂಬುವುದಿಲ್ಲ. ಅದು ಆಗಾಗ್ಗೆ ಅದ್ಭುತವಾದ ತೀಕ್ಷ್ಣವಲ್ಲದ ಅಭಿಪ್ರಾಯವನ್ನು ಸೃಷ್ಟಿಸಿ ಅಹಮಿಕೆಯನ್ನು ಕಡಿಮೆಮಾಡುತ್ತದೆ. ಆದರೂ, ಸಮಾನರೂಪತೆ ಮತ್ತು ಏಕರೂಪತೆಯ ನಡುವೆ ವ್ಯತ್ಯಾಸವನ್ನು ಗುರುತಿಸಿ ಸಹಾನುಭೂತಿ ಮತ್ತು ಅನುಕಂಪವನ್ನು ಉತ್ಪತ್ತಿಮಾಡುವುದರಿಂದ ಸರಿಸಮಾನತೆಯ ಭಾವನೆಯನ್ನು ನಾನು ಮೆಚ್ಚುತ್ತೇನೆ," ಎಂದರು.

"ಆದರೆ ಥಾಕೂರ್, ವ್ಯತ್ಯಾಸಗಳು ಸಹಾನುಭೂತಿಯನ್ನು ಮುಟ್ಟಿಸುತ್ತವೆಯೇ?



ಸಾಮಾನ್ಯವಾಗಿ ಇದು ವ್ಯತಿರಿಕ್ತವಾಗಿರುತ್ತದೆ."

ಥಾಕೂರ್ ಇದನ್ನು ಒಪ್ಪಲಿಲ್ಲ ''ಸ್ವಲ್ಪ ಯೋಚಿಸಿ ಎಲ್ಲರೂ ಸರಿಸಮಾನರಾಗಿದ್ದಲ್ಲಿ 'ನಾನು' ಮತ್ತು 'ಬೇರೆಯವರು' ಎನ್ನುವ ಭಾವನೆಗಳಿಗೆ ಆಸ್ಪದವೇ ಇರುತ್ತಿರಲಿಲ್ಲ. 'ನೀವು' ಇರದಿದ್ದಲ್ಲಿ, 'ನಾನು' ಇರಲು ಹೇಗೆ ಸಾಧ್ಯ ? ಆದ್ದರಿಂದಲೇ ಅಸ್ತಿತ್ವಕ್ಕಾಗಿ ಇರುವ ಹಂಬಲ ಒಂದೇ ಆಗಿದ್ದರೂ ಸಹ, ಅಸ್ತಿತ್ವದ ವಿಧಾನವು ಅನೇಕವಾಗಿದೆ ಎಂದು ನಾನು ಭಾವಿಸುತ್ತೇನೆ. ಈ ಕಾರಣದಿಂದಾಗಿ ಪ್ರತಿ ಅಪೂರ್ವ ಅಸ್ತಿತ್ವವು ಮತ್ತೊಂದು ಅಸ್ತಿತ್ವದಿಂದ ಅರ್ಥಪೂರ್ಣ ಪರಿಜ್ಞಾನವನ್ನು ಅಂಗೀಕರಿಸಿಕೊಂಡು ತನ್ನದೇ ಆದ ವಿಶಿಷ್ಟಪ್ರವೃತ್ತಿಯ ಮೂಲಕ ಬೆಸೆದುಕೊಳ್ಳಬಹುದು."

"ನಿರ್ದಿಷ್ಟ ಪ್ರವೃತ್ತಿ ಎಂದರೇನು?"

"ಪ್ರತಿ ಜೀವಿಯು ಅನೇಕಾನೇಕ ಪೀಳಿಗೆಗಳ ಕೊಡುಗೆಯಾದ ಜೀವಾಂಕುರ ಕೋಶಗಳ ನಿರಂತರ ಮಾಲೆಯಲ್ಲಿ ಪೋಣಿಸಲಾದ ನಿರ್ದಿಷ್ಟ ಹುಟ್ಟು ಸ್ವಭಾವದ ಗುಣಲಕ್ಷಣಗಳೊಂದಿಗೆ ಈ ಜಗತ್ತಿನಲ್ಲಿ ಜನಿಸುತ್ತದೆ. ಈ ವ್ಯಕ್ತಿಗತ ವೈಶಿಷ್ಟ್ಯತೆಯೇ ಮನುಷ್ಯನ ಅಸ್ತಿತ್ವವನ್ನು ಎತ್ತಿಹಿಡಿಯುತ್ತದೆ ಮತ್ತು ಇದರ ಮೂಲಕವೇ ಅವನು ಸೃಷ್ಟಿಯಲ್ಲಿ ಅಡಗಿರುವ ಏಕತೆಯನ್ನು ಮನಗಾಣುತ್ತಾನೆ. ಚುಟುಕಾಗಿ ಹೇಳುವುದಾದರೆ, ಅವನು ಅಸ್ತಿತ್ವ ದಕ್ಷತೆಯ ಸಂಪೂರ್ಣ ಪ್ರತಿಫಲವನ್ನು ಪಡೆಯುತ್ತಾನೆ. ಇದಕ್ಕೆ ಪ್ರತಿಯಾಗಿ, ಅಜ್ಞಾನದ ಪೋಷಣೆ ಅಥವಾ ಸಾಮರಸ್ಯವಿಲ್ಲದ ಮದುವೆಯ ಮೂಲಕ ಈ ಹುಟ್ಟು ಸ್ವಭಾವದ ಪಥವನ್ನು ಮುರಿದಲ್ಲಿ ಅಥವಾ ಅಲ್ಲಗಳೆದಲ್ಲಿ, ಅಂತರಾತ್ಮವು ಗುಲಾಮಗಿರಿ ಮತ್ತು ಆತ್ಮಹತ್ಯಾ ಸ್ವರೂಪದ ಸಂಕೋಲೆಯೊಳಗೆ ನಲುಗುತ್ತದೆ. ಚುಟುಕಾಗಿ ಹೇಳುವುದಾದರೆ, ಅವನು ನರಕದ ದುಃಸ್ಥಿತಿಯ ಪ್ರತಿಫಲವನ್ನು ಪಡೆಯುತ್ತಾನೆ."

"ಹಾಗಿದ್ದಲ್ಲಿ ಥಾಕೂರ್, ನೀವು ಒಬ್ಬ ವ್ಯಕ್ತಿಗೆ ವಿರುದ್ಧವಾಗಿ ಮತ್ತೊಬ್ಬನಿಗೆ ಪ್ರಾಮುಖ್ಯ ಕೊಡಬೇಕಾಗುತ್ತದೆ. !" ಥಾಕೂರ್ ಇದನ್ನು ಖಂಡಿತ ಒಪ್ಪಿಕೊಳ್ಳಲಿಲ್ಲ. "ಆದರೆ ಒಬ್ಬ ಮನುಷ್ಯನ ಸಹಜ ಪ್ರವೃತ್ತಿ ಯಾವುದೇ ಆಗಿದ್ದರೂ ಸಹ, ಅವನು ದಾರ್ಶನಿಕ, ಅಥವಾ ಆಡಳಿತಗಾರ ಅಥವಾ ರೈತನಾಗಿರಬಹುದು – ಯಾರೂ ಮತ್ತೊಬ್ಬರಿಗಿಂತ ಕಡಿಮೆ ಮುಖ್ಯನಾಗಿರುವುದಿಲ್ಲ. ಅಸ್ತಿತ್ವವನ್ನು ಮತ್ತಷ್ಟು ತೃಪ್ತಿಕರವಾಗಿಸಲು ದೈವಾನುಗ್ರಹವು ಎಲ್ಲಾ ರೀತಿಯ ಪ್ರವೃತ್ತಿಯನ್ನು ಒದಗಿಸುತ್ತದೆ ಎಂದು ನಾನು ಅರಿತಿದ್ದೇನೆ. ಆದ್ದರಿಂದಲೇ ನಾನು ಹೇಳುತ್ತೇನೆ : ಯಾರ ಶ್ರಮ ಅಥವಾ ಕುಶಲತೆಯನ್ನೂ ಗೌಣಮಾಡಬೇಡಿರಿ. ಬದಲಿಗೆ, ಪ್ರತಿ ನಿರ್ದಿಷ್ಟ ಸ್ವಾಭಾವಿಕ ಕುಶಲತೆಯು ಉತ್ಸಾಹ ಮತ್ತು ದೃಢನಿರ್ಧಾರದಿಂದ ಬೆಳೆಯುವುದಕ್ಕೆ ಆಸ್ಪದ ಕೊಡಿ. ಈ ರೀತಿ ಪ್ರತಿಯೊಬ್ಬರ– ನಿಮ್ಮ, ನಿಮ್ಮ ನೆರೆಹೊರೆಯವರ, ನಿಮ್ಮ

ಸಮಾಜದ ಮತ್ತು ನಿಮ್ಮ ನಾಡಿನ ಜೀವನವು ವಿಕಸನಗೊಳ್ಳುತ್ತದೆ.”

“ಇದು ಸಾಧ್ಯವೆಂದು ನೀವು ನಿಜವಾಗಿಯೂ ಭಾವಿಸಿ, ಪ್ರಜಾಸತ್ತೆಯ ಆದರ್ಶವನ್ನು ಈಗಲೂ ಪ್ರತಿಪಾದಿಸುತ್ತೀರಾ, ಥಾಕೂರ್?”

ಥಾಕೂರ್ ಹೇಳಿದರು, “ಶ್ರದ್ಧಾಯುಕ್ತ ಜಿಜ್ಞಾಸೆ ಮತ್ತು ವಿಚಾರವಂತಿಕೆಯಿಂದ ಈ ಅಂಶವನ್ನು ವಿಶ್ಲೇಷಣಾತ್ಮಕವಾಗಿ ಮತ್ತು ಅನುಭವಪ್ರಾಮಾಣ್ಯವಾಗಿ ಎದುರಿಸಿರಿ. ಪ್ರತಿಯೊಂದು ಅಸ್ತಿತ್ವದಲ್ಲೂ ಸಾಮಾನ್ಯ ಅಂಶ ಮತ್ತು ಪೋಷಣಾತ್ಮಕ ವ್ಯವಸ್ಥೆಯನ್ನು ಅರಸಿರಿ. ಆಗ, ಎಲ್ಲಾ ವ್ಯತ್ಯಾಸಗಳು, ಏಕರೂಪತೆಗಳು ಹಾಗೂ ಕ್ರಿಯೆಗಳು ಮತ್ತು ಪ್ರತಿಕ್ರಿಯೆಗಳು ಒಳಪಟ್ಟ ಪರಿಜ್ಞಾನವನ್ನು ಗಳಿಸಿ, ವ್ಯವಸ್ಥಿತಗೊಳಿಸಿರಿ. ಇದರಿಂದ ನೀವು ನಿಸ್ಸಂದೇಹವಾಗಿ ವೈವಿಧ್ಯಗಳು ಮತ್ತು ವ್ಯತ್ಯಯಗಳು ಸಂಪೂರ್ಣವಾದ ಉಜ್ವಲ ಅಸ್ತಿತ್ವವಾಗಿ ಸಾರ್ವತ್ರಿಕಗೊಳ್ಳುತ್ತವೆ ಎನ್ನುವುದನ್ನು ಕ್ರಮೇಣ ಗ್ರಹಿಸುತ್ತೀರಿ. ಮಿಗಿಲಾಗಿ, ನೀವು ಮಾನವನ ಧ್ಯೇಯವನ್ನು, ಅಂದರೆ, ದೈವಿಕವಾದ ಪ್ರಜಾಸತ್ತೆಯನ್ನು, ನಿಮ್ಮದಾಗಿಸಿಕೊಳ್ಳುತ್ತೀರಿ.”

ಆ ಹಿರಿಯ ವಿದ್ವಾಂಸರು ಆಲೋಚನಾಮಗ್ನರಾದರು. “ಥಾಕೂರ್, ವಿಶ್ವದ ವಿಭಿನ್ನ ಭಾಗಗಳಲ್ಲಿನ ಹಲವಾರು ಗುಂಪುಗಳು ಮಾನವನಿಗೆ ಸುಸಂತಾನದ ಶಾಸ್ತ್ರವನ್ನು ಅನ್ವಯಿಸುವ ವಿಧಿವಿಧಾನಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿವೆ. ಕೆಲವರು ಬಹುಶಃ ಯಶಸ್ವಿಯಾಗಿರಬಹುದು. ಮಾನವ ಸುಸಂತಾನವು ಒಂದಾನೊಂದು ಕಾಲದಲ್ಲಿ ಆಶಾದಾಯಕವಾಗಿತ್ತಾದರೂ, ವಾಸ್ತವಿಕವಾಗಿ ಅತ್ಯಲ್ಪ ಫಲಿತಾಂಶವನ್ನು ತೋರಿಸಿದೆ.”

ಥಾಕೂರ್ ಮೆಲುವಾಗಿ ಪಟ್ಟುಹಿಡಿದು ಮಾತನಾಡಿ, “ಏನೇ ಆಗಲೀ, ನಾವು ಸಾವಿರ ಸಲ ವಿಫಲರಾದರೂ ಸಹ, ವಿಕಾಸವಾಗಬೇಕೆಂಬ ಜೀವನದ ಹೆಬ್ಬಯಕೆಯನ್ನು ಈಡೇರಿಸುವಂತಹ ಏಕೈಕ ಅಂಶ ಪತ್ತೆಯಾದಾಗ, ಅದು ಸಾವಿರಾರು ವ್ಯಕ್ತಿಗಳಿಗೆ ಅಪಾರ ಪ್ರಯೋಜನವನ್ನು ತರುತ್ತದೆ. ಆದ್ದರಿಂದಲೇ ಯಾಕೆ ಅಶಕ್ತತೆ ಅಥವಾ ವೈಫಲ್ಯದ ಬಗ್ಗೆ ಚಿಂತಿಸಬೇಕು ಅಥವಾ ಗೊಣಗುಟ್ಟಬೇಕು? ನಿಮ್ಮ ಸುತ್ತಲೂ ಗೋಚಾಡುತ್ತಿರುವ ಆ ಸಾವಿರಾರು ವಿಫಲತೆಗಳ ನಡುವೆಯೂ, ಪ್ರಯೋಜನ ಸಿಗುತ್ತದೆಯೆಂಬ ಅಂಶವನ್ನು ಯಾಕೆ ಪ್ರಯೋಗಿಸಕೂಡದು?” ಎಂದರು.

ಭೇಟಿಗರು ನಸುನಕ್ಕರು. “ನಿಜ ಹೇಳಬೇಕೆಂದರೆ ಥಾಕೂರ್, ಅಮೆರಿಕದ ಓರ್ವ ಖ್ಯಾತ ಸಮಕಾಲೀನ ವೈದ್ಯರು ಇತ್ತೀಚೆಗೆ ಮಾಡಿರುವ ಒಂದು ಸಲಹೆಯೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕುಟುಂಬದ ರೋಗಗಳ ದಾಖಲೆಯನ್ನು ನಿರ್ವಹಿಸಿ, ರೋಗಗಳಲ್ಲಿ ಆನುವಂಶಿಕತೆಯ ಸ್ಥಾನವನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ರೋಗಲಕ್ಷಣವನ್ನು ತಿಳಿಯುವಲ್ಲಿ ಇದನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳಿದ್ದಾರೆ.”



ಥಾಕೂರ್ ಈ ಮಾತನ್ನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತಾ, “ನಮ್ಮಲ್ಲಿ ಪ್ರತಿಯೊಂದು ಪೀಳಿಗೆಯ ನಿಖರ ಆನುವಂಶಿಕ ದಾಖಲೆಗಳೊಂದಿಗೆ ನಿರ್ದಿಷ್ಟ ಗುಣಲಕ್ಷಣಗಳು, ಆರೋಗ್ಯ ಮತ್ತು ವೃತ್ತಿಯ ಇತಿಹಾಸವನ್ನು ನಿರ್ವಹಿಸಿದಲ್ಲಿ ಇದು ಖಂಡಿತ ಪರಿಹಾರಕ್ಕೆ ಅನುವು ಮಾಡಿಕೊಡುತ್ತದೆ.”

ಅಲ್ಲಿದ್ದ ತರುಣಿಯ ಹುಬ್ಬು ಗಂಟಿಕ್ಕಿತು. “ಆದರೂ ಥಾಕೂರ್ ಆನುವಂಶಿಕತೆಯ ಮೇಲೆ,... ವೈಶಿಷ್ಟ್ಯತೆಯ ಮೇಲೆ.... ಕೊಟ್ಟಿರುವ ಈ ಒತ್ತು ಸರಿಯೆಂದು ಕಂಡುಬರುತ್ತಿಲ್ಲ. ಇದು ದೇವರ ಸೃಷ್ಟಿಯಡಿ ವಿಮುಕ್ತ ಮಕ್ಕಳಾಗಿರುವ ನಮ್ಮ ಮೇಲೆ ಒಂದು ಬಗೆಯ ಪರಿಮಿತಿಯನ್ನು ಹೇರುತ್ತದೆ. ನಮಲ್ಲಿ ಪರಿಮಿತಿಗಳಿರಬಹುದು. ಆದರೆ ಅವುಗಳನ್ನು ಒತ್ತಿಹೇಳುವುದು..., ಅವುಗಳನ್ನು ಒತ್ತಾಯಿಸುವುದು, ಪ್ರಜಾಸ್ವಾತಂತ್ರ್ಯವನ್ನು ನಿರಾಕರಿಸಿ, ದೇವರಲ್ಲಿ ನಾವಿಟ್ಟಿರುವ ವಿಶ್ವಾಸವನ್ನು ಸಹ ಅಲ್ಲಗಳೆಯುತ್ತದೆಯೆಂದು ನೀವು ಭಾವಿಸುವುದಿಲ್ಲವೇ?”

ಥಾಕೂರ್ ಅವರ ಧ್ವನಿ ದಯಾಪರವಾಗಿತ್ತು. “ಪ್ರಕೃತಿ ವಿಧಿಸುವ ಪರಿಮಿತಿಯನ್ನು ಮೀರಲು ಯಾರಾದರೂ ಇಚ್ಛಿಸಿದಲ್ಲಿ ಆ ವ್ಯಕ್ತಿ ಅವುಗಳನ್ನು ಅನುಭವಿಸಿಯೇ ತೀರಬೇಕು. ಆದ್ದರಿಂದಲೇ ಮನುಷ್ಯನು ಅನುವಂಶೀಯತೆ ಮತ್ತು ಪ್ರಕೃತಿಯು ಅನುಗ್ರಹಿಸುವ ಆ ವಿಶಿಷ್ಟ ಗುಣಲಕ್ಷಣಗಳನ್ನು ಪರಿಪಾಲಿಸಬೇಕೆಂದು ನಾನು ಭಾವಿಸುತ್ತೇನೆ. ಆಗ ಪ್ರತಿ ಜೀವಿಯ ಗುಣಲಕ್ಷಣಗಳಿಗೆ ಅನುಸಾರವಾಗಿ ಮನೋಭಿಲಾಷೆಗಳನ್ನು ಈಡೇರಿಸುವ ಭಗವಂತನತ್ತ ತನ್ನ ನಿಷ್ಠೆಯನ್ನು ವ್ಯಕ್ತಪಡಿಸುವುದರಿಂದ ಮನುಷ್ಯನು ಸಾರ್ವಲೌಕಿಕ ಪರಮಾತ್ಮನನ್ನು ಅರಿಯುತ್ತಾನೆ. ಅವನು ಆ ಮೂಲ ರೇಖೆಯನ್ನು ಅನಿರ್ದಿಷ್ಟವಾಗಿ ವಿಸ್ತರಿಸುತ್ತಾನೆ– ಪರವಲಯದ ವಕ್ರಾಕೃತಿಯಂತೆ.”

ಥಾಕೂರ್ ತಮ್ಮ ಮಾತು ಮುಂದುವರೆಸಿದಂತೆ ಆ ತರುಣಿಯ ಹಣೆಯಲ್ಲಿ ಕಟ್ಟಿದ್ದ ಸುಕ್ಕು ಮರೆಯಾಗುತ್ತಿರುವಂತೆ ತೋರಿತು. “ನಮ್ಮ ಪ್ರಾಚೀನ ಗ್ರಂಥಗಳ ಪ್ರಕಾರ, ಒಬ್ಬ ಸೇವಕ ಅಥವಾ ಒಬ್ಬ ದೊರೆ, ತನ್ನ ಹುಟ್ಟು ಸ್ವಭಾವದ ಪ್ರವೃತ್ತಿಗಳನ್ನು ಕೈಬಿಡುವುದಕ್ಕೆ ಬದಲಾಗಿ, ಅವುಗಳ ಮೇಲೆ ನಿಂತುಕೊಳ್ಳುವುದರಿಂದ ಬ್ರಹ್ಮನನ್ನು ಅರಿತುಕೊಳ್ಳಬಹುದು ಎನ್ನುತ್ತವೆ. ಈ ಪರಮಜ್ಞಾನಿಗಳೇ ನಿಜವಾದ ಬ್ರಾಹ್ಮಣರು ಮತ್ತು ಜನರು ಇವರುಗಳನ್ನು ಸದಾ ಪೂಜಿಸಿದ್ದಾರೆ. ಈ ಕಾರಣದಿಂದಲೇ ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ಸ್ವಂತ ವಿಶಿಷ್ಟ ಗುಣಲಕ್ಷಣಗಳನ್ನು ಎತ್ತಿಹಿಡಿದಲ್ಲಿ ಮಾತ್ರ, ಅಧಿಕ ವಿಕಸನಕ್ಕೆ ಮಾರ್ಗವನ್ನು ಕಲ್ಪಿಸುತ್ತೇವೆ. ಆಗಲೇ ನಮ್ಮ ಸಾಮರ್ಥ್ಯಗಳು ಮತ್ತು ಸಾಧ್ಯತೆಗಳಿಗೆ ಪಾರವೇ ಇರುವುದಿಲ್ಲ. ಭಗವಂತನು ಅಪರಿಮಿತ ಶಕ್ತಿಯ ಮೂಲವಾಗಿರುವ ರೀತಿಯಲ್ಲೇ, ನಾವು ಈ ಮೂಲದೊಂದಿಗೆ ನಮ್ಮ ಬಾಂಧವ್ಯವನ್ನು ಕಾಪಾಡಿಕೊಂಡಲ್ಲಿ, ಮನುಷ್ಯನ ಶಕ್ತಿಗೆ ಮಿತಿಯೇ ಇರುವುದಿಲ್ಲ. ಏಕೆಂದರೆ ದೇವರು

ತನ್ನ ಪ್ರತಿರೂಪವಾಗಿಯೇ ಮಾನವನನ್ನು ಸೃಷ್ಟಿಸಿದನು."

ಆ ತರುಣಿ ಇನ್ನೂ ವಿಚಾರಮಗ್ನಳಾದಳು. "ಆದರೂ ಥಾಕೂರ್, ಮತ್ತೊಂದು ಸಮಸ್ಯೆಯಿದೆ. ಒಬ್ಬ ನಿರ್ದಿಷ್ಟ ವ್ಯಕ್ತಿಯ ವೈಶಿಷ್ಟ್ಯವೇನು ಎನ್ನುವುದನ್ನು ಯಾರು ತೀರ್ಮಾನಿಸಬೇಕು ? ಇನ್ನೂ ಹೇಳಬೇಕೆಂದರೆ ಒಬ್ಬ ಗಂಡಿನ ಯಾವ ವಿಶಿಷ್ಟಗುಣ ಒಬ್ಬ ಹೆಣ್ಣಿನ ಯಾವ ವಿಶಿಷ್ಟ ಗುಣದೊಂದಿಗೆ ಸುಸಂಗತವಾಗಿರುತ್ತದೆ ಎನ್ನುವುದನ್ನು ಹೇಗೆ ತಿಳಿಯಬೇಕು...... ಇದು ನಿಜಕ್ಕೂ ಅತ್ಯಂತ ಕ್ಲಿಷ್ಟಕರವಾಗಿ ತೋರುತ್ತದೆ."

ಥಾಕೂರ್ ಹೌದೆನ್ನುವಂತೆ ತಲೆಯಾಡಿಸಿ ಹೇಳಿದರು, "ಅಂಕಿ ಅಂಶಗಳ ಪರಿಜ್ಞಾನ, ವೈಜ್ಞಾನಿಕ ಪರೀಕ್ಷೆ, ವಿಚಾರವಂತ ಪರಿಶೀಲನೆ – ಈ ಸಂಗ್ರಹಿತ ತೀಕ್ಷ್ಣ ಬುದ್ಧಿಯು – ಯಾರ ಗುಣ ಯಾರ ಗುಣದೊಂದಿಗೆ ಸರಿಯೊಪ್ಪುತ್ತದೆ ಎನ್ನುವ ಸಾಮ್ಯವನ್ನು ಅನಾವರಣಗೊಳಿಸಿ, ಅಂತಿಮವಾಗಿ ನಿಖರ ಅಸ್ತಿತ್ವದ ಮಾನಕಗಳನ್ನು ವಿಕಸಿತಗೊಳಿಸುತ್ತದೆ. ಇದು ಪ್ರಯೋಗಿತ ಅಂಶವಾದಾಗ ಎಲ್ಲರೂ ಇದನ್ನು ಅನುಸರಿಸುತ್ತಾರೆ. ಏಕೆಂದರೆ ಎಲ್ಲರೂ ತಮ್ಮ ಕಲ್ಯಾಣವನ್ನು ಅರಸುತ್ತಾರೆ ಅಲ್ಲವೇ?"

ಇವರೆಲ್ಲರ ಮಾತನ್ನು ಮೌನವಾಗಿ ಕೇಳುತ್ತಿದ್ದ ಯುವಕನು ಮಧ್ಯೆ ಮಾತನಾಡಿ, "ಥಾಕೂರ್, ಪಾಶ್ಚಿಮಾತ್ಯ ಇತಿಹಾಸಜ್ಞರೊಬ್ಬರ ಪ್ರಕಾರ, ಪಾಶ್ಚಿಮಾತ್ಯ ನಾಗರಿಕತೆಯ ಇತಿಹಾಸಕ್ಕೆ ಒಳಪಟ್ಟಂತೆ ೩೦೦ ಪೀಳಿಗೆಗಳಿವೆ ಮತ್ತು ಮೂಲಭೂತ ಬದಲಾವಣೆಗಳನ್ನು ಮೂಡಿಸಲು ಇವುಗಳ ಪೈಕಿ ಹತ್ತು ಪೀಳಿಗೆಗಳು ಸಾಕು. ಒಂದೇ ಪೀಳಿಗೆಯು ಇತಿಹಾಸದ ಒಂದು ನಿರ್ಣಾಯಕ ಗಳಿಗೆಯನ್ನು ಪ್ರತಿನಿಧಿಸುತ್ತದೆ ಎಂದೂ ಅವರು ಸೂಚಿಸಿದ್ದಾರೆ." ಆ ಯುವಕನು ತನ್ನ ಸ್ನೇಹಿತರತ್ತ ದೃಷ್ಟಿಹಾಯಿಸಿ, "ಸುಸಂತಾನದ ಆ ಕೆಲವು ಪರಿಗಣನೆಗಳನ್ನು ಮದುವೆಗಳಿಗೆ ಪರಿಚಯಿಸಿ, ಗಮನಾರ್ಹ ಫಲಿತಾಂಶಗಳನ್ನು ಸಾಧಿಸಬೇಕಾದರೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ಎಂದು ತಿಳಿಯಲು ನಾನು ಬಯಸುತ್ತೇನೆ. ಜೈವಿಕ ಬದಲಾವಣೆ ಎಷ್ಟು ನಿಧಾನ ಮತ್ತು ಅಗ್ರಾಹ್ಯವೆಂದರೆ, ಇದು ವ್ಯಾಪಕ ಬೆಂಬಲ ಅಥವಾ ಅನುಕಂಪವನ್ನು ಗಳಿಸುವಲ್ಲಿ ವಿಫಲವಾಗುತ್ತದೆ."

ಥಾಕೂರ್ ಆಲೋಚನಾಪರರಾದರು. "ನನ್ನ ರೀತ್ಯಾ," ಎಂದು ಮಾತು ಆರಂಭಿಸಿದ ಅವರು, "ಯಾವುದೇ ಸಮುದಾಯ ಅಥವಾ ದೇಶವು ಆರರಿಂದ ಎಂಟು ಪೀಳಿಗೆಗಳಲ್ಲಿ ಸತತವಾಗಿ ಪರಿಣಾಮಕಾರಿ, ಜಾಗರೂಕ ಮತ್ತು ನೀತಿಬದ್ಧ ಚೋದನೆಯಿಂದ ಮಕ್ಕಳನ್ನು ಹೆರುವ ನಿಯಮವನ್ನು ಪರಿಪಾಲಿಸಿದಲ್ಲಿ ಆಗ ದೈವಾನುಗ್ರಹದ ರಾಜ್ಯವು ಸಾಧಾರಣವಾಗಿ ಬೆಳೆಯುತ್ತದೆ, ಜನರ ನೈತಿಕ ಮೌಲ್ಯಗಳು ಸ್ವಪ್ರೇರಿತವಾಗಿ ಕಾಪಾಡಲ್ಪಡುತ್ತವೆ ಮತ್ತು ಯೋಗ್ಯತೆಯ ತಂಗಾಳಿಯು ಎಲ್ಲೆಡೆ ಮುಕ್ತತೆ ಮತ್ತು ಸ್ವಾತಂತ್ರ್ಯದ ಕಂಪನ್ನು ಬೀರುತ್ತದೆ," ಎಂದರು.

"ಆರರಿಂದ ಎಂಟು ಪೀಳಿಗೆಗಳೇ"! ಎಂದು ಉದ್ಗರಿಸಿದ ತರುಣಿಯು,



"ಯಾಕೆ ಇದು ಇನ್ನೂರು ವರ್ಷಗಳ ಕತೆಯಾಯಿತು. ಇದು ತುಂಬಾ ತಡವಾಯಿತಲ್ಲವೇ, ಥಾಕೂರ್?"

ಥಾಕೂರ್ ಮುಖದಲ್ಲಿ ನಸುನಗು ಮೂಡಿತು. ಅವರು ಉತ್ತರಿಸಿ, "ಆದ್ದರಿಂದಲೇ ಫಲವನ್ನು ಕೊಡುವ ಮರದ ಬೀಜವನ್ನು ಜೋಪಾನವಾಗಿ ಆಯ್ದು, ಬಿತ್ತುವ ಸಮಯ ಇದಾಗಿದ್ದು, ನಂತರ ಅಸ್ತಿತ್ವವಾಗಿ ಸಮೃದ್ಧಿಯಾಗುತ್ತದೆ ಎಂದು ನಾನು ಹೇಳುತ್ತಿದ್ದೇನೆ. ಆಗ ನಿಮ್ಮ ಭವಿಷ್ಯದ ಸಂತತಿಯು ಈ ಭೂಮಿಯ ಮೇಲೆ ಸ್ವರ್ಗಸುಖವನ್ನು ಖಂಡಿತ ಆನಂದಿಸುತ್ತದೆ. ಇನ್ನೂ ಮುಖ್ಯವೆಂದರೆ ನಿಮ್ಮ ಮುಂದಿನ ತಲೆಮಾರಿನವರು ಅಸ್ತಿತ್ವದ ಬಗ್ಗೆ ನಿಮ್ಮ ದೂರದೃಷ್ಟಿಗಾಗಿ ಅತ್ಯಂತ ಕೃತಜ್ಞರಾಗುತ್ತಾರೆ!"

ಆದರೆ ಥಾಕೂರ್ ಮಗುವಿಗೆ ಜನ್ಮನೀಡುವ ಈ ನಿಯಮ.... ಎಲ್ಲಿಂದ.... ಹೇಗೆ... ಆರಂಭಿಸುವುದೆಂದು ಪತ್ತೆ ಹಚ್ಚುವುದು?

"ನಿಮ್ಮ ಮಕ್ಕಳು ಅವರ ಸಂಗಾತಿಯನ್ನು ಆಯ್ಕೆಮಾಡುವಾಗ ಅವರು ಕನಿಷ್ಠ ಮೂರು ಅಂಶಗಳನ್ನು ಎಚ್ಚರಿಕೆಯಿಂದ ಪರಿಗಣಿಸಬೇಕೆಂದು ನೀವು ಅವರಿಗೆ ಕಲಿಸಿದರೆ ಸಾಕು. ಇವೆಂದರೆ ಸುಸಂಗತ ಸಂಸ್ಕೃತಿ ಮತ್ತು ನಡತೆ; ಆರೋಗ್ಯ ಮತ್ತು ಶುಚಿತ್ವ, ಅನುವಂಶಿಕ ರೋಗಗಳು; ದೈಹಿಕ ಮತ್ತು ಮಾನಸಿಕ ; ಸುಸಂಗತ ಶಿಕ್ಷಣ ಮತ್ತು ವೃತ್ತಿಪರ ದಕ್ಷತೆ."

ತರುಣಿಯ ಮುಖದಲ್ಲಿ ಪುನರ್ ಆಶ್ವಾಸನೆಯ ನಂಬಿಕೆ ಮೂಡಿತು. "ಥಾಕೂರ್, ಪರಿಸ್ಥಿತಿ ನಾನು ತಿಳಿದಷ್ಟು ಬಿಗಡಾಯಿಸಿಲ್ಲ."

ಥಾಕೂರ್ ಮುಂದುವರೆದು, "ಕೇವಲ ಇದುವೇ ನಿಮ್ಮ ಸಮಾಜವನ್ನು ಸ್ವಚ್ಛ ಮತ್ತು ಪರಿಶುದ್ಧಗೊಳಿಸಿ, ದಯೆ, ಬುದ್ಧಿವಂತಿಕೆ, ಸಮತೋಲನದ ದೂರದೃಷ್ಟಿ, ಸಂಪ್ರದಾಯ ಮತ್ತು ಗಹನ ಜ್ಞಾನವುಳ್ಳ ಸಂತತಿಯನ್ನು ಸೃಷ್ಟಿಸುವಂತೆ ದೈವಾನುಗ್ರಹವನ್ನು ಅನುಮತಿಸುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಇದು ನಿಮ್ಮ ಕುಟುಂಬ, ಸಮಾಜ ಮತ್ತು ನಾಡಿನ ಮೇಲೆ ದೈವಾನುಗ್ರಹದ ಒಲವು ಮತ್ತು ಸಂಪತ್ತನ್ನು ಕೊಡುಗೆಯಾಗಿಸುತ್ತದೆ."

ಥಾಕೂರ್ ಅಮೆರಿಕನ್ನರತ್ತ ವಾಲಿ ಕಳಕಳಿಯ ಮನವಿಯನ್ನು ಮಾಡಿಕೊಂಡರು. "ನೀವು ಇದನ್ನು ಮಾಡುವುದಿಲ್ಲವೇ? ನೀವು ಇದನ್ನು ಮಾಡಲಾಗುವುದಿಲ್ಲವೇ? ನೀವು ಖಂಡಿತ ಈ ರೀತಿ ಮಾಡಲೇಬೇಕು, ಮಾಡಲೇಬೇಕು. ನಿಮ್ಮ ಮನೆಯನ್ನು ಸಕಲ ಗೌರವಾನ್ವಿತವಾಗಿಸಲು ಮತ್ತು ಸಕಲರ ಮನೆಗಳನ್ನು ನಿಮ್ಮ ಗೌರವದ ಮಾಲೆಯಾಗಿಸಲು ಇದೇ ನಿಮ್ಮ ಯಜ್ಞವಾಗಿರುತ್ತದೆ!"

ಒಂದು ನಿಶ್ಶಬ್ದತೆ ಗುಂಪನ್ನು ಆವರಿಸಲು ತೊಡಗಿದಂತೆ, ಒಬ್ಬ ಪರಿಚಾರಕನು ಬಂದು ಥಾಕೂರ್ ಅವರ ಸಂಜೆ ಊಟದ ಸಮಯವಾಯಿತೆಂದು ಹೇಳಿದನು. ಜನರ ಗುಂಪು ಎದ್ದು ನಿಂತು, ಚಂದ್ರನ ಕಿರಣಗಳು ಆಲದ ಮರದ ಕೊಂಬೆಗಳು

ಮತ್ತು ಎಲೆಗಳ ನಡುವೆ ಥಾಕೂರ್ ಅವರಿಗೆ ಹಾದಿ ಮಾಡಿಕೊಟ್ಟಿದ್ದನ್ನು ನೋಡುತ್ತಿದ್ದಂತೆಯೇ, ಭೇಟಿಗರ ಮನದಲ್ಲಿ ವಿಚಾರಧಾರೆ ಪ್ರತಿಧ್ವನಿಸುತ್ತಿದ್ದ ತೆರದಲ್ಲಿ ಸಾಮುದಾಯಿಕ ಭೋಜನಶಾಲೆಯ ಗಂಟೆ ಬಾರಿಸಿತು.

* * * *



## ೩. ಪ್ರಾಟೆಸ್ಟೆಂಟಿಸಮ್ : ಅಸಾಂಪ್ರದಾಯಿಕ ಮತವೇ ಅಥವಾ ಅತ್ಯುತ್ತಮ ನಂಬಿಕೆಯೇ?

ಮಾರನೆಯ ದಿನ ಥಾಕೂರ್ ಅವರು ತಗಡು ಸೂರಿನ ಕಟ್ಟಡದ ವರಾಂಡದಲ್ಲಿ ಕುಳಿತಿದ್ದಾಗ, ಅಮೆರಿಕನ್ ಭೇಟಿಗರು ಅವರಲ್ಲಿಗೆ ಬಂದರು. ಅವರುಗಳ ಪೈಕಿ ಕನ್ನಡಕ ಧರಿಸಿ, ಗಂಭೀರ ಪ್ರವೃತ್ತಿಯವನಂತೆ ಕಾಣುತ್ತಿದ್ದ ಒಬ್ಬ ಯುವಕ ಮಾತನಾಡಲು ಆರಂಭಿಸಿ, "ಥಾಕೂರ್, ಕಳೆದ ಸಂಜೆಯಿಂದ ನಾವೆಲ್ಲರೂ ಅಮೆರಿಕಾದಲ್ಲಿ ವಿಶ್ವ ಕ್ರೈಸ್ತ ಆಂದೋಲನದ ಬಗ್ಗೆ ಚರ್ಚಿಸುತ್ತಿದ್ದೇವೆ. ಇದು ಪ್ರಾಟೆಸ್ಟಂಟ್ ಚರ್ಚ್‌ಗಳನ್ನು ಒಗ್ಗೂಡಿಸುವ ಪ್ರಯತ್ನವಾಗಿದೆ. ನಮ್ಮ ದೇಶದಲ್ಲಿ ಬಹುತೇಕ ಮಂದಿ ಈ ಕ್ಲಿಷ್ಟಕರ ಪರಿಸ್ಥಿತಿಗಳಲ್ಲಿ ಹೊಸ ಸ್ಫೂರ್ತಿಗಾಗಿ ಚರ್ಚ್‌ನ ಮಾರ್ಗದರ್ಶನವನ್ನು ಬಯಸುವುದರಿಂದ ನಾನು ಇದರಲ್ಲಿ ಸ್ವಲ್ಪಮಟ್ಟಿಗೆ ಸಕ್ರಿಯವಾಗಿದ್ದೇನೆ. ಆದರೆ ದುರದೃಷ್ಟವಶಾತ್, ಪಂಥೀಯ ಒಳಜಗಳಗಳು ಏಸುವಿನ ಮನೋಭಾವನೆಯನ್ನು ಹತ್ತಿಕ್ಕಿ ಚರ್ಚ್‌ನ ಆಧ್ಯಾತ್ಮಿಕ ಚೈತನ್ಯವನ್ನು ಬಹಳವಾಗಿ ನಾಶಮಾಡುತ್ತಿವೆ. ಏಸುವಿನತ್ತ ಸಾಮಾನ್ಯ ನಿಷ್ಠೆಯನ್ನು ಹೆಣೆಯುವ ಒಂದು ವಾಸ್ತವಿಕ ಐಕಮತ್ಯವನ್ನು ಸಾಧಿಸಲು ಪ್ರಯತ್ನಗಳು ಮುಂದುವರೆಯುತ್ತಿವೆ ಮತ್ತು ಸ್ವಲ್ಪ ಪ್ರಗತಿ ಕಂಡುಬಂದಿದೆ. ಆದರೆ ಇದು ಬಹಳ ನಿಧಾನ ಮತ್ತು ಹಿಗ್ಗಾಮುಗ್ಗಾ ಆಗುತ್ತಿದೆ. ಇಂದು ಏಸುವು ಪರಿಭಾವಿಸಿದ್ದ ಕ್ರೈಸ್ತ ಭ್ರಾತೃತ್ವಕ್ಕೂ ಹಲವಾರು ವರ್ಗಗಳು, ಒಂದು ಮತ್ತೊಂದರ ಬಗ್ಗೆ ತೋರಿಸುವ ಮೇಲುನೋಟದ ಸಹಾನುಭೂತಿಗೂ ಎಷ್ಟು ಅಜಗಜಾಂತರ ಅಂತರವಿದೆಯೆಂದರೆ, ಇದನ್ನು ಕೆಲವರು ನಮ್ಮ ಯುಗದ ಅತಿ ದೊಡ್ಡ ದುರಂತ ಎಂದು ಭಾವಿಸುತ್ತಾರೆ. ಈ ಕಾರ್ಯವಿಧಾನವನ್ನು ತ್ವರಿತಗೊಳಿಸುವ ಯಾವುದೇ ಮಾರ್ಗವಿದೆಯೆಂದು ನೀವು ಭಾವಿಸುತ್ತೀರಾ? ಇಂತಹ ಸಾರ್ವತ್ರಿಕ ಐಕಮತ್ಯ ಇರಬೇಕೆಂಬ ಹೆಬ್ಬಯಕೆಯನ್ನು ಏನು ತಡೆಗಟ್ಟುತ್ತಿದೆ?"

ಥಾಕೂರ್ ಒಂದೆರಡು ನಿಮಿಷ ಆಲೋಚಿಸಿ, ನಂತರ ಮೃದುವಾಗಿ ಮಾತನಾಡಲು ತೊಡಗಿದರು, "ಮನುಷ್ಯರು ಭಗವಂತನಿಗೆ ಸಕ್ರಿಯ ಸೇವೆ ಸಲ್ಲಿಸಲು ಪರಸ್ಪರವಾಗಿ ಆಸಕ್ತರಾಗುವುದು, ಮುತ್ತಿನ ಮಾಲೆಯನ್ನು ಪೋಣಿಸಿದಂತೆ ಸುಂದರವಾಗುತ್ತದೆ. ಕೆಲವೊಮ್ಮೆ ಉದ್ದೇಶಪೂರ್ವಕ ಕೀಳರಿಮೆಯು ಇದಕ್ಕೆ ಅಡ್ಡ ಬರುತ್ತದೆ. ದೇವರಿಗೆ ಸೇವೆ ಸಲ್ಲಿಸುವಲ್ಲಿ ತಮಗೆ ಆದ್ಯತೆ ಇದೆಯೆಂದು

ತೋರಿಸಿಕೊಳ್ಳುವ ಆಸೆಯಿಂದ ಕೆಲವರು ತಮಗೆ ಮೇಲೆ ಇರುವವರನ್ನು ತುಚ್ಛವಾಗಿ ತೋರಿಸಲು ಯತ್ನಿಸುತ್ತಾರೆ.... 'ನಮ್ಮಿಂದ ಚರ್ಚ್ ಒಗ್ಗೂಡದಿದ್ದಲ್ಲಿ, ಅದರಲ್ಲಿ ಅಂತರ ಏರ್ಪಡಲಿ' ಎನ್ನುವ ಧೋರಣೆಯಿಂದ.. ಈ ರೀತಿ ಚಿಂತಿಸುವವರು ಸಹಾನುಭೂತಿ ಇಲ್ಲದೆ ತಪ್ಪು ಕಂಡುಹಿಡಿಯುತ್ತಾರೆ ಮತ್ತು ಅನೇಕ ಸಲ, ಯಾವುದಾದರೂ ಅಡಚಣೆ ತಲೆದೋರಲೆಂದೇ ಹೊಂಚು ಹಾಕುತ್ತಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಯಾವುದೇ ಸೃಜನಾತ್ಮಕ ಮತ್ತು ಸಕ್ರಿಯಾತ್ಮಕ ನಿಲುವು ಇಲ್ಲದವರು ಇತರರಲ್ಲಿ ಸಂಘಟಿತ ಪರಿಸ್ಥಿತಿಯನ್ನು ಮೂಡಿಸುವುದನ್ನು ಕಠಿಣಗೊಳಿಸುತ್ತಾರೆ. ಇತರರಲ್ಲಿನ ತಪ್ಪುಗಳಿಂದ ಬಾಧಿಸಲ್ಪಡುವವರು, ಅವುಗಳನ್ನು ನಿವಾರಿಸಬೇಕೆಂಬ ಮನೋಭಾವನೆಯನ್ನು ಬೆಳೆಸಿಕೊಳ್ಳದಿರುವವರು, ಸಮಗ್ರ ಮತ್ತು ಸೃಜನಾತ್ಮಕದ ಬಗ್ಗೆ ಕನಸು ಕಾಣದಿರುವವರು, ಸಂಕಟ ಪರಿಸ್ಥಿತಿಯನ್ನು ಸುವ್ಯವಸ್ಥೆಯಾಗಿ ಪರಿವರ್ತಿಸಲು ಯತ್ನಿಸದೆ ಇರುವವರು, ಅತಿ ಚಿಕ್ಕ ವಿರೋಧ ಅಥವಾ ಅಡಚಣೆಯು ಖಿನ್ನತೆಯನ್ನು ಉಂಟುಮಾಡಿ, ಸೃಜನಾತ್ಮಕ ಪರಿಕಲ್ಪನೆಯನ್ನು ಮುರಿಯುವರು, ಚುಕ್ಕಾಣಿಯನ್ನು ಭದ್ರವಾಗಿ ಹಿಡಿಯುವ ದಿಟ್ಟ ಧೈರ್ಯ ಇಲ್ಲದೆ ಇರುವವರು.... ಇಂತಹ ವ್ಯಕ್ತಿಗಳು ಒಗ್ಗೂಡಲಾರರು ಮತ್ತು ಇತರರನ್ನು ಸಂಘಟಿಸಲಾರರು."

"ಆದರೆ ಥಾಕೂರ್ ಇಂತಹ ವೈಫಲ್ಯಗಳಿಲ್ಲದ ಎಷ್ಟು ಮಂದಿ ಇರಲು ಸಾಧ್ಯ?" ಎಂದು ಆ ಯುವಕ ತಲೆ ಕರೆದುಕೊಳ್ಳುತ್ತಾ ಕೇಳಿದನು.

"ಇಂತಹವರು ಕೆಲವರೇ ಇದ್ದಿರಬಹುದು. ಇವರುಗಳು ಭಗವಂತನತ್ತ ಸಮರ್ಪಿತರಾಗಿದ್ದಲ್ಲಿ, ತಮ್ಮಗಳ ನಡುವೆ ಐಕಮತ್ಯವನ್ನು ಬೆಳೆಸಿಕೊಂಡಲ್ಲಿ, ಸಕ್ರಿಯ ಸೇವೆ ಸಲ್ಲಿಸಿ ಸಹಾನುಭೂತಿಯಿಂದ ವರ್ತಿಸುವ ವಿವಾರಣಾತ್ಮಕ ಧೋರಣೆಯನ್ನು ಹೊಂದಿದಲ್ಲಿ, ಐಕಮತ್ಯದ ಈ ರೀತಿಯ ಹೆಬ್ಬಯಕೆ ಇದ್ದಲ್ಲಿ, ಇವರುಗಳು ಏಕತೆಯ ವಿರುದ್ಧದ ಸಂಗತಿಗಳ ಮೇಲೆ ರಣಹದ್ದಿನಂತೆ ಕಣ್ಣಿಟ್ಟು, ಅವುಗಳನ್ನು ಬೇರುಸಮೇತ ನಿರ್ಮೂಲ ಮಾಡಲು ಶ್ರಮಿಸುತ್ತಾರೆ... ಆಗ ಎಲ್ಲವೂ ತಂತಾನೆ ಪರಿಹಾರವಾಗುತ್ತವೆ. ಮನುಷ್ಯ ಎಷ್ಟು ಮೂರ್ಖನೆಂದರೆ, ಭಗವಂತನಲ್ಲಿ ಶ್ರದ್ಧೆಯಿಟ್ಟು ಸಾಮಾನ್ಯವಾಗಿ ಸಕ್ರಿಯವಾದರೆ ಸಾಲದು, ಬದಲಿಗೆ ದೇವರ ಹೆಸರಿನಲ್ಲಿ ತನ್ನ ಸ್ವಾರ್ಥವನ್ನು ಈಡೇರಿಸಿಕೊಂಡು ತನ್ನನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ."

ಯುವಕನಿಗೆ ನಂಬಿಕೆಯಾಗಲಿಲ್ಲ."ಆದರೆ ಥಾಕೂರ್, ಕೆಲವೇ ಕೆಲವು ಮಂದಿ ಏನು ತಾನೇ ಮಾಡಿಯಾರು? ಈ ವಿಧದ ಬೃಹತ್ ಮತ್ತು ಕ್ಲಿಷ್ಟ ಸಮಸ್ಯೆಯ ಮೇಲೆ ಅವರ ಚಟುವಟಿಕೆಯ ಪ್ರಭಾವ ಅತ್ಯಂತ ಗೌಣವಾಗಿರುತ್ತದೆ."

"ಈ ಪ್ರಭಾವಗಳು ಇಂದು ಅಥವಾ ಒಂದು ನೂರು ವರ್ಷಗಳ ನಂತರ ಕಂಡುಬರಬಹುದು. ಪ್ರತಿಯೊಬ್ಬನೂ ಚಟುವಟಿಕೆಯುಕ್ತನಾದಾಗ ಇದರ



ಭಾಸವಾಗುತ್ತದೆ. ಆಗ ದೇವರ ಪ್ರಕಾಶವು ಮನುಷ್ಯನ ವೈಶಿಷ್ಟ್ಯಕ್ಕೆ ಅನುಸಾರವಾಗಿ ಪ್ರಜ್ವಲಿಸುತ್ತದೆ. ಒಬ್ಬ ವ್ಯಕ್ತಿಯ ಕಣ್ಣುಗಳು, ಚಲನೆ, ಹಾವಭಾವ, ನಡೆವಳಿಕೆ...... ದೇವರಲ್ಲಿ ಕಾಣುವುದೆಲ್ಲವೂ ವ್ಯಕ್ತಿಯ ಮಿದುಳಿನಲ್ಲಿ ಸಂಪೂರ್ಣವಾಗಿ ನೆಲೆಸುತ್ತದೆ. ಆದ್ದರಿಂದಲೇ ನೀವು ಜವಾಬ್ದಾರಿಯಿಂದ ಭಗವಂತನ ವಾಕ್ಯಗಳನ್ನು ಪಾಲಿಸಿದಷ್ಟೂ, ನಿಮ್ಮಲ್ಲಿ ಸಂಗ್ರಹವಾಗುವ ಆ ಸಂಪತ್ತು ನಿಮ್ಮನ್ನು ಮುನ್ನಡೆಯುವಂತೆ ಪ್ರೇರೇಪಿಸುತ್ತದೆ.... ದೇವರ ಪ್ರತಿಯೊಂದು ಮಾರ್ಗವನ್ನು ಅನುಭವಿಸಿ, ಆನಂದಿಸಲು ನಿಮಗೆ ಸಾಧ್ಯವಾಗುತ್ತದೆ.... ನೀವು ಅವನ ಸಲುವಾಗಿ ಅವನನ್ನು ಸಾಕಾರಗೊಳಿಸುತ್ತಾ ಮುಂದುವರೆದಂತೆ ಪ್ರತ್ಯಕ್ಷ ಮತ್ತು ಪರೋಕ್ಷ ಅರ್ಥಗಳು ಮಿಂಚುತ್ತವೆ. ಆದ್ದರಿಂದಲೇ ನಾನು ನಿಮಗೆ ಹೇಳುವುದೇನೆಂದರೆ ಸಾಮಾನ್ಯ ಆಸಕ್ತಿಯೊಂದಿಗೆ ಎಂದೂ ರಾಜಿ ಮಾಡಿಕೊಳ್ಳಬೇಡಿ. ಇದು ದುರ್ಗತಿಯ ಸಂಗಾತಿ. ಭಗವಂತನತ್ತ ಅಚಲ ಮತ್ತು ಪ್ರಾಮಾಣಿಕ ನಿಷ್ಠೆಯು ಅವನ ಆರಾಧನೆ ಮತ್ತು ಕಲ್ಯಾಣದತ್ತ ಪೂರ್ವಗ್ರಹವನ್ನು ನಿವಾರಿಸಿ, ಏಕತೆಯನ್ನು ಉದ್ಧಾರಮಾಡುತ್ತದೆ."

ಅಮೆರಿಕನ್ ತರುಣಿ ಗಂಟಲು ಸರಿಪಡಿಸಿಕೊಂಡಳು. "ಥಾಕೂರ್, ಅವನ ಮಾತನ್ನು ನಾನು ಒಪ್ಪುವುದಿಲ್ಲ. ಏಸುವಿಗೆ ನಿಷ್ಠಾವಂತರಾದ ಅನೇಕ ಮಂದಿ ಇದ್ದಾರೆ. ಆದರೆ ಇದು ಏಕತೆಯನ್ನು ತಂದಿಲ್ಲ, ಅಷ್ಟೇ."

ಥಾಕೂರ್ ಮುಗುಳುನಗುತ್ತಾ ಈ ಮಾತನ್ನು ಒಪ್ಪಿಕೊಂಡರು. "ದೇವರತ್ತ ನಿಷ್ಠೆಯಿದ್ದರೂ ಸಹ, ಜನರು ಮನಸ್ಸಂಕೀರ್ಣದಿಂದ ತಲೆದೋರುವ ಕೆಲವು ಮೂಢನಂಬಿಕೆಗಳನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಇವುಗಳಲ್ಲಿ ತಮ್ಮನ್ನು ತಾವೇ ಕಳೆದುಕೊಳ್ಳುತ್ತಾರೆ. ತೀವ್ರಾಸಕ್ತಿಯ ನಿಷ್ಠೆಯು ಸದೃಢವಾದಾಗಲೇ, ಮನಸ್ಸಂಕೀರ್ಣದ ಆ ಸ್ವಭಾವಸಿದ್ಧ ನೀರ್ಗುಳ್ಳೆಯಿಂದ ಪಾರಾಗಬಹುದು. ಆಗಲೇ ಭಗವಂತನ ದೃಷ್ಟಿಕೋನದಿಂದ ಒಬ್ಬರು ಇನ್ನೊಬ್ಬರ ಬಗ್ಗೆ ಸ್ವಂತಿಕೆಯನ್ನು ಬೆಳೆಸಿಕೊಳ್ಳಬಹುದು. ಇನ್ನೊಂದು ಮಾತು ಸಹ ನಿಜ: ಪ್ರೀತಿಪಾತ್ರ ದೇವರ ಬಗ್ಗೆ ಸಾಚಾ ನಿಷ್ಠೆಯಿದ್ದಲ್ಲಿ, ತನ್ನ ಸ್ವಂತ ಗುಣಗಳನ್ನು ಉಳಿಸಿಕೊಳ್ಳುವ ಸಮಯದಲ್ಲೇ ಬೇರೆಯವರ ವಿಶೇಷ ಗುಣಗಳನ್ನು ಪ್ರೀತಿಸಿ, ಗೌರವಿಸಿ ಸಾಮರಸ್ಯವನ್ನು ಕಾಪಾಡಬಹುದು. ಮನೋಭಾವನೆಗಳಲ್ಲಿ ವ್ಯತ್ಯಾಸಗಳು ಇದ್ದೇ ಇರುತ್ತವೆ. ಆದರೂ ಭಗವಂತನತ್ತ ನಿಷ್ಠೆಯು ಇದರ ಮೇಲೂ ವ್ಯಾಪ್ತಿಯನ್ನು ಹೊಂದಿರುತ್ತದೆ. ನನ್ನ ಪ್ರಕಾರ, ಈ ಕಾರಣದಿಂದಲೇ ನಿಷ್ಠೆಯ ಕೊರತೆ ಇರುವ ಸಾಮಾನ್ಯ ಒಳ್ಳೆಯ ಜನರಲ್ಲಿ ಪರಸ್ಪರರ ನಡುವೆ ತಿಳುವಳಿಕೆ ಇದ್ದರೂ, ಸಂಘಟನೆಯ ಅಭಾವವಿರುತ್ತದೆ."

"ಇದು ಆಸಕ್ತಿಯುತವಾಗಿದೆ. ಥಾಕೂರ್. ಆದರೆ ನಿಮ್ಮ ಉತ್ಕಟತೆ, ನಮ್ಮಲ್ಲಿ ಬಹುತೇಕ ಮಂದಿಯಲ್ಲಿರುವ ಸ್ವಾರ್ಥವನ್ನು ಉಪೇಕ್ಷಿಸಿದೆ."

ಥಾಕೂರ್ ಇಲ್ಲವೆನ್ನುವಂತೆ ತಲೆಯಾಡಿಸಿದರು. "ಸ್ವ–ಸ್ಥಾಪನೆ ಮತ್ತು ಸ್ವಾರ್ಥದ

ಆನಂದಕ್ಕಾಗಿ ಉತ್ಕಟ ಬಯಕೆ ಬರುವವರು ಐಕಮತ್ಯವನ್ನು ಸಾಧಿಸಲು ಆಗದಿದ್ದರೂ, ಈ ಐಕಮತ್ಯದ ಕೇಂದ್ರವಾದ ಸಕಲ ಈಡೇರಿಕೆಯ ಆ ಭಗವಂತನತ್ತ ಕಿಂಚಿತ್ ನಿಷ್ಠೆಯಿದ್ದರೂ ಸಾಕು, ಇದು ಜನರನ್ನೂ ಒಗ್ಗೂಡಿಸುತ್ತದೆ. ಈ ಪರಸ್ಪರ ಜತೆಗಾರಿಕೆಯಿಂದಲೇ, ಪ್ರತಿಯೊಬ್ಬರ ಒಲವು, ಭಾವನೆಗಳು ಸ್ವಭಾವ, ಆಸಕ್ತಿ, ಮೂಢನಂಬಿಕೆಗಳು ಮತ್ತು ಬಯಕೆ ಜಾಗೃತವಾಗುತ್ತವೆ. ಮನುಷ್ಯರು ನೋವನ್ನು ಅನುಭವಿಸುತ್ತಾರೆ. ಆದರೆ ಎಲ್ಲರೂ ಆ ಒಂದು ಕೇಂದ್ರಬಿಂದುವಿನೊಂದಿಗೆ ಪ್ರಾಥಮಿಕವಾಗಿ ಬಾಂಧವ್ಯ ಹೊಂದಿರುವುದರಿಂದ ಯಾವುದೇ ವ್ಯಕ್ತಿಯ ನಿರ್ಗಮನ ಯಾರಿಗೂ ಇಷ್ಟವಾಗುವುದಿಲ್ಲ. ಏಕೆಂದರೆ ಆಗ ಭಗವಂತನ ಭಾವನೆಗಳಿಗೆ ಘಾಸಿಯಾಗುತ್ತದೆ. ಈ ವಿಧದಲ್ಲೇ ವಿವೇಕ ಬೆಳೆಯುತ್ತದೆ ; ನ್ಯಾಯ ಅನ್ಯಾಯಗಳ ಒಂದು ಭಾವನೆ, ಸೈರಣೆಯ ಸಾಮರ್ಥ್ಯ ಪ್ರಬುದ್ಧಗೊಂಡು ಎಲ್ಲರ ಬಗ್ಗೆ ಅನುಕಂಪವನ್ನು ಸುಪ್ತವಾಗಿ ಅಭಿವೃದ್ಧಿಗೊಳಿಸುತ್ತದೆ. ಮನುಷ್ಯನು ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತಾನೆ ಮತ್ತು ತಪ್ಪು ಅಭಿಪ್ರಾಯಗಳು ಕಣ್ಮರೆಯಾಗುತ್ತವೆ. ಎಲ್ಲಾ ತಪ್ಪುಗಳು, ಮನೋಧರ್ಮದ ವ್ಯತ್ಯಾಸಗಳು ಮತ್ತು ಮೂಢನಂಬಿಕೆಗಳಿದ್ದರೂ ಸಹ, ಒಬ್ಬರು ಮತ್ತೊಬ್ಬರನ್ನು ಆತ್ಮೀಯವಾಗಿಸಿಕೊಳ್ಳುತ್ತಾರೆ ಹಾಗೂ ಭ್ರಾತೃತ್ವದ ಕೊಂಡುಕೊ ಸಹಬಾಳ್ವಿಕೆಯ ಭಾವನೆಯ ಮೂಲಕ ಸ್ನೇಹವನ್ನು ಕಾಪಾಡಿಕೊಳ್ಳುತ್ತಾರೆ. ಆದರೆ ಮೂಲತಃ ನಿಷ್ಠೆ ಇಲ್ಲದಿದ್ದಲ್ಲಿ, ಒಂದೇ ಚಿಕ್ಕ ತಿಕ್ಕಾಟವಿದ್ದರೂ ದೂರವಾಗುತ್ತಾರೆ."

ಯುವಕನು ಇದರ ಬಗ್ಗೆ ಸ್ವಲ್ಪ ಯೋಚಿಸಿ, ತನ್ನ ಅಭಿಪ್ರಾಯವನ್ನು ಅಂತಿಮವಾಗಿ ವ್ಯಕ್ತಪಡಿಸಿದನು: "ಒಂದೇ ವರ್ಗದೊಳಗೆ ಇದು ಸರಿಯಾಗಿ ಸಂಭವಿಸಬಹುದು, ಥಾಕೂರ್. ಆದರೆ ಇಲ್ಲಿ ಸಮಸ್ಯೆಯೆಂದರೆ ವಿಭಿನ್ನ ಚರ್ಚ್‌ಗಳು ಇತರ ಯಾವುದೇ ಗುಂಪಿನಷ್ಟೇ ಅಥವಾ ಇನ್ನೂ ಉತ್ತಮವಾಗಿ ಏಸುವಿನ ಉದ್ದೇಶ ಮತ್ತು ಆಸಕ್ತಿಯನ್ನು ತಮ್ಮ ನಿರ್ದಿಷ್ಟ ಚರ್ಚ್‌ನತ್ತ ಇದೆಯೇ ಅಥವಾ ಏಸುವಿನತ್ತ ಇದೆಯೇ ಎನ್ನುವುದು."

ಥಾಕೂರ್ ತಕ್ಷಣ ಉತ್ತರ ನೀಡಿದರು: "ಚರ್ಚ್ ಭಗವಂತನ ಧಾಮವೆಂದು ನಾನು ನಂಬುತ್ತೇನೆ. ಆದ್ದರಿಂದಲೇ, ಸಕ್ರಿಯ, ಸ್ಫೂರ್ತಿದಾಯಕ ಪರಮಾತ್ಮನನ್ನು ಪ್ರೀತಿಸುವುದು ಮತ್ತು ಅವನಿಗಾಗಿ ಮಾತ್ರ ಅವನ ಧಾಮವನ್ನು ಪ್ರೀತಿಸುವುದು. ಐಕಮತ್ಯಕ್ಕೆ ಮಾರ್ಗದರ್ಶಕವಾಗುವ ಭಗವಂತನ ಕೃಪೆಯಾಗಿಸುತ್ತದೆ. ಆದರೆ ಚರ್ಚ್‌ನ ಮೇಲಿನ ಪ್ರೀತಿಯಿಂದಾಗಿ ಭಗವಂತನನ್ನು ಪ್ರೀತಿಸುವುದು ಕ್ಷಣಮಾತ್ರದ ಒಂದು ಪುಟ್ಟ ಕೃಪೆಯನ್ನು ಪಡೆದಂತಾಗುತ್ತದೆ."

ತುಂಬಾ ಹೊತ್ತಿನಿಂದ ಮೌನವಾಗಿದ್ದ ವಿದ್ವಾಂಸರು ಮುಂದೆ ವಾಲಿದರು. "ಥಾಕೂರ್, ಇದರಲ್ಲಿ ಬೇರೆ ಸಮಸ್ಯೆಗಳು ಸಹ ಅಡಗಿವೆ. ಅನೇಕ ಚರ್ಚ್‌ಗಳು ಏಸುವಿನತ್ತ ಮೂಲ ನಿಷ್ಠೆಗೆ ಮಾನ್ಯತೆ ನೀಡುತ್ತವೆಯಾದರೂ, ಸಮಸ್ಯೆಯೆಂದರೆ



ಮತ್ತೊಂದು ಗುಂಪಿನೊಂದಿಗೆ ಯಾವಾಗ ಮತ್ತು ಹೇಗೆ ರಾಜಿಮಾಡಿಕೊಳ್ಳಬೇಕು.... ಯಾವ ಧಾರ್ಮಿಕ ಕರ್ಮಗಳನ್ನು ಇಟ್ಟುಕೊಳ್ಳಬೇಕು.... ಯಾವುದನ್ನು ಕೈಬಿಡಬೇಕು.. ಯಾರ ಅರ್ಥೈಸುವಿಕೆಯನ್ನು ಉಳಿಸಿಕೊಳ್ಳಬೇಕು.... ಯಾರ ಅಧಿಕಾರವನ್ನು ಒಪ್ಪಿಕೊಳ್ಳಬೇಕು, ಇತ್ಯಾದಿ ಎನ್ನುವುದು ವಾಸ್ತವಿಕವಾಗಿ, ಈ ಸಮಸ್ಯೆಗಳು ಎಷ್ಟೊಂದು ಸೂಕ್ಷ್ಮ ಮತ್ತು ಎಷ್ಟೊಂದು ಅಸಂಖ್ಯಾತವೆಂದರೆ, ಇವನ್ನು ದೈವಾನುಗ್ರಹದಿಂದ ಅಥವಾ ಮಾನವ ಪ್ರಯತ್ನಗಳ ಮೂಲಕ ಪರಿಹರಿಸುವ ಸಾಧ್ಯತೆ ನಿಜಕ್ಕೂ ತಿರುಕನ ಕನಸಾಗಿದೆ."

ಥಾಕೂರ್ ಪಟ್ಟುಬಿಡದೆ ಮೃದುವಾಗಿ ಮಾತನಾಡಿದರು. "ಭಗವಂತನ ಅಭಿಲಾಷೆ ಮತ್ತು ಕಲ್ಯಾಣವನ್ನು ಈಡೇರಿಸಲು ಅವನ ಬಗ್ಗೆ ಪ್ರೀತಿ ತುಂಬಿದ ಹೃದಯ ಮತ್ತು ಮನಸ್ಸು, ಅನುಕಂಪ ಪ್ರವಹಿಸುವ ಒಂದು ಅಂತರ್ಗತ ದೂರದೃಷ್ಟಿಯನ್ನು ಅನಾವರಣಗೊಳಿಸುತ್ತವೆ ಮತ್ತು ಇದು ವಿಭಿನ್ನ ಆಸಕ್ತಿಗಳನ್ನು ಸಮನ್ವಯಗೊಳಿಸುತ್ತದೆ. ಕೆಡುಕನ್ನು ಒಳಿತಾಗಿ ಹಾಗೂ ಮರಣವನ್ನು ಜೀವನವಾಗಿ ಪರಿವರ್ತಿಸುತ್ತದೆ. ಇದೇ ದೈವಾನುಗ್ರಹದ ಕಟ್ಟಳೆ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ.

"ಅಂತರ್ಗತ ದೂರದೃಷ್ಟಿಯೆಂದರೇನು?"

"ಒಳ್ಳೆಯ ಪ್ರಶ್ನೆ ! ಭಗವಂತನನ್ನು ಅನುಸರಿಸುವುದರಿಂದ ಸಮನ್ವಯತೆ ಮತ್ತು ದೂರದೃಷ್ಟಿ ಹೇಗೆ ಮೂಡಿ ಬರುತ್ತವೆಯೆಂದು ನೋಡಿರಿ. ನಿಮ್ಮಲ್ಲಿ ಈ ಅಚಲ ನಿಷ್ಠೆಯಿದ್ದಲ್ಲಿ, ನಿಮ್ಮ ಆಲೋಚನೆ, ವಾಕ್, ಕ್ರಿಯೆ, ಸ್ನಾಯು, ನರ, ರಕ್ತ... ಎಲ್ಲವೂ ಅವನ ಉದ್ದೇಶವನ್ನು ಈಡೇರಿಸಲು ಒಂದೇ ಜಾಗದಲ್ಲಿ ತೊಡಗುತ್ತವೆ. ಆಗ ಒಂದೇ ಸಲಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ ಒಂದೇ ಮದ್ದಳವನ್ನು ಬಾರಿಸಲು ಸುಲಭವಾಗುತ್ತದೆ. ಸ್ಮರಣಶಕ್ತಿ ಚುರುಕಾಗುತ್ತದೆ. ಯಾವುದೇ ಮನಸ್ಸು ಬಿಟ್ಟು ಹೋಗುವುದಿಲ್ಲ. ಇನ್ನೂ ಹೇಳಬೇಕೆಂದಲ್ಲಿ ಯಾವುದಾದರೂ ಕೆಲಸಕ್ಕೆ ಅಗತ್ಯವಾಗುವ ವ್ಯಕ್ತಿಯ ಚಿತ್ರ ಮನಸ್ಸಿಗೆ ಹೊಳೆದು ಅವನನ್ನು ಹೇಗೆ ಸಮೀಪಿಸಬೇಕೆಂದು ಸಹ ತಿಳಿಸುತ್ತದೆ. ಯಾವುದೇ ಅವಕಾಶ ಕಳೆದುಹೋಗುವುದಿಲ್ಲ. ಅಕ್ಕಪಕ್ಕದ ಎಲ್ಲಾ ಮನುಷ್ಯರು ಮತ್ತು ಜೀವಿಗಳ ಬಗ್ಗೆ ಬುದ್ಧಿ ಚುರುಕಾಗುತ್ತದೆ.. ಯಾರು ಎಲ್ಲಿ ಅಗತ್ಯವಾಗುತ್ತಾರೆ. ಯಾವ ಪರಿಸ್ಥಿತಿಯಡಿ ಯಾವುದನ್ನು ಹೇಗೆ ಬಳಸಿಕೊಳ್ಳಬೇಕು.. ಯಾವ ರೀತಿ ಯಶಸ್ಸನ್ನು ಸಾಧಿಸಬಹುದು. ಎಲ್ಲಿ ಮತ್ತು ಯಾರಿಂದ, ಯಾರ ಜತೆಗಾರಿಕೆಯ ಮೂಲಕ ಮತ್ತು ಯಾವ ರೀತಿಯ ಪ್ರಯೋಗದಿಂದ ಮುಂತಾಗಿ, ಇವೆಲ್ಲವೂ ನಿಮ್ಮ ಮಿದುಳಿನಲ್ಲಿ ಸ್ವರಮೇಳವನ್ನು ನಿನಾದಿಸುತ್ತವೆ. ಇದೇ, ನನ್ನ ಪ್ರಕಾರ, ಒಬ್ಬನೇ ವ್ಯಕ್ತಿ ಲಕ್ಷಾಂತರ ಕೆಲಸಗಳನ್ನು ಮಾಡುವ ಸಾಮರ್ಥ್ಯವನ್ನು ಒದಗಿಸುತ್ತದೆ. ಇದಲ್ಲದೆ, ಭಗವಂತನನ್ನು ಈ ರೀತಿ ಪ್ರೀತಿಸುವವನು, ಬೇರೆಯವರ

ಗುಣಗಳು ಮತ್ತು ಅಗತ್ಯವನ್ನು ಪೋಷಿಸಿ, ಈಡೇರಿಸಲು ಸಾಧ್ಯವಾದಷ್ಟು ಮಟ್ಟಿಗೆ ಎಚ್ಚರಿಕೆ ವಹಿಸುತ್ತಾನೆ. ಈ ವಿಧಾನವೇ ಮತ್ತೊಬ್ಬರಲ್ಲಿ ನಿಮ್ಮ ಬಗ್ಗೆ ಸ್ವಂತಿಕೆಯ ಭಾವನೆಯನ್ನು ಮೂಡಿಸಬಹುದು. ಒಬ್ಬ ಸಾಧಾರಣ ವ್ಯಕ್ತಿ ಸಾಧಾರಣ ಜನರ ಮೂಲಕ ಅಸಾಧ್ಯವಾದುದನ್ನು ಸಾಧ್ಯವಾಗಿಸಬಹುದೆಂದೂ ಸಹ ಅರಿತುಕೊಳ್ಳುವ ಮಾರ್ಗವೂ ಇದೇ ಆಗಿದೆ. ಹೌದು, ಈ ರೀತಿಯ ಕೆಲಸ, ಈ ರೀತಿಯ ಚರ್ಚ್ ಅಥವಾ ಆಂದೋಲನವನ್ನು ಮಾತ್ರ ನಿಜಕ್ಕೂ ಸಂಸ್ಥೆಯೆಂದು ಕರೆಯಬಹುದು. ಮತ್ತು ಇದರ ಆತ್ಮ, ಇದರ ರಕ್ತ ಮತ್ತು ಮೂಳೆಯೆಂದರೆ ಐಕಮತ್ಯ– ಭಗವಂತನಲ್ಲಿ ಕೇಂದ್ರೀಕೃತವಾದ ಉದ್ದೇಶ. ಚುಟುಕಾಗಿ ಹೇಳುವುದಾದರೆ, ನೀವು ಭಗವಂತನತ್ತ ಜಾಗೃತರಾದಲ್ಲಿ, ಅವನ ಒಲವನ್ನು ಸ್ಥಾಪಿಸುವಲ್ಲಿ ಸಕ್ರಿಯ ಆಸಕ್ತಿ ವಹಿಸಿದಲ್ಲಿ ಮತ್ತು ಇತರರನ್ನು ಇದೇ ರೀತಿ ಸ್ಫೂರ್ತಿಗೊಳಿಸಿದಲ್ಲಿ ಶಕ್ತಿ, ಮನೋ ಇಚ್ಛೆ ಮತ್ತು ಉದ್ದೇಶದ ಸಂಘಟನೆ ನಿಸ್ಸಂದೇಹವಾಗಿರುತ್ತವೆ. ಆದರೆ ನಿಮ್ಮ ವ್ಯಕ್ತಿತ್ವ ಹೊಂದಾಣಿಸಿಕೊಳ್ಳದಿದ್ದಲ್ಲಿ, ಸಮಗ್ರಗೊಳ್ಳದಿದ್ದಲ್ಲಿ ಮತ್ತು ಭಗವಂತನತ್ತ ಪೂರ್ಣತೆಯನ್ನು ಬೆಳೆಸಿಕೊಳ್ಳದಿದ್ದಲ್ಲಿ, ನೀವು ಇತರರೊಂದಿಗೆ ಹೊಂದಾಣಿಕೆ ಅಥವಾ ಸಮಗ್ರತೆಯನ್ನು ಕಲ್ಪಿಸಲು ಆಗುವುದಿಲ್ಲ."

ತರುಣಿಯು ಮೆಲ್ಲಗೆ ಕೆಮ್ಮಿದಳು. "ಥಾಕೂರ್, ಇನ್ನೂ ಕಠಿಣವಾದ ಮತ್ತೊಂದು ಸಂಗತಿಯಿದೆ: ಒಬ್ಬ ಸಾಮಾನ್ಯ ವ್ಯಕ್ತಿಯು ಇಂತಹ ಎಲ್ಲಾ ಮತಧರ್ಮಶಾಸ್ತ್ರದ ತಾರ್ಕಿಕ ಚಿತ್ರಹಿಂಸೆ ಮತ್ತು ದೇವತಾಶಾಸ್ತ್ರಜ್ಞರ ಅತಿಸೂಕ್ಷ್ಮ ತಾರತಮ್ಯದ ಬಗ್ಗೆ ಏನು ಮಾಡಬೇಕು? ನನ್ನಂತಹ ಜನರು ಇವೆಲ್ಲವೂ ವ್ಯರ್ಥವೆಂದು ಕೈಬಿಡುವಂತೆ ಮಾಡುತ್ತದೆ."

ಥಾಕೂರ್ ತಲೆಯಲ್ಲಾಡಿಸಿದರು, "ಸಮತೋಲನ ಕಳೆದುಕೊಳ್ಳಬೇಡಿ; ಭಾವಶೂನ್ಯರಾಗಬೇಡಿ.. ನಿಮ್ಮ ದೇವರನ್ನು ನಿಮ್ಮಲ್ಲಿ ಸ್ವ–ಸಂಕಲ್ಪದಿಂದ ಮತ್ತು ಸಹಾನುಭೂತಿಯ ಪೋಷಣೆಯಿಂದ ಮೈಗೂಡಿಸಿಕೊಳ್ಳಿರಿ. ಅವನನ್ನು ಪ್ರೀತಿಸಲು ಇಚ್ಛಿಸುವ ಎಲ್ಲರನ್ನೂ ಸ್ಥೈರಿಸಿರಿ. ಈ ವಿಧವಾಗಿ ಕುಶಲ ಮತ್ತು ವಿಚಾರಾತ್ಮಕ ಚಟುವಟಿಕೆಯ ಮೂಲಕ ಅವನೊಂದಿಗೆ ಸ್ಪಂದಿಸಿರಿ. ಸದಾ ಏಸುವನ್ನು ಜಿಜ್ಞಾಸೆಯ ಶ್ರದ್ಧೆ ಮತ್ತು ಮುಕ್ತ ಕುತೂಹಲತೆಯಿಂದ ಅಪಾರ್ಥರಹಿತರನ್ನಾಗಿ ಮಾಡಿರಿ. ಸಮಚಿತ್ತದ ಕುಶಲತೆಯಿಂದ ನಿಮ್ಮನ್ನು ಮತ್ತು ಇತರರನ್ನು ಈ ರೀತಿ ನಿರ್ವಹಿಸಿರಿ; ನಿಮ್ಮ ಮಾತು, ವರ್ತನೆ ಮತ್ತು ಸೇವೆಯ ಮೂಲಕ ಪ್ರತಿಯೊಬ್ಬರಲ್ಲೂ ಅವನನ್ನು ವ್ಯಾಪನಗೊಳಿಸಿರಿ. ನೀವು ಎಲ್ಲರನ್ನೂ ಇವನತ್ತ – ಈ ಏಕತ್ವದತ್ತ ಒಯ್ಯುತ್ತೀರಿ ಎಂದು ನನಗೆ ಗೊತ್ತು. ನಿಮ್ಮಲ್ಲಿ ದಿವ್ಯ ತೇಜಸ್ಸನ್ನು ಮಿಂಚಿಸುವ ಈ ಅಚಲ ಅಂಗೀಕಾರವು ನರಕಸದೃಶ ಹೃದಯಗಳನ್ನು ಸ್ವರ್ಗದೆಡೆಗೆ ಆಶ್ಚರ್ಯಕರವಾಗಿ ಸೆಳೆಯುತ್ತದೆ !"



ತರುಣಿಯು ಕ್ಷಣಕಾಲ ಆಲೋಚಿಸಿ ಮಾತನಾಡಿ, "ಥಾಕೂರ್, ನೀವು ಎಲ್ಲವನ್ನೂ ಎಷ್ಟು ಸರಳಗೊಳಿಸಿದ್ದೀರಿ ಎಂದರೆ ನಾನು ನಿಮ್ಮ ಮಾತನ್ನು ನಂಬಲು ಈಗಾಗಲೇ ಸಿದ್ಧಳಾಗಿದ್ದೇನೆ. ಆದರೆ ಇಲ್ಲಿ ತೊಂದರೆಯೆಂದರೆ ನಾವು ಬಹಳ ದೂರ ಹೋದಾಗ, ಈ ಸಂದೇಹಗಳೆಲ್ಲ ಮತ್ತೆ ತಲೆದೋರುತ್ತವೆ. ಇಲ್ಲಿ ಈಗ ನನ್ನಲ್ಲಿ ಮೂಡಿರುವ ನಂಬಿಕೆಯನ್ನು ಉಳಿಸಿಕೊಳ್ಳಲು ಹೇಗೆ ಸಾಧ್ಯ?"

ಥಾಕೂರ್ ಮಂದಹಾಸ ಬೀರಿದರು. "ನಂಬಿಕೆ ಹುಟ್ಟುವುದು ಮತ್ತು ನಂಬಿಕೆ ಇರುವುದು ಒಂದೇ ಆಗುವುದಿಲ್ಲ. ನಂಬಿಕೆ ಇರುವುದೆಂದರೆ ಅದನ್ನು ಒಬ್ಬರ ಅಸ್ತಿತ್ವದ ಮೇಲೆ ನಿರ್ಮಿಸಬೇಕು. ಇಲ್ಲದಿದ್ದಲ್ಲಿ ಇದನ್ನು ಸಾಧಿಸಲಾಗುವುದಿಲ್ಲ. ಇಂತಹ ನಂಬಿಕೆ ಇರದಿದ್ದಲ್ಲಿ ತಿಳುವಳಿಕೆ ಸದೃಢವಾಗಿರುವುದಿಲ್ಲ. ಈ ಕ್ಷಣದಲ್ಲಿ ನೀವು ಅರಿತುಕೊಂಡಿದ್ದೀರಿ, ಆದರೆ ನಂತರ ಪ್ರತಿಕೂಲ ಪರಿಗಣನೆಗಳು ಹುಟ್ಟಬಹುದು. ತದ್ವಿರುದ್ಧ ಯೋಚನೆಗಳು ಉಂಟಾದಾಗ ನೀವು ವಿರೋಧವಾದ ವಾತಾವರಣದಲ್ಲಿ ಇರಲು ಸಾಧ್ಯವಿಲ್ಲ. ಆದರೆ ನಂಬಿಕೆ ನಿಜವಾಗಿಯೂ ಇದ್ದಲ್ಲಿ, ಯಾವುದೇ ಸಂದೇಹಗಳು ಇದಕ್ಕೆ ಅಡ್ಡ ನಿಲ್ಲುವುದಿಲ್ಲ. ಆಗ ನೀವು ಯಾರನ್ನೇ ಆಗಲಿ ಎದುರಿಸಬಹುದು. ಆಗ ತರ್ಕ ಮತ್ತು ವಿವೇಕ ನಿಮ್ಮಲ್ಲಿ ಸ್ಫುರಿಸುತ್ತವೆ. ನಿಮ್ಮ ಭಗವಂತನು ಮಾಡುವ ಅಂತರಾರ್ಥಗಳು ನಿಮಗೆ ತೋರದಿರಬಹುದು. ಆದರೆ ನಿಮ್ಮ ನಂಬಿಕೆ ಅಚಲವಾಗಿರುತ್ತದೆ. ನಿಮ್ಮ ಭಗವಂತನು ಮಾಡುವ ಎಲ್ಲವೂ ವ್ಯಕ್ತಿಯ ಮತ್ತು ಸಾಮೂಹಿಕ ಅಸ್ತಿತ್ವದ ಅಪಾರ ಪ್ರಯೋಜನಕ್ಕಾಗಿರುತ್ತದೆ ಎಂದು ನಿಮಗೆ ಗೊತ್ತು. ಈ ನಂಬಿಕೆಯು, ಅಗತ್ಯವುಂಟಾದ ಸಮಯದಲ್ಲಿ ಅಗತ್ಯ ವಿವೇಕ ಮತ್ತು ತರ್ಕವನ್ನು ಒದಗಿಸುತ್ತದೆ. ಆದರೆ ಈ ನಂಬಿಕೆಯನ್ನು ಮಂದಗೊಳಿಸುವಂತಹ ಯಾವುದೇ ನುಡಿ, ನಡೆ ಮತ್ತು ಕ್ರಿಯೆಗಳಿಗೆ ಅವಕಾಶ ಕೊಡಕೂಡದು; ತಮಾಷೆಗಾಗಿಯೂ ಸಹ. ಇಂತಹ ಪಡಪೋಸಿ ವಿಧಾನಗಳು, ಮಾತುಗಳು, ಕೆಲಸಗಳು ಮತ್ತು ಸಹವಾಸಗಳು ಸುಪ್ತವಾಗಿ ಮನುಷ್ಯನಿಗೆ ತುಂಬಾ ಕೆಡುಕನ್ನು ಉಂಟುಮಾಡುತ್ತವೆ. ಬಿಕ್ಕಟ್ಟಿನ ಪರಿಸ್ಥಿತಿ ತಲೆದೋರುವವರೆಗೂ ಇದು ಎಷ್ಟು ಹಾನಿಕರವೆಂದು ನೀವು ಮನಗಾಣುವುದಿಲ್ಲ. ಬಹುಶಃ ಸಾಧಾರಣ ಸಮಯಗಳಲ್ಲಿ ನೀವು ಸರಿಯಾಗಿರಬಹುದು. ಆದರೆ ಭಗವಂತನನ್ನು ಸಾಧಿಸಿಕೊಳ್ಳುವ ಪಥದಲ್ಲಿ ನೀವು ಎದುರಿಸಬೇಕಾದ ಅಪಾರ ಅಡಚಣೆಗಳು, ಅಪಾಯಗಳು, ಕ್ಲೇಶಗಳು, ನೋವುಗಳು, ತ್ಯಾಗಗಳು, ಬಯಕೆಗಳು ಮತ್ತು ಅಭಿಲಾಷೆಗಳ ನಿಗ್ರಹದಿಂದಾಗಿ ನೀವು ಕುಸಿದು, ಹಿಮ್ಮೆಟ್ಟಬಹುದು. ನಿಮ್ಮೊಳಗೆ ಆದರೆ–ಗೀದರೆಗಳಿದ್ದಲ್ಲಿ ನೀವು ನಿಮ್ಮ ಭಗವಂತನಿಗಾಗಿ ತಲೆ ಎತ್ತಿ ನಡೆದಾಡಲು, ಅಥವಾ ದೃಢವಾಗಿ ನಿಲ್ಲಲು ಆಗುವುದಿಲ್ಲ."

"ಅಯ್ಯೋ, ಥಾಕೂರ್ ಜೀ, ಏಸುವಿನತ್ತ ಇಷ್ಟು ಸಂಪೂರ್ಣ ನಿಷ್ಠೆ ನನ್ನಂತಹ

ಸಾಮಾನ್ಯ ಜನರ ಸಾಮರ್ಥ್ಯವನ್ನು ಮೀರಿರುತ್ತದೆ," ಎಂದು ಉದ್ಗರಿಸಿದ ತರುಣಿಯಲ್ಲಿ ಒಂದು ಬಗೆಯ ಹತಾಶೆ ತೋರಿತು. "ಈ ರೀತಿಯ ನಿಷ್ಠೆ ಪುರೋಹಿತರು, ಪಾದ್ರಿಗಳು ಮತ್ತು ತಮ್ಮ ಸಕಲವನ್ನೂ ಏಸುವಿಗೆ ಸಮರ್ಪಿಸಿರುವ ಜನರಿಗಾಗಿ ಸೂಕ್ತವಾಗಿರುತ್ತದೆ."

"ಆದರೆ ನಿಮ್ಮ ದೇವರತ್ತ ಸೇವೆ ಸಲ್ಲಿಸಲು ಇತರರನ್ನು ಅವಲಂಬಿಸುವುದು ತಪ್ಪು ಭಾವನೆಯಾಗಿರುತ್ತದೆ ಮತ್ತು ನಿಮ್ಮನ್ನು ಹಾಗೂ ನಿಮ್ಮ ದೇವರನ್ನು ತೃಣೀಕರಿಸುತ್ತದೆ. ಮಿಗಿಲಾಗಿ ಏಸು ಹೇಳಿರುವಂತೆ... ನಿನ್ನ ಪಿತನು ಪರಿಪೂರ್ಣನಾಗಿರುವಂತೆ ನೀನೂ ಸಹ ಪರಿಪೂರ್ಣವಾಗಬೇಕು..." ಎಂದು ಠಾಕೂರ್ ಗಾಂಭೀರ್ಯದಿಂದ ನುಡಿದರು.

ಠಾಕೂರ್ ಆಗ ತಾನೇ ಬಂದ ಕೆಲವು ಜನರೊಂದಿಗೆ ಮಾತನಾಡಲು ತಿರುಗಿದಾಗ, ಅಮೆರಿಕನ್ನರು ಮೆಲುಧ್ವನಿಯಲ್ಲಿ ಪರಸ್ಪರ ಸಂಭಾಷಣೆಯನ್ನು ಮುಂದುವರೆಸಿದರು.

* * * *



## ೪. ಪೋಪ್ : ಪ್ರಮುಖ ಅಥವಾ ಪ್ರತಿಕೂಲ

ಅನೇಕ ಮಂದಿ ತೆರಳಿಹೋಗುತ್ತಿದ್ದಂತೆ, ಠಾಕೂರ್, ತೀವ್ರಾಸಕ್ತಿಯ ವಾದದಲ್ಲಿ ತೊಡಗಿದ್ದ ಅಮೆರಿಕನ್ ಭೇಟಿಗರತ್ತ ಪ್ರಶ್ನಾತ್ಮಕವಾಗಿ ನೋಡಿದರು. ಅವರ ಈ ನೋಟವು ಕನ್ನಡಕ ಧರಿಸಿ ಗಂಭೀರವಾಗಿ ಕಾಣುತ್ತಿದ್ದ ಯುವಕನು, "ಠಾಕೂರ್, ಎಲ್ಲಾ ಪ್ರಾಟೆಸ್ಟಂಟ್‌ರು ಏಸುವಿನಲ್ಲಿ ಒಗ್ಗೂಡುತ್ತಾರೆ ಎಂದು ಇಟ್ಟುಕೊಂಡರೂ, ಕ್ಯಾಥೊಲಿಕ್ ಮತ್ತು ಪ್ರಾಟೆಸ್ಟಂಟ್ ನಡುವಣ ಅಂತರ ಇದ್ದೇ ಇರುತ್ತದೆ ಎನ್ನುವುದರ ಬಗ್ಗೆ ನಾವು ಮಾತನಾಡುತ್ತಿದ್ದೆವು. ತಮ್ಮ ಮತ್ತು ದೇವರ ನಡುವೆ ಒಬ್ಬ ಮಧ್ಯಸ್ಥನ ಅಗತ್ಯವಿರುತ್ತದೆಯೆಂದು ಕ್ಯಾಥೊಲಿಕರು ಭಾವಿಸುವುದರಿಂದ ಇದು ಉಂಟಾಗುತ್ತದೆ. ಎಲ್ಲಾ ವಿಶ್ವಾಸಿಗಳ ಪೌರೋಹಿತ್ಯದಲ್ಲಿ ನಂಬಿಕೆ ಇಟ್ಟಿರುವ ಪ್ರಾಟೆಸ್ಟಂಟ್ ಭಾವನೆಗಳಿಗೆ ಸಂಪೂರ್ಣವಾಗಿ ತದ್ವಿರುದ್ಧವಾಗಿರುತ್ತದೆ. ದೇವರನ್ನು ಬಿಟ್ಟು ಇತರ ಯಾರ ಮೇಲೂ ಅವಲಂಬಿಸಬೇಕೆಂಬ ಯಾವುದೇ ಅಗತ್ಯ ನಮಗೆ ಇಲ್ಲ" ಎಂದು ಅಭಿಪ್ರಾಯಪಟ್ಟನು.

ಠಾಕೂರ್ ಮೆಲ್ಲಗೆ ತಲೆಯಾಡಿಸಿದರು. "ಆದರೆ ಮನುಷ್ಯನ ಅಸ್ತಿತ್ವವೇ ಇತರರನ್ನು ಅವಲಂಬಿಸಿದೆಯೆಂದು ನಾನು ಭಾವಿಸುತ್ತೇನೆ. ನೀನು ಎಂದು ಬೇರೆ ಯಾರಾದರೂ ಇದ್ದಲ್ಲಿ, ಮತ್ತು ಅವನನ್ನು (ಭಗವಂತನನ್ನು) ಸಂಪ್ರೀತಗೊಳಿಸಬೇಕೆಂಬ ಹೆಬ್ಬಯಕೆಯಿಂದಾಗಿ ಬಿಗು ಪರಿಸ್ಥಿತಿ ಉಂಟಾದಲ್ಲಿ ಆಗ ನಮ್ಮ ಸೂಕ್ಷ್ಮತೆ ಮತ್ತು ಇತರರ ಅಭಿಪ್ರಾಯಗಳನ್ನು ಸ್ವೀಕರಿಸುವ ಮನೋಭಾವನೆ ವೃದ್ಧಿಯಾಗುತ್ತದೆ ಮತ್ತು ಇದರಿಂದ ನಾವು ಬೆಳೆಯುತ್ತೇವೆ."

"ಆದರೆ ಠಾಕೂರ್ ನೀವು ಎನ್ನುವುದು, ಭಗವಂತನಾಗಲು ಸಾಧ್ಯವಿಲ್ಲವೇ?"

"ವೈದಾಳಿಸಿಕೊಂಡ ವ್ಯಾಮೋಹವಿಲ್ಲದೆ ಪೊಳ್ಳುತನ ಮತ್ತು ಭಾವೋದ್ರೇಕದಿಂದ ಹುಟ್ಟಡಗಿಹೋಗುವ ಅಪಾಯ ಸದಾ ಇದ್ದೇ ಇರುತ್ತದೆಯೆನ್ನುವ ಭೀತಿ ನನಗಿದೆ" ಎಂದು ವಿವರಿಸಿದ ಠಾಕೂರ್, ಏಕೀಕರಣದತ್ತ ಆ ಸ್ವಾಭಾವಿಕ ಪ್ರವೃತ್ತಿಯ ನಮ್ಮ ಮಾನಸಿಕ ಪ್ರಚೋದನೆ, ತನ್ನನ್ನು ಬಂಧಿಸಲು ಯಾವುದಾದರೂ ಒಂದನ್ನು – ತಾಯಿ, ಶಿಕ್ಷಕ, ಭಗವಂತ – ಅರಸುತ್ತದೆ. ಈ ರೀತಿಯ ವ್ಯಾಮೋಹದಿಂದಲೇ ಮನುಷ್ಯನು ಬೆಳೆಯುತ್ತಾನೆ."

ಅಮೆರಿಕನ್ ಹುಡುಗಿ ಇದನ್ನು ನಂಬಲಿಲ್ಲ. "ಆದರೂ ಇದು ಸರ್ವಶಕ್ತ ಭಗವಂತನ ಚೇತನ ಯಾಕಾಗಿರಬಾರದೆಂದು ನನಗೆ ಅರ್ಥವಾಗುತ್ತಿಲ್ಲ."

ಥಾಕೂರ್ ಉತ್ತರಿಸುತ್ತಾ "ಆದರೆ ಮನಷ್ಯನಿಲ್ಲದ ದೇವರು ನನಗೆ ಅರ್ಥವಾಗುತ್ತಿಲ್ಲವಲ್ಲಾ. ದೇವರು ಅಸ್ತಿತ್ವದಲ್ಲಿದ್ದರೂ ಸಹ, ಅವನ ಬಗ್ಗೆ ಏನು ಮಾಡಬೇಕೆಂದು ನನಗೆ ಗೊತ್ತಿಲ್ಲ. ನಾನು ಭಗವಂತನ ಬಗ್ಗೆ ಮಾತನಾಡಿದಾಗ, ಸರ್ವಶಕ್ತ, ಸರ್ವವ್ಯಾಪಿ ಮತ್ತು ಸರ್ವಜ್ಞ ಗುಣಗಳು ಸಜೀವವಾಗಿರುವ ಆ ಒಬ್ಬನ ಬಗ್ಗೆ ಆಲೋಚಿಸುತ್ತೇನೆ. ಕರುಣೆಯ ಬಗ್ಗೆ ಮಾತನಾಡುವಾಗ ನಾವು ಒಬ್ಬ ಕರುಣಾಮಯಿಯ ಬಗ್ಗೆ ಚಿಂತಿಸುತ್ತೇವೆ. ಕರುಣಾಮಯಿ ಇಲ್ಲದಿದ್ದಲ್ಲಿ, ಕರುಣೆ ಅಸ್ತಿತ್ವದಲ್ಲಿರಲು ಸಾಧ್ಯವೇ? ಮತ್ತು ಇದು ನಮಗೆ ಹೇಗೆ ಗೊತ್ತಾಗುತ್ತದೆ?"

"ನಾವು ಗುಣದ ಬಗ್ಗೆ ಆಲೋಚಿಸುತ್ತಿದ್ದೇವೆಯೇ ಅಥವಾ ಮನುಷ್ಯನ ಬಗ್ಗೆ ಆಲೋಚಿಸುತ್ತಿದ್ದೇವೆಯೇ ಎನ್ನುವುದರಲ್ಲಿ ವಾಸ್ತವಿಕ ವ್ಯತ್ಯಾಸವೇನು?"

ಥಾಕೂರ್ ಮುಗುಳುನಕ್ಕರು. "ಒಂದು ಸಜೀವ ಮತ್ತು ಸಶರೀರ ವ್ಯಕ್ತಿತ್ವದ ಬಗ್ಗೆ ನಾವು ನಿಷ್ಠೆ ಅಥವಾ ಪರಿಪಾಲನೆಯನ್ನು ಹೊಂದಿರದಿದ್ದಲ್ಲಿ, ಜೀವನ ನಿಸ್ಸಾರವಾಗುತ್ತದೆಯೆಂದು ನನಗೆ ತೋರುತ್ತದೆ. ಆಗ ನಾವು ಅವನನ್ನು ಸಂಪ್ರೀತಗೊಳಿಸಲು ಅದ್ಭುತಗಳನ್ನು ಸಾಧಿಸಿ, ಇನ್ನೂ ಹೊಸ, ಹೊಸ ಗುಣಗಳನ್ನು ಗಳಿಸುತ್ತೇವೆ. ಯಾಕೆ ? ಏಕೆಂದರೆ ಅವನ ಬಗ್ಗೆ ನಮ್ಮ ಪ್ರೀತಿ ನಮ್ಮ ಜೀವನದಲ್ಲಿ ಈ ರೀತಿ ಪ್ರಜ್ಞಾರಹಿತವಾಗಿ ನಮ್ಮ ವಿಕಸನ ನಡೆಯುತ್ತದೆ. ಈ ಕಾರಣದಿಂದಲೇ ಭಗವಂತನತ್ತ ಅನುರಾಗ ಇರಬೇಕೆಂದು ನಾನು ಸಾರುತ್ತೇನೆ. ಆದ್ದರಿಂದ ನಿಮ್ಮ ಭಗವಂತ ಪರಮೋಚ್ಚವಾಗಿರಲಿ; ಆದರೆ ಪ್ರಾಪಂಚಿಕ ಮೂರ್ತೀಕರಣದಿಂದ ನಿಮ್ಮಲ್ಲಿ ವಿಕಸಿತಗೊಳ್ಳುವ ಅವನನ್ನು ಅಸಡ್ಡೆಮಾಡಬೇಡಿರಿ. ಇಲ್ಲದಿದ್ದಲ್ಲಿ, ಮನುಷ್ಯನಲ್ಲಿ ಪೊಳ್ಳುತನ ಉಂಟಾಗುತ್ತದೆ."

"ಮೂರ್ತಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು, ಥಾಕೂರ್, ನೀವು ಇವನ್ನು ಸಾಕಾರತೆಯೆಂದು ಕರೆಯುತ್ತೀರಾ?" ಆ ತರುಣಿಯ ಧ್ವನಿ ಭಯಗ್ರಸ್ತವಾದಂತೆ ತೋರಿತು.

ಥಾಕೂರ್ ಅವರ ಕಣ್ಣುಗಳು ಮಿಂಚಿದವು. "ಮನುಷ್ಯನು ಬಹುತೇಕವಾಗಿ ವಿಗ್ರಹಾರಾಧಕನಾಗಿರುತ್ತಾನೆಂದು ನಾನು ಭಾವಿಸುವುದಿಲ್ಲ; ಆದರೂ ಅವನ ಇಷ್ಟದೈವದ ಚಿತ್ರ ಮತ್ತು ಬಿಂಬ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ. ಮನುಷ್ಯನು ದೇವರತ್ತ ತನ್ನ ಪ್ರೀತಿ ಮತ್ತು ಮೆಚ್ಚುಗೆಯನ್ನು ಕೈಬಿಡಲು ಇಷ್ಟಪಡುವುದಿಲ್ಲವಾದ್ದರಿಂದ, ಗತಕಾಲದಿಂದ ಇಂದಿನವರೆಗೆ ಅವನನ್ನು ಕುರಿತ ತನ್ನ ಜ್ಞಾಪಕಶಕ್ತಿಯನ್ನು ಶ್ರದ್ಧಾಭಕ್ತಿಯಿಂದ ಉಳಿಸಿಕೊಳ್ಳಲು ಯತ್ನಿಸುತ್ತಾನೆ. ಇದು ಅಪರಾಧವೇ? ಇದು ಸಂಸ್ಕೃತಿಗೆ ಅಡಚಣೆಯೇ? ಪ್ರೀತಿ ಉತ್ತರಿಸುತ್ತದೆ : 'ಇಲ್ಲ!.' ಗೌರವ ಮತ್ತು ಆರಾಧನ ಪ್ರತಿಧ್ವನಿಸುತ್ತವೆ: 'ಇಂತಹ ವ್ಯಕ್ತಿ ವಿಗ್ರಹಾರಾಧಕನಲ್ಲ; ಅವು ಆರಾಧನಾ ಯೋಗ್ಯ' ಎಂದು."



ದಟ್ಟ ಕಣ್ಣುಗಳ ಯುವಕನು ಸಿನಿಕತೆಯಿಂದ ನಕ್ಕನು. "ಗುಣಗಳನ್ನು ಈ ರೀತಿ ಅರ್ಥಮಾಡಿಕೊಳ್ಳುವುದು ಸುಲಭವೆಂದು ತೋರಬಹುದು, ಥಾಕೂರ್. ಆದರೆ ಅನೇಕರಿಗೆ ವಿಗ್ರಹಗಳ ಉಪಯೋಗವೆಂದರೆ ಒಂದು ಸ್ಥಳದ ಮೇಲೆ ಹೂವು ಇಟ್ಟು, ಸ್ವಲ್ಪ ಪವಿತ್ರ ಜಲವನ್ನು ಚಿಮುಕಿಸುವುದಾಗಿದೆ".

ಥಾಕೂರ್ ಇದನ್ನು ಒಪ್ಪದೇ ಹೇಳಿದರು: "ಆದರೆ ಆರಾಧನೆ ಎಂದರೆ ಹೂವುಗಳಿಂದ ಅಲಂಕರಿಸಿ, ಪವಿತ್ರ ಜಲವನ್ನು ಚಿಮುಕಿಸುವುದು ಎಂಬ ಅರ್ಥಮಾತ್ರವಲ್ಲ. ಮಿಗಿಲಾಗಿ, ಇದು ಭಗವಂತನ ಒಲವು, ಇಷ್ಟ ಈಡೇರಿಕೆ ಮತ್ತು ಸಂರಕ್ಷಣೆಯನ್ನು ವಿವೇಚನೆಯ ಕುಶಲತೆಯಿಂದ ಕಾಪಾಡುವ ವಿಧಾನವಾಗಿದೆಯೆಂದು ನಾನು ಭಾವಿಸುತ್ತೇನೆ. ಬುದ್ಧಿವಂತ ಸೂಕ್ಷ್ಮದೃಷ್ಟಿ ಮತ್ತು ಸೇವೆಯ ಮೂಲಕ ತನ್ನನ್ನು ತೀಕ್ಷ್ಣಮತಿಯುಳ್ಳವನಾಗಿಸಿಕೊಂಡು, ಯೋಗ್ಯನಾಗಿಯೂ, ಜೀವನವನ್ನು ಪೋಷಿಸಿ, ಕೆಡುಕನ್ನು ಎದುರಿಸುವವನಾಗಿಯೂ ಮಾಡುವುದೇ ಇದರ ಅರ್ಥ. ಇದನ್ನು ಉಪೇಕ್ಷಿಸಿದಲ್ಲಿ ಆರಾಧನೆ ಸತ್ವರಹಿತವಾಗುತ್ತದೆ. ಮತ್ತು ತನಗೂ ಹಾಗೂ ತಾನು ಆರಾಧಿಸುವ ಮೂರ್ತಿಗೂ ಮಧ್ಯೆ ಬಂಧವನ್ನು ಸಡಿಲಗೊಳಿಸುತ್ತದೆ. ಆದ್ದರಿಂದಲೇ ನಾನು ಹೇಳುತ್ತೇನೆ : ಉತ್ಸಾಹದಿಂದ ಮತ್ತು ಸಕ್ರಿಯ ಶ್ರದ್ಧೆ ಆಸಕ್ತಿಗಳಿಂದ ನಿಮ್ಮ ಆರಾಧನೆಯನ್ನು ಸಜೀವಗೊಳಿಸಿರಿ", ಎಂದರು.

ಒಬ್ಬ ವಯಸ್ಸಾದ ಮಹಿಳೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, "ಥಾಕೂರ್, ಈ ವಿಗ್ರಹಾರಾಧನೆಯ ಹೊರತಾಗಿ ಪ್ರಾಟೆಸ್ಟಂಟ್‌ರಿಗೆ ಇನ್ನೂ ಕೆಟ್ಟ ಸಂಗತಿಯೆಂದರೆ ಕ್ಯಾಥೊಲಿಕ್ ತಮ್ಮ ಪೋಪ್‌ನತ್ತ ಹೊಂದಿರುವ ಅಂಥ ನಿಷ್ಠೆ."

ಥಾಕೂರ್ ಆಕೆಯನ್ನು ದಿಟ್ಟಿಸಿ ನೋಡಿದರು. "ಯಾವನು ತನ್ನ ಪ್ರತಿಯೊಂದು ಕಾರ್ಯದಲ್ಲಿ, ಕಾಯೇನ ವಾಚಾ ಮನಸಾ ಏಸುವನ್ನು ಮುಕ್ತವಾಗಿ ಅನುಸರಿಸುತ್ತಾನೆಯೋ, ಅವನೇ ಏಸುವಿನತ್ತ ಸಂಪೂರ್ಣ ನಿಷ್ಠಾವಂತನು. ನನ್ನ ಪ್ರಕಾರ, ಇಂತಹ ನಿಷ್ಠೆಯನ್ನು ಏಸುವಿನತ್ತ ಯಾರು ಪ್ರಕಟಿಸುತ್ತಾರೆಯೋ, ಅವರೇ ಸಾಧಾರಣವಾಗಿ ಪೋಪ್ ಆಗಿರುತ್ತಾರೆ; ಆದರೆ ಅವರಿಗೆ ಇದರ ಬಗ್ಗೆ ಲೋಭವಿರುವುದಿಲ್ಲ."

"ಆದರೆ ಥಾಕೂರ್, ಜನರು ಅವರನ್ನು ಪವಿತ್ರ ಪಿತನೆಂದು ಕರೆಯುತ್ತಾರೆ. ಇದು ವಿಪರೀತವಲ್ಲವೇ?." ಎಂದು ತರುಣಿ ಆಶ್ಚರ್ಯದಿಂದ ಕೇಳಿದಳು.

ಥಾಕೂರ್ ಅವರ ಕಣ್ಣಲ್ಲಿ ನಗು ಮಿಂಚಿತು. "ಆದರೆ, ಪ್ರೀತಿಯ ಎಷ್ಟೆಲ್ಲಾ ಗೊಂದಲವಿದ್ದರೂ, ಇಂತಹ ಪೋಪ್ ಸದಾ ಏಸುವಿನ ಬಗ್ಗೆ ಮಾತನಾಡುತ್ತಾರೆಯೇ ಹೊರತು, ತಮ್ಮ ಬಗ್ಗೆ ಅಲ್ಲ; ದೇವರತ್ತ ಈ ಪ್ರೀತಿಯ ಮೂಲಕ, ಅವರು ಎಲ್ಲಾ ಜನರನ್ನು ಪ್ರೀತಿಸುತ್ತಾರೆ ಮತ್ತು ಅವರುಗಳಲ್ಲಿ ಏಸುವನ್ನು ಸಂಪೂರ್ಣವಾಗಿ ಬಿತ್ತುತ್ತಾರೆ. ಆದ್ದರಿಂದಲೇ ಅವರ ಇಡೀ ಅಸ್ತಿತ್ವದಲ್ಲಿ ದೈವಿಕತೆ ಪ್ರವಹಿಸಿ, ಎಲ್ಲರಲ್ಲೂ

ಪ್ರಕಾಶಿಸುತ್ತದೆ. ಎಂದಲ್ಲಿ ಅವರನ್ನು ಯಾಕೆ ಪವಿತ್ರ ಪಿತ ಎಂದು ಕರೆಯಬಾರದು?"

"ಆದರೆ ಥಾಕೂರ್, ಪೋಪ್ ಅವರೇ ದೇವರು ಎನ್ನುವಂತೆ ಜನರು ಅವರನ್ನು ಪೂಜಿಸುತ್ತಾರಲ್ಲಾ?"

"ನನ್ನ ಪ್ರಕಾರ, ಪೋಪ್ ಎಂದೂ ದೇವರಾಗುವುದಿಲ್ಲ." ಎಂದು ಉತ್ತರಿಸಿದ ಥಾಕೂರ್, "ಆದರೆ ಪೋಪ್ ಅವರು ದೇವರ ಪ್ರೀತಿಯನ್ನು ಜನರಿಗೆ ಕೊಡಬಲ್ಲರು" ಎಂದರು.

ತರುಣಿಯ ಧ್ವನಿ ವಿಷಾದಭರಿತವಾಗಿತ್ತು. "ಥಾಕೂರ್, ಏನೇ ಹೇಳಿದರೂ, ಪೋಪ್ ಅವರು ಸಹ ತಪ್ಪುಮಾಡಬಹುದಾದ ಮನುಷ್ಯರಲ್ಲವೇ? ಆದರು ಸಹ ತಮ್ಮ ಪೋಪ್ ಯಾವುದೇ ತಪ್ಪುಮಾಡುವುದಿಲ್ಲವೆಂದು ಅವರುಗಳು ಒತ್ತಿ ಹೇಳುತ್ತಾರೆ."

ಥಾಕೂರ್ ಅವರ ಧ್ವನಿ ನಿಶ್ಚಲವಾಗಿತ್ತು. "ಅವರು ತಪ್ಪು ಮಾಡಬಹುದು ಅಥವಾ ತಪ್ಪು ಮಾಡದಿರಬಹುದು. ಆದರೆ ಇಂತಹ ಪೋಪ್ ಏಸುವಿನ ವಾಣಿಯ ಮೂಲಕ ಮಾತನಾಡುತ್ತಾರೆ. ಏಸುವಿನ ಕಿವಿಗಳ ಮೂಲಕ ಆಲಿಸುತ್ತಾರೆ ಮತ್ತು ಏಸುವಿನ ನೇತ್ರಗಳ ಮೂಲಕ ನೋಡುತ್ತಾರೆ. ಅನೇಕರನ್ನು ಸಾಮಾನ್ಯವಾಗಿ ಸಂಘಟಿಸಬಲ್ಲ ಏಸುವಿನಲ್ಲಿ ಸಂಘಟಿತರಾಗಿರುವವರು ಇವರು ತಾನೇ?"

ಅವರ ಮಾತಿನಿಂದ ಮೂಡಿದ ಮೌನವು ವಾತಾವರಣದಲ್ಲಿ ಗಂಭೀರತೆಯನ್ನು ಮೂಡಿಸಿತು. ಅಂತಿಮವಾಗಿ ಆ ತರುಣಿಯು ಹುರುಪಿನಿಂದ ಮಾತನಾಡಿದಳು. "ಸರಿ, ಥಾಕೂರ್ ಆದರೆ, ಒಬ್ಬ ವ್ಯಕ್ತಿ ಇನ್ನೊಬ್ಬನಿಗಿಂತ ಉತ್ತಮನಲ್ಲವೆಂದು ಪ್ರಾಟೆಸ್ಟಂಟರು ನಂಬುತ್ತಾರೆ. ಜೈವಿಕವಾಗಿ ಸರಿಸಮಾನರಿಲ್ಲದಿದ್ದರೂ, ಕನಿಷ್ಠಪಕ್ಷ ಏಸುವಿನಲ್ಲಿ ಎಲ್ಲರೂ ಸರಿಸಮಾನರು. ಆದ್ದರಿಂದಲೇ ನಮ್ಮ ಚರ್ಚ್‌ಗಳು ಇಷ್ಟು ಪ್ರಜಾಸತ್ತಾತ್ಮಕವಾಗಿವೆ."

"ಏಸು ಯಾರ ಬಗ್ಗೆಯೂ ತಾರತಮ್ಯ ತೋರಿಸದೆ ಇದ್ದ ರೀತಿಯಲ್ಲಿ ಚರ್ಚ್ ಪ್ರಜಾಸತ್ತಾತ್ಮಕವಾಗಿರಬಹುದು" ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ ಥಾಕೂರ್, "ಎಲ್ಲಾ ಮನುಷ್ಯರೂ ಅವನಲ್ಲಿ ಸರಿಸಮಾನರಾಗಿರಬಹುದು. ಆದರೆ ಯಾವುದೇ ಮನುಷ್ಯ ಏಸುವಿಗೆ ಸಮಾನವಾಗಿದ್ದಾನೆಯೇ?"

ಈ ಅಸ್ಪಷ್ಟಾರ್ಥತೆಯ ಬಗ್ಗೆ ಯಾವುದೇ ಪ್ರತಿಭಟನೆ ಕೇಳಿಬರುವ ಮುನ್ನ ಥಾಕೂರ್ ತಮ್ಮ ಗೋಳ ಕೆಳಗಿಂದ ಒಂದು ದಿಂಬನ್ನು ಎಳೆದುಕೊಂಡು ಗುಂಪಿನತ್ತ ಆತ್ಮೀಯವಾಗಿ ವಾಲಿ, ತಮ್ಮ ಮಾತನ್ನು ಮುಂದುವರೆಸಿದರು: "ಎಂದಲ್ಲಿ ಯಾಕೆ ನಾವು ಏಸುವನ್ನು ಪ್ರೀತಿಸುತ್ತೇವೆ? ಪ್ರತಿ ಜೀವಿಯ ಅಸ್ತಿತ್ವದಲ್ಲೂ ಉಕ್ಕಿ ಬರುವ ಆ ದೈವಿಕ ಪ್ರೀತಿಗೆ ಅವನು ಒಡೆಯನೆಂಬ ಕಾರಣಕ್ಕಾಗಿ ಅಲ್ಲವೇ? ಅವನೇ ಎಲ್ಲಾ ಪಿತರಿಗೂ ಪರಮೋಚ್ಚ ಪಿತನು. ಇದಲ್ಲದೆ ಚರ್ಚ್ ಎನ್ನುವುದು ಏಸುವಿಗೆ ಸೇರಿದ್ದು ಎಂದು ಅರ್ಥವಿರುವುದರಿಂದ, ಅದು ಏಸುವಿನ ನೆಲೆಯಾಗುತ್ತದೆ. ಆಗ ಅವನ ಚರ್ಚ್ ಜನರ ಮತದಾನಕ್ಕೆ ಬದಲಾಗಿ ಅವನ ಶುಭ ಸಮಾಚಾರದಿಂದ ಮಾರ್ಗದರ್ಶನ ಪಡೆಯುವಾಗ, ಅದು ಪ್ರಜಾಸತ್ತಾತ್ಮಕವಾಗಿರಲು ಹೇಗೆ ಸಾಧ್ಯ? ಇನ್ನೂ ಹೇಳಬೇಕೆಂದಲ್ಲಿ, ಈ ಪರಿಸ್ಥಿತಿ ವ್ಯತಿರಿಕ್ತವಾಗಿದ್ದಲ್ಲಿ, ಏಸು ಮತ್ತು ಅವನ ಶುಭವಾರ್ತೆ, ಕಂಬನಿ ಮತ್ತು ದುಃಖದಿಂದ, ಗೊತ್ತುಗುರಿಯಿಲ್ಲದೆ ಆಗುತ್ತವೆ ಎಂದು ನಾನು ನಂಬುತ್ತೇನೆ. ಮತ್ತು ಯಾರಲ್ಲಿ ಏಸು ಇಲ್ಲವೋ, ಅವನಲ್ಲಿ ಏನೂ ಇಲ್ಲ. ಹೊಂದಾಣಿಕೆ ಮಾಡಿಕೊಳ್ಳಲು ಆಗದಿದ್ದಾಗ, ಅವನು ಒಬ್ಬ ನಿರುಪಯುಕ್ತ ದೈವತ್ವದ ಅಲಸಿ ಆರಾಧಕನಾಗಿ, ಶೂನ್ಯಮನಸ್ಕ ಅಲೆಮಾರಿಯಾಗುತ್ತಾನೆ."



ನಂತರ ಮೂಡಿಬಂದ ಮೌನವನ್ನು ಒಂದು ನೀಳ ನಿಟ್ಟುಸಿರು ಮುರಿಯಿತು. ತರುಣಿ ತಲೆ ಆಡಿಸುತ್ತಾ, "ಥಾಕೂರ್, ಏಸು ಅಷ್ಟು ಮುಖ್ಯವಾಗಿದ್ದರೆ, ಯಾಕೆ ನಾವು ಅವನನ್ನು ಪ್ರೀತಿಸುವಂತೆ ಮಾಡಲಿಲ್ಲ? ಭಗವಂತನು ಸರ್ವಶಕ್ತನಾಗಿದ್ದಲ್ಲಿ, ಯಾಕೆ ಎಲ್ಲವನ್ನೂ ಇಷ್ಟು ಕಠಿಣಗೊಳಿಸುತ್ತಿದ್ದಾನೆ?"

ಥಾಕೂರ್ ಮುಗುಳುನಕ್ಕು ಹೇಳಿದರು: "ದೇವರು ಮಾನವನನ್ನು ಸೃಷ್ಟಿಸುವಾಗ ಮನಸ್ಸಂಕೀರ್ಣಗಳ ಅಡಿಯಾಳುಗಳನ್ನು ಸಹ ಸೃಷ್ಟಿಮಾಡಿದನು. ಮತ್ತು ಅವನು ಮಾನವನನ್ನು ಸೃಷ್ಟಿಸಿದರೂ ಸಹ, ಮನುಷ್ಯನ ಆಸೆ ಅಪೇಕ್ಷೆಗಳ ಬಗ್ಗೆ ಯಾವುದೇ ನಿಯಂತ್ರಣ ಹೊಂದಿಲ್ಲ. ದೇವರು ಸ್ವಯಂ ಪರಿಪೂರ್ಣ ಅಸ್ತಿತ್ವವಾದ್ದರಿಂದ ಎಲ್ಲವನ್ನೂ ಅದೇ ಸ್ಥಿತಿಯಲ್ಲಿ ಸೃಷ್ಟಿಸಿದ್ದಾನೆ. ಯಾರಿಗೂ ಏನೂ ಕಡಿಮೆ ಶಕ್ತಿಯನ್ನು ಕೊಟ್ಟಿಲ್ಲ. ಮನುಷ್ಯನು ಈ ಬಳುವಳಿಯನ್ನು ತಾನು ಇಷ್ಟಪಡುವ ಯಾವುದೇ ರೀತಿಯಲ್ಲಿ ಬಳಸಿಕೊಳ್ಳಬಹುದು. ಅವನು ಭಗವಂತನತ್ತ ಚಲಿಸಬಹುದು ಅಥವಾ ಅವನನ್ನು ಉಪೇಕ್ಷಿಸಿ, ಸಂಬಂಧವನ್ನು ತೊರೆಯಬಹುದು... ದೇವರಿಗೆ ಬೆನ್ನು ಮಾಡಿ, ತನ್ನ ಉದ್ರೇಕಗಳು ಮತ್ತು ಮನಸ್ಸಂಕೀರ್ಣಗಳ ಹಿಂದೆ ಓಡಬಹುದು. ಆಗ ಅಡಿಯಾಳುಗಳಿಗೆ ಬದಲಾಗಿ ಮನಸ್ಸಂಕೀರ್ಣಗಳು ಮನುಷ್ಯನ ಮಾಲಿಕನಾಗುತ್ತವೆ. ಮತ್ತು ನಮಗೆ ಬೇಕಾದ ವಿಧದಲ್ಲಿ ಅವನನ್ನು ಕುಣಿಸುತ್ತವೆ. ಹೀಗಾಗಿ ದೇವರ ಪುತ್ರನು ತನ್ನ ಅಡಿಯಾಳುಗಳಿಗೆ ಒಳಪಟ್ಟಷ್ಟೂ ಅವನು ಇನ್ನೂ ಹೆಚ್ಚುಹೆಚ್ಚಾಗಿ ಮೃತ್ಯುಕೂಪದತ್ತ ಕಾಲಿಟ್ಟು ತನ್ನ ಮೂಲವನ್ನು ಮರೆಯುತ್ತಾನೆ. ಇದನ್ನು ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಸುಲಭವಾಗಿ ಮನಗಾಣಬಹುದು. ತಂದೆಗೆ ಹುಟ್ಟಿದ ಮಗನು, ಅವರ ಇಚ್ಚೆಗೆ ವಿರುದ್ಧವಾಗಿ ಹೋಗುವ ಸ್ವಾತಂತ್ರ್ಯವನ್ನು ಹೊಂದಿದ್ದಾನೆ. ಆದರೆ ಈ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳದೆ, ಬದಲಿಗೆ ಒಳ್ಳೆಯದನ್ನು ಮಾಡಬೇಕೆಂಬ ತನ್ನ ಪಿತನ ಮಾರ್ಗವನ್ನು ಅನುಸರಿಸಿದಲ್ಲಿ ಅನಿರೀಕ್ಷಿತ ರೀತಿಯಲ್ಲಿ ಪ್ರಯೋಜನ ಪಡೆಯುತ್ತಾನೆ. ಇದು ಸಾಮಾನ್ಯವಾಗಿ ಮಾನವೀಯತೆಗೂ ಅನ್ವಯಿಸುತ್ತದೆ. ನಾವು ಆ (ದಿವ್ಯ) ಮೂಲದತ್ತ ಚಲಿಸಿದಷ್ಟೂ ಇನ್ನೂ ಅಧಿಕವಾಗಿ

ಉತ್ತಮಿಕೆಯನ್ನು ಗಳಿಸುತ್ತೇವೆ. ನನಗೆ ತುಂಬಾ ನಂಬಿಕೆ ಇರುವ ಮಾತೆಂದರೆ : ಮೂಲವನ್ನು ಅಸಡ್ಡೆಮಾಡುವವನು ಎಲ್ಲಾ ಸಂಪನ್ಮೂಲಗಳನ್ನು ಕಳೆದುಕೊಳ್ಳುತ್ತಾನೆ."

"ಆದರೂ ಥಾಕೂರ್", ಎಂದು ಮೆಲುಧ್ವನಿಯಲ್ಲಿ ಮಾತನಾಡಿದ ತರುಣಿ, "ಏಸುವು ಸಕಲ ಪ್ರೀತಿಪಾತ್ರ ಮತ್ತು ದೇವರು ಇಷ್ಟು ಶಕ್ತಿಶಾಲಿ ಯಾಕೆಂದು ನನಗೆ ಗೊತ್ತಾಗುತ್ತಿಲ್ಲ. ತನ್ನ ವಿರುದ್ಧ ಚಲಿಸುವ ಸ್ವಾತಂತ್ರ್ಯವನ್ನು ಅವನು ನಮಗೆ ಕೊಟ್ಟಿದ್ದಾನೆ. ಇದೇ ಅಲ್ಲವೇ ನಮ್ಮ ಎಲ್ಲಾ ನರಳುವಿಕೆಯ ಮುಖ್ಯ ಕಾರಣ!" ಎಂದಳು.

"ಪ್ರೀತಿಯು ಎಂದಿಗೂ ಬಲವಂತದಿಂದ ಬೆಳೆದಿಲ್ಲ ಮತ್ತು ಬೆಳೆಯಲಾಗದು," ಎಂದು ಥಾಕೂರ್ ತಕ್ಷಣ ಉತ್ತರಿಸಿದರು. "ಇದು ಸಾಧ್ಯವೆಂದು ಇಟ್ಟುಕೊಂಡಲ್ಲಿ ಸಹ, ಯಾವುದೇ ಸಂತೋಷವನ್ನು ತರುವುದಿಲ್ಲ. ಮನುಷ್ಯನು ಅನಿಯಂತ್ರಿತ ಭಾವೋದ್ರೇಕದ ಸಾಧ್ಯತೆಯನ್ನು ತಳ್ಳಿಹಾಕಿ, ಪರಮಾತ್ಮನತ್ತ ಸ್ವ–ಇಚ್ಛಾಪ್ರೇರಕ ಪ್ರೀತಿಯನ್ನು ಬೆಳೆಸಿಕೊಳ್ಳುವುದರೊಂದಿಗೆ ತನ್ನ ಮನಸಂಕೀರ್ಣಗಳ ಮೇಲೆ ಹತೋಟಿ ಸಾಧಿಸಿದಲ್ಲಿ, ಈ ಪ್ರೀತಿ ಇಬ್ಬರಿಗೂ ಆನಂದಮಯವಾಗಿರುತ್ತದೆ. ಆಗಲೇ ದೈವಿಕ ನಿಮಿತ್ತದ ರೋಮಾಂಚನವನ್ನು ಸವಿಯಬಹುದಾಗಿದೆ. ಇಲ್ಲದಿದ್ದಲ್ಲಿ ಭಾವನೆಗಳನ್ನು ಹತ್ತಿಕ್ಕಿದ ಮತ್ತು ಯಾವುದೇ ಪರವಶತೆ ಇಲ್ಲದ ಯಾಂತ್ರಿಕತೆಯಿಂದ ಮನುಷ್ಯನು ಒಳ್ಳೆಯತನದತ್ತ ಸೆಳೆಯಲ್ಪಟ್ಟಲ್ಲಿ, ಅದು ಒಳ್ಳೆಯದಾಗಿ ಉಳಿಯುವುದಿಲ್ಲ."

"ಯಾಕೆ?"

"ಯಾಕೆಂದರೆ ಕೇಂದ್ರೀಕೃತ ಪ್ರೀತಿ, ಒಳಿತು ಮತ್ತು ಕೆಡುಕಿನ ನಡುವೆ ಘರ್ಷಣೆ, ಸ್ವ–ಹೊಂದಾಣಿಕೆ ಮತ್ತು ಎಲ್ಲವನ್ನೂ ಸರಿಯಾದ ದೃಷ್ಟಿಕೋನದಿಂದ ನೋಡುವ ಶಕ್ತಿ ಇವುಗಳ ಮೂಲಕ ಅಭಿವೃದ್ಧಿಗೊಳ್ಳುವ ಪ್ರೀತಿಯು ನಾಪತ್ತೆಯಾಗಿರುತ್ತದೆ. ಈ ಗುಣಗಳು ಬೆಳೆಯುವುದಿಲ್ಲ. ತತ್ಪರಿಣಾಮವಾಗಿ ಮನುಷ್ಯರು ವಿಕಸಿತಗೊಳ್ಳುವುದಿಲ್ಲ. ಆನಂದಾನುಭವ ಇರುವುದಿಲ್ಲ. ಇನ್ನೂ ಹೆಚ್ಚೆಂದರೆ, ಈ ಸ್ವಾತಂತ್ರ್ಯ ಇಲ್ಲದಿದ್ದಲ್ಲಿ, ದೃಢ ಚಾರಿತ್ರ್ಯ, ದೃಢಸಂಕಲ್ಪ ಮತ್ತು ದೃಢ ವ್ಯಕ್ತಿತ್ವ ಬೆಳೆಯುವುದಿಲ್ಲ..."

ಅವರು ಮಾತು ಮುಗಿಸುವ ಮೊದಲೇ ತರುಣಿ ಮಾತನಾಡಿದಳು. ".... ಆದರೆ ಥಾಕೂರ್, ನಾವು ಏಸುವಿಗೆ ಪ್ರಾರ್ಥಿಸಿದರೂ ಸಹ, ಅವನು ನಮ್ಮನ್ನು ಯಾಕೆ ಕಡೆಗಾಣುತ್ತಾನೆ?"

ಥಾಕೂರ್ ಒಲವಿನ ನಗೆ ಬೀರಿ, ಹೇಳಿದರು "ಏಸು ಹೇಳಿದ್ದಾನೆ.... 'ನನ್ನ ಯಾವುದೇ ಅಂಶದಿಂದ ದೂರ ಸರಿಯದಿರುವವನೇ ಅನುಗ್ರಹೀತನು....' ಎಂದೂ, '....ನನ್ನನ್ನು ಉತ್ತಮ ಮನುಷ್ಯನೆಂದು ಅಂಗೀಕರಿಸುವವನು ಉತ್ತಮ ಮನುಷ್ಯನ ಪ್ರತಿಫಲವನ್ನು ಪಡೆಯುತ್ತಾನೆ....' ನನ್ನ ಪ್ರಕಾರ ಏಸುವು ಕೊಡಲು ಕಾತುರನಾಗಿದ್ದಾನೆ. ಆದರೆ ನಾವು ಅವನಿಗಾಗಿ ಏನೂ ಮಾಡದಿದ್ದಲ್ಲಿ, ಅವನ ಸಂಕಲ್ಪವನ್ನು ಅರಸದಿದ್ದಲ್ಲಿ



ನಮ್ಮ ಗ್ರಹಣಕ್ರಿಯೆ ಬೆಳೆಯಲು ಸಾಧ್ಯವಾಗುವುದಿಲ್ಲ. ಆಗ ಅವನು ಕೊಟ್ಟರೂ, ಅದನ್ನು ಸ್ವೀಕರಿಸಲು ನಾವು ಅಸಮರ್ಥರಾಗಿರುತ್ತೇವೆ. ಅವನ ಸಂಕಲ್ಪವನ್ನು ನೆರವೇರಿಸುವುದರಿಂದಲೇ ಸ್ವೀಕಾರದ ಮಾರ್ಗ ತೆರೆಯುತ್ತದೆ. ಅಲ್ಲಿ ನೋಡಿ, ಅಂಗಳದಲ್ಲಿ ಎಷ್ಟೊಂದು ಬೆಳಕುಗಳಿವೆ. ನಾನು ನನ್ನ ಕಣ್ಣುಗಳನ್ನು ಮುಚ್ಚಿದಲ್ಲಿ, ಈ ಬೆಳಕನ್ನು ನೋಡಲು ಸಾಧ್ಯವೇ? ಕನಿಷ್ಠಪಕ್ಷ ನಾವು ನಮ್ಮ ಕಣ್ಣುಗಳನ್ನು ತೆರೆಯಬೇಕು. ಅವನು ನಮ್ಮನ್ನು ಎಷ್ಟೇ ಪ್ರೀತಿಸಿದರೂ ಸಹ, ನಾವು ಅವನನ್ನು ಪ್ರೀತಿಸಿ, ಅವನ ಸಂಕಲ್ಪವನ್ನು ನೆರವೇರಿಸಲು ಸಿದ್ಧವಿಲ್ಲದಿದ್ದಲ್ಲಿ, ಇದು ನಮಗೆ ಭಾಸವಾಗುವುದಿಲ್ಲ. ಆದ್ದರಿಂದಲೇ ನಾವು ಭಗವಂತನ – ಅಂದರೆ ನಮ್ಮ ಅಸ್ತಿತ್ವದ ಸತ್ವದ–ಉದ್ದೇಶಕ್ಕೆ ವಿರುದ್ಧವಾಗಿ ಚಲಿಸಿದಲ್ಲಿ, ಆಗ ಅವನು ನಮ್ಮನ್ನು ಕಡೆಗಣಿಸುತ್ತಿದ್ದಾನೆ ಎಂದು ಭಾವಿಸುತ್ತೇವೆ. ಆದರೆ ನಾನು ನಿಮಗೆ ಹೇಳುತ್ತಿದ್ದೇನೆ: ನಿಜವಾಗಿಯೂ, ನಿಜವಾಗಿಯೂ, ನಿಜವಾಗಿಯೂ, ಅವನು ಸರ್ವದಾ ಸಕಲರನ್ನೂ ಪ್ರೀತಿಸುತ್ತಾನೆ!"

ತರುಣಿ ನಕಾರಾತ್ಮಕವಾಗಿ ತಲೆಯಾಡಿಸಿದಳು. "ಆದರೂ ಸಹ, ಯಾರು ಎಷ್ಟು ಪ್ರಾಮಾಣಿಕತೆಯಿಂದ ಪ್ರಯತ್ನಿಸಿದಾಗಲೂ, ಯಾವುದೇ ನಿರ್ದಿಷ್ಟ ಪರಿಸ್ಥಿತಿಯಲ್ಲಿ ಅವನ ಉದ್ದೇಶವೇನು ಎಂದು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟವಾಗಿರುತ್ತದೆ."

"ಏಸುವನ್ನು ಅವನ ಸಲುವಾಗಿ ಕಾಯೇನ ವಾಚಾ ಮನಸಾ ಪ್ರೀತಿಸಿರಿ", ಎಂದಾಗ ಥಾಕೂರ್ ಅವರ ಕಣ್ಣುಗಳು ಪ್ರಜ್ವಲಿಸಿದವು. "ಎಲ್ಲಾ ಸಾಚಾ ಪ್ರವಾದಿಗಳು ಅಭಿಷಿಕ್ತ ಕ್ರಿಸ್ತಾವತಾರವೆಂದು ಅಂಗೀಕರಿಸಿರಿ, ಸಾಕು. ಈ ಯುಗದ ಅಗತ್ಯಗಳಿಗೆ ತಕ್ಕಂತೆ ಪ್ರತಿ ಆಲೋಚನೆ, ಮಾತು ಮತ್ತು ಕ್ರಿಯೆಯಲ್ಲಿ ಏಸುವನ್ನು ಅನುಸರಿಸುವ ಇಂತಹ ಪ್ರವಾದಿಗೆ ಸೇವೆ ಸಲ್ಲಿಸಿ, ಅನುಯಾಯಿಯಾಗಿರಿ, ಆಗ ಭಗವಂತನ ಉದ್ದೇಶವು ಸ್ವಯಂ ಆಗಿ ನಿಮ್ಮನ್ನು ಖಂಡಿತ ಪ್ರೇರೇಪಿಸುತ್ತದೆ."

"ಓಹ್ ಥಾಕೂರ್", ಎಂದು ಹಿರಿಯ ಮಹಿಳೆ ಪ್ರತಿಭಟಿಸಿ, "ಏಸುವನ್ನು ಪ್ರೀತಿಸಬೇಕೆಂದಲ್ಲಿ, ಅವನ ಸಲುವಾಗಿ ನಾವು ಇತರ ಪ್ರವಾದಿಗಳನ್ನು ಪ್ರೀತಿಸಲೇ ಬೇಕೇ?" ಎಂದು ಕೇಳಿದಾಗ ಅವಳ ಕಣ್ಣುಗಳಲ್ಲಿ ಅಪನಂಬಿಕೆ ತುಂಬಿತ್ತು. "ಇದು ಏಸುವಿನತ್ತ ಅಪ್ರಾಮಾಣಿಕತೆ ಮತ್ತು ಒಂದು ಬಗೆಯ ಅನೈತಿಕ ತಾಟಸ್ಥ್ಯವನ್ನು ತೋರಿಸುತ್ತದೆಯಲ್ಲವೇ ?" ಥಾಕೂರ್ ನಿಧಾನವಾಗಿ ತಲೆಯಾಡಿಸಿದರು. "ಎಚ್ಚರಿಕೆ, ಏಸುವಿನ ಬಗೆಗಿನ ಪ್ರೀತಿಯ ಸೋಗಿನಲ್ಲಿ, ಜ್ಞಾನವಿದೆಯೆಂಬ ಹೆಮ್ಮೆಯಿಂದ ಮತ್ತು ಅಹಂಕಾರದಿಂದ ನೀವು ಇತರರನ್ನು ಅಸಡ್ಡೆ ಮಾಡಿದಲ್ಲಿ ಅಥವಾ ಅಲ್ಲಗಳೆದಲ್ಲಿ, ಅಸ್ತಿತ್ವವನ್ನು ಪೋಷಿಸುವ ಅವರುಗಳ ಸುವಾರ್ತೆಯಿಂದ ನೀವೇ ಖುದ್ದಾಗಿ ವಂಚಿತರಾಗುತ್ತೀರಿ, ನಿಮ್ಮ ಪ್ರೀತಿ ಅಪೂರ್ವವಾಗಿರುತ್ತದೆ. ನೆನಪಿನಲ್ಲಿಡಿ, ಇಂತಹ ಅಪೂರ್ಣ ಪ್ರೀತಿಯು ಜನರತ್ತ ಪಕ್ಷಪಾತವನ್ನು ಕಲ್ಪಿಸಿ, ಪ್ರದೂಷಿತಗೊಳಿಸುತ್ತದೆ. ಇದು ಪ್ರವೃತ್ತಿಗಳು, ಮನೋಧರ್ಮಗಳು ಮತ್ತು ಸಂಸ್ಕೃತಿಯೊಂದಿಗೆ

ಹೊಂದಾಣಿಸಿಕೊಂಡು ಪರಮಾತ್ಮನನ್ನು ಮನಗಾಣುವ ಸುವಾರ್ತೆಯಿಂದ ವಿಚಲಿತಗೊಳಿಸುತ್ತದೆ. ಇದರಿಂದ ಇಡೀ ಮಾವನಕುಲ ವಂಚಿತವಾಗುತ್ತದೆ. ಆಗ ಕತ್ತಲುಗವಿದ ವಿಷಣ್ಣತೆ ಎಲ್ಲರನ್ನೂ ಆವರಿಸಿದಾಗ ನೀವು ಮಾತ್ರವಲ್ಲದೇ ಇತರರನ್ನು ವಂಚಿತಗೊಳಸುತ್ತೀರಿ".

ಥಾಕೂರ್ ಭೇಟಿಗರತ್ತ ಬಾಗಿದರು ಮತ್ತು ಅವರ ಧ್ವನಿಯಲ್ಲಿ ಕಳಕಳಿಯ ಮನವಿ ತುಂಬಿತ್ತು. "ಆದ್ದರಿಂದಲೇ ನಾನು ಹೇಳುತ್ತೇನೆ. ಏಸುವಿನ ಸಲುವಾಗಿಯೇ ಏಸುವನ್ನು ಪ್ರೀತಿಸಿರಿ, ಎಲ್ಲಾ ಸಾಚಾ ಪ್ರವಾದಿಗಳನ್ನು ಏಸುವೆಂದೇ ಪರಿಗಣಿಸಿರಿ ಮತ್ತು ಅರ್ಥಪೂರ್ಣ ಹೊಂದಾಣಿಕೆ ಮಾಡಿಕೊಂಡು ಏಸು ನೆಲೆಸಿರುವ ಇವರನ್ನು ಅನುಸರಿಸಿರಿ. ಇದೇ ನನ್ನ ಪ್ರಕಾರ ವಿಶ್ವಕ್ಕಾಗಿ ಕ್ರಿಸ್ತಧರ್ಮದ ತಿರುಳು!"

"ಏಸುವನ್ನು ಸಾಂಗಗೊಳಿಸುವ ವ್ಯಕ್ತಿಯನ್ನು ಅನುಸರಿಸುವುದೇ, ಥಾಕೂರ್?" ಯುವ ಅಮೆರಿಕನ್ ತರುಣಿಯ ಕಣ್ಣುಗಳಲ್ಲಿ ದಿಗ್ಭ್ರಮೆ ಕಂಡುಬಂದಿತು. "ಇಂತಹವರನ್ನು ಎಲ್ಲಿ ಕಾಣುವುದು? ಅವರನ್ನು ಹೇಗೆ ಗುರುತಿಸುವುದು?" ಥಾಕೂರ್ ಅವರ ಕಣ್ಣುಗಳು ಎವೆಯಿಕ್ಕದೆ ತರುಣಿಯನ್ನು ನೋಡಿದವು. "ಶ್ರದ್ಧೆ ತುಂಬಿದ ಹೆಮ್ಮೆಯಿಂದ ಏಸುವಿನ ಬಗ್ಗೆ ಮಾತನಾಡುವ ಯಾರಾದರೂ ನಿಮಗೆ ಗೋಚರಿಸಿದಲ್ಲಿ ಭಗವಂತನ ಕಾರುಣ್ಯದ ಬಗ್ಗೆ ಮಾತನಾಡುವಾಗ ಅವರಲ್ಲಿ ಆನಂದ ಮತ್ತು ವಿನಮ್ರತೆ ತುಂಬಿದ್ದಲ್ಲಿ, ಅವನ ಪ್ರೀತಿಯನ್ನು ಕರೆಮಾಡಿ ಸಂಪೂರ್ಣವಾಗಿ ಅಪ್ಪಿಕೊಂಡು, ತಮ್ಮ ಪ್ರತಿ ಮಾತು ಮತ್ತು ಕ್ರಿಯೆಯಲ್ಲಿ ಈ ಪ್ರೀತಿಯನ್ನು ಹೊರಹೊಮ್ಮುವವರಿದ್ದಲ್ಲಿ, ಭಗವಂತನ ಪ್ರೀತಿಯಲ್ಲಿ ತನ್ನನ್ನು ತಾನೇ ಕಳೆದುಕೊಳ್ಳುವವರೆಗೆ ವಿರಮಿಸದಿದ್ದಲ್ಲಿ, ಆಗ ನಾನು ಹೇಳುತ್ತೇನೆ. ಇವರಲ್ಲಿ ಏಸು ಅದ್ಭುತವಾಗಿ ನೆಲೆಸಿದ್ದಾನೆ. ಮತ್ತು ಇಂತಹ ವ್ಯಕ್ತಿಯ ಹೃದಯದಿಂದ ಪ್ರವಹಿಸುವ ಪ್ರೀತಿಯು ಸ್ವ–ಉದ್ಧಾರ, ಪ್ರಗತಿ ಮತ್ತು ಶಾಂತಿಯತ್ತ ಅಸಂಖ್ಯಾತ ಜೀವಗಳನ್ನು ಪ್ರೇರೇಪಿಸುತ್ತದೆ ಎನ್ನುವುದನ್ನು ಖಂಡಿತ ತಿಳಿ."

ಗಂಭೀರ ನೋಟದ ಯುವಕನು ಮಾತನಾಡಿ "ಥಾಕೂರ್, ಆಕೆ ಯಾವಾಗ ಎಂದು ಕೇಳಲಿಲ್ಲ. ಎಲ್ಲಿ ಎಂದು ಕೇಳಿದರು, ಎಂದನು."

ಥಾಕೂರ್ ತಕ್ಷಣ ಉತ್ತರಿಸಿ, "ಅರಸು ಮತ್ತು ನೀನು ಕಾಣುತ್ತೀಯ...... ತಟ್ಟು ಮತ್ತು ಇದು ನಿನಗಾಗಿ ತೆರೆಯುತ್ತದೆ" ಎಂದರು.

ಹಿರಿಯ ವಯಸ್ಸಿನ ಭೇಟಿಗರು ಮಧ್ಯೆ ಮಾತನಾಡಿ, "ಥಾಕೂರ್ ಇದು ವಿಷಯಕ್ಕೆ ಸಂಬಂಧಪಟ್ಟಿಲ್ಲವಾದರೂ, ಒಂದು ಪ್ರಶ್ನೆ ನನ್ನನ್ನು ಬಹಳ ಕಾಲದಿಂದ ಕಾಡುತ್ತಿದೆ. ಏಸುವು ಸರ್ವಶಕ್ತನಾಗಿದ್ದಲ್ಲಿ, ತನ್ನನ್ನು ತಾನೇ ಯಾಕೆ ಸಂರಕ್ಷಿಸಿಕೊಳ್ಳಲಿಲ್ಲ? ಕನಿಷ್ಠ ಪಕ್ಷ ಅವನ ಪಿತನಾದರೂ..?"

ಥಾಕೂರ್ ಮುಖ ಗಂಭೀರವಾಯಿತು. "ಅವನ ಗುರಿ ಯಾವಾಗಲೂ



ಜೀವಿಸುವುದು ಮತ್ತು ಜೀವಿಸುವಲ್ಲಿ ಸಹಾಯಕನಾಗುವುದು ಎಂದು ಮಾತ್ರ ನನಗೆ ಗೊತ್ತು. ಅಸ್ತಿತ್ವದ ಈ ಸ್ತರದಲ್ಲಿ ಕೆಲಸಮಾಡುವಾಗ, ಅವನು ತನ್ನ ಮಾನವ ಸ್ವರೂಪದ ಮುಖೇನ ಹಾಗೂ ಸಮಯ ಮತ್ತು ದೇಶದ ಪರಿಮಿತಿಯೊಳಗೆ ಕೆಲಸಮಾಡಬೇಕು. ಮಿಗಿಲಾಗಿ ಅವನ ಸಂಕಲ್ಪ ದೋಷಾತೀತ ಆಗಿದೆ. ಅವನು ತನ್ನ ಧ್ಯೇಯವನ್ನು ಈಡೇರಿಸಲು ಬದ್ಧನಾಗಿದ್ದಾನೆ ಮತ್ತು ತನ್ನ ಯಾವುದೇ ಪ್ರಯತ್ನದಲ್ಲಿ ಎಂದೂ ವಿಫಲನಾಗಿಲ್ಲ ಎಂದು ನನಗೆ ಗೊತ್ತು. ನಮಗೆ ವಿಫಲತೆ ಎಂದು ತೋರುವುದನ್ನು ಅಸ್ತಿತ್ವದ ಪ್ರೀತಿಯನ್ನು ಮುನ್ನಡೆಸುವ ಉದ್ದೇಶದ ರೀತಿಯಲ್ಲಿ ಅವನು ಬಳಸುತ್ತಾನೆ. ತನ್ನ ಗುರಿಸಾಧನೆಯಾಗುವವರೆಗೆ ಮುನ್ನಡೆಯುತ್ತಾನೆ ಮತ್ತು ಅವನ ಆಶಯ, ಅಗತ್ಯ ಮತ್ತು ನಿಯಮಗಳ ನಡುವೆ ಪರಿಪೂರ್ಣ ಸಾಮರಸ್ಯವಿದೆ."

ಎಲ್ಲೆಡೆ ಕತ್ತಲು ಆವರಿಸಿತ್ತು ಮತ್ತು ದೂರದಿಂದ ಕೇಳಿಬರುತ್ತಿದ್ದ ನಾಯಿಗಳ ಊಳಿಡುವಿಕೆ, ಅಂಧಕಾರದಲ್ಲಿ ಮಾನವನ ತೊಳಲಾಟವನ್ನು ಜಗತ್ತಿಗೆ ಸಾರುತ್ತಿರುವಂತೆ ತೋರುತ್ತಿತ್ತು.

* * * *

## ೫. ಪ್ರವಾದಿಗಳು ಮತ್ತು ಭವಿಷ್ಯವಾದಿಗಳ ಬಗ್ಗೆ

ಅಂದಿನ ಸಂಜೆ ಊಟದ ನಂತರ ಭೇಟಿಗರು ಬೋರಾಲ್ ಬಂಗಲೆಯ ಅಂಗಳಕ್ಕೆ ಹಿಂತಿರುಗಿ ಠಾಕೂರ್ ಅವರೊಂದಿಗೆ ಮಾತುಕತೆ ಆರಂಭಿಸಿದರು. ಎಲ್ಲರೂ ಕುಳಿತುಕೊಂಡ ನಂತರ ಅವರ ಪೈಕಿ ಹಿರಿಯರಾದ ವ್ಯಕ್ತಿ ಠಾಕೂರ್ ಅವರನ್ನು ಉದ್ದೇಶಿಸಿ, ಠಾಕೂರ್! ಧರ್ಮದ ಬಗ್ಗೆ ನೀವು ಇಷ್ಟು ವಿಶಾಲ ಮನೋಭಾವನೆಯನ್ನು ಹೇಗೆ ಬೆಳೆಸಿಕೊಂಡಿರಿ? ಒಗ್ಗೂಡಿಸುವ ಬದಲು, ವಿಭಜಿಸುವ ಸ್ಥಿರ ಪರಿಕಲ್ಪನೆಗಳನ್ನು ನಿವಾರಿಸುವ ಸಾಧ್ಯತೆ ಇದೆಯೆನ್ನುವ ಭಾವನೆಯನ್ನು ನೀವು ಜನರಲ್ಲಿ ಮೂಡಿಸುತ್ತೀರಿ" ಎಂದು ಕೇಳಿದರು.

ಠಾಕೂರ್ ತಮ್ಮ ಮಾತನ್ನು ಆರಂಭಿಸಿ "ನನ್ನ ಪ್ರಕಾರ ನಿಜವಾದ ಧರ್ಮದ ಆಲೋಚನಾ ಸರಣಿಯು ಪ್ರೇಮಯುಕ್ತ ಭಗವಂತನ ವ್ಯಕಿತ್ವ ಮತ್ತು ಪರಿಕಲ್ಪನೆಯಲ್ಲಿ ಕೇಂದ್ರೀಕೃತವಾಗಿದೆ. ಇದನ್ನು ಅವನತ್ತ ಶ್ರದ್ಧೆ ಪ್ರೇಮ ಮತ್ತು ಸೇವೆಯ ಮೂಲಕ ಮಾತ್ರ ಸಾಕಾರಗೊಳಿಸಬಹುದಾಗಿದೆ. ಏಕೆಂದರೆ ಪ್ರತಿ ಕ್ರಿಸ್ತಾಗಮನ, ಪ್ರತಿ ಅವತಾರ, ದೇವರ ಪುತ್ರ ಮತ್ತು ಮಿತ್ರರೆಲ್ಲರೂ ವಿಭಿನ್ನ ಮೂರ್ತೀಕರಣವಾಗಿದ್ದರೂ, ಒಬ್ಬನೇ ಆಗಿದ್ದಾನೆ. ಅವರುಗಳ ನಾಮಗಳು ಯುಗಕ್ಕೆ ಅನುಸಾರವಾಗಿ ಬೇರೆಯಾಗಿದ್ದರೂ, ದೇವರು ಒಬ್ಬನೇ ಆಗಿದ್ದಾನೆ. ಆದ್ದರಿಂದಲೇ ಒಬ್ಬನನ್ನೇ ಅನುಸರಿಸಿದರೂ, ಯಾರನ್ನೂ ನಿರಾಕರಿಸಬೇಡಿರಿ. ಈ ರೀತಿ ಮಾಡುವುದು ಅನುಯಾಯಿಗಳತ್ತ ಶಾಪವಾಗಿರುತ್ತದೆ ಮತ್ತು ಪ್ರವಾದಿಗಳ ಧರ್ಮನಿಂದೆಯಾಗುತ್ತದೆ."

"ಧರ್ಮನಿಂದೆಯೇ ಠಾಕೂರ್? ನೀವು ಇದನ್ನು ಭೀಕರವಾಗಿಸುತ್ತಿದ್ದೀರಿ."

ಠಾಕೂರ್ ಅವರ ಕಣ್ಣುಗಳಲ್ಲಿ ಕುಚೋದ್ಯ ಮೂಡಿಬಂದಿತು. "ಭಗವಂತನು ಪ್ರವಾದಿಗಳನ್ನು ಸೃಷ್ಟಿಸುವುದರಿಂದ ಮತ್ತು ಪ್ರವಾದಿಗಳು ನಿಯಮಗಳನ್ನು ದೃಢವಾಗಿ ಘೋಷಿಸುವುದರಿಂದ ಹಾಗೂ ಮುಂದುವರೆದಂತೆ, ಇವನ್ನು ಪರಿಪಾಲಿಸಿ, ಈಡೇರಿಸುವುದೇ ಏಕೈಕ ಮಾರ್ಗವಾಗಿರುವುದರಿಂದ, ಇವುಗಳ ಪೈಕಿ ಯಾವುದೇ ಒಂದರ ವಿರುದ್ಧ ಘರ್ಷಣೆ ಮತ್ತು ದ್ವೇಷ, ಧರ್ಮನಿಂದೆ ಮತ್ತು ಸೈತಾನೀಯ ವಿಕಲ್ಪವಾಗುವುದಿಲ್ಲವೇ?"

"ನೀವು ಸದಾ ಎಲ್ಲಾ ಪ್ರವಾದಿಗಳು ಒಂದೇ ಎಂದು ಪಟ್ಟುಹಿಡಿದು ಹೇಳುತ್ತೀರಿ," ಎಂದಳು ಆ ತರುಣಿ. "ಬಹುಶಃ ಅವರುಗಳು ಒಂದೇ ಆಗಿರಬಹುದು.



ಆದರೂ ಶ್ರದ್ಧಾಘೋಷಣೆಗಳನ್ನು ನೀಡುವಾಗ ಯಾಕೆ ವ್ಯತಿರಿಕ್ತವಾಗಿ ವರ್ತಿಸುತ್ತಾರೆ?"

ಠಾಕೂರ್ ಇದನ್ನು ವಿವರಿಸುತ್ತಾ, "ಪ್ರವಾದಿಗಳು ಒಂದೇ ಆಗಿದ್ದರೂ, ಎರಡು ಅಂಶಗಳು, ಅಂದರೆ ದೈವಿಕತೆ ಮತ್ತು ವಿಭಿನ್ನತೆ, ಸದಾ ಅಸ್ತಿತ್ವದಲ್ಲಿರುತ್ತವೆ. ದೈವಿಕತೆಯು ಚಿರಂತನ, ಸಾರ್ವತ್ರಿಕ ಮತ್ತು ಅಪರಿವರ್ತನೀಯವಾಗಿದೆ. ವಿಭಿನ್ನತೆಯು ಕಾಲ ಸ್ಥಳ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಹೀಗಾಗಿ, ನಿರ್ದಿಷ್ಟ ಪರಿಸ್ಥಿತಿಗಳು ಮತಸಿದ್ಧಾಂತಗಳನ್ನು ಹಲವಾರು ರೂಪದಲ್ಲಿ ರೂಪಿಸಬಹುದಾದರೂ, ಮಾನವ ಉದ್ಧಾರದ ನಿಯಮ ಮತ್ತು ಮೂಲ ತತ್ತ್ವ ಯಾವಾಗಲೂ ಸರಿಸಮಾನವಾಗಿ ಪ್ರಜ್ವಲಿಸುತ್ತವೆ."

"ಎಲ್ಲಾ ರೀತಿಯಲ್ಲೂ ಸರಿಸಮಾನವಾದ ನಿಯಮಗಳು ಮತ್ತು ತತ್ತ್ವಗಳು ಯಾವುವು?

"ಕೆಡುಕಿನತ್ತ ಸೂಕ್ತ ನಿರೋಧಕಶಕ್ತಿಯೊಂದಿಗೆ ಅಸ್ತಿತ್ವವನ್ನು ಸಮರ್ಥಿಸಿ, ಪೋಷಿಸಿ, ಸಂರಕ್ಷಿಸುವುದು, ದೈವಿಕತೆಯ ನಾಲ್ಕು ಗುಣಲಕ್ಷಣಗಳೆಂದು ನಾನು ಭಾವಿಸುತ್ತೇನೆ. ಆಗ ಭಗವಂತನು ಮಹದಾನಂದದಿಂದ ಪ್ರತಿಯೊಬ್ಬರನ್ನೂ ಅನುಗ್ರಹಿಸುತ್ತಾನೆ. ಮಿಗಿಲಾಗಿ, ಪರಮಾತ್ಮನ ಅಮೃತರಸವಾದ ಪ್ರೇಮ ಪ್ರತಿ ಮನಸ್ಸಿನಲ್ಲೂ ನೆಲೆಸಿದೆಯೆಂದೂ ನಾನು ನಂಬುತ್ತೇನೆ."

"ಪ್ರೇಮವೇ ಠಾಕೂರ್?" ಎಂದು ಗಂಭೀರ ನೋಟದ ಯುವಕನು ಮಧ್ಯೆ ಪ್ರಶ್ನಿಸಿದನು. "ಇದರ ಬಗ್ಗೆ ಬಹಳ ಗೊಂದಲವಿದೆ. ಯೆಹೂದಿ ಪ್ರವಾದಿಗಳು ಮತ್ತು ಮೊಹಮ್ಮದ್, ಭಗವಂತನ ಕ್ರೋಧಕ್ಕೆ ತುತ್ತಾಗುವ ಭೀತಿಯನ್ನು ಪ್ರತಿಪಾದಿಸುತ್ತಿದ್ದರು. ಇದೇ ಸಮಯದಲ್ಲಿ ಕ್ರಿಸ್ತನಂಬಿಕೆಯ ಮೂಲತತ್ವವೆಂದರೆ, ಭಗವಂತನ ಪ್ರೇಮದಲ್ಲಿನ ಆನಂದ. ಇವು ವಿಭಿನ್ನವಾಗಿವೆ ಮತ್ತು ಕಾಲ, ಸ್ಥಳ ಹಾಗೂ ಪರಿಸ್ಥಿತಿಯನ್ನೂ ಮೀರಿದ ಪ್ರಶ್ನೆಯಾಗಿದೆ ಎಂದು ನೀವು ಕಾಣುತ್ತಿಲ್ಲವೇ?"

ಠಾಕೂರ್ ತಲೆಯಾಡಿಸಿ ಉತ್ತರಿಸಿದರು. "ಭೀತಿ ಮತ್ತು ಆಶಯ, ಮನಸ್ಸನ್ನು ಜ್ಞಾನದತ್ತ ಒಯ್ಯುತ್ತವೆ ಎಂದು ನಾನು ತಿಳಿಯುತ್ತೇನೆ. ನಂತರ ದಯೆ ಮತ್ತು ಪ್ರೇಮಸಾಧನೆಗೆ ಎಡೆಮಾಡಿಕೊಡುತ್ತವೆ. ಎಲ್ಲಾ ಪ್ರವಾದಿಗಳು ಪ್ರೇಮಕ್ಕೆ ಪ್ರಾಮುಖ್ಯ ನೀಡಿ, ತಮ್ಮ ಬೋಧನೆಗಳಿಗೆ ಆಧಾರವಾಗಿಸಿದರು. ಏಕೆಂದರೆ ಇದು ನಮ್ಮನ್ನು ಸಾಧಕರಾಗಿಸಿ, ನಮ್ಮ ಆತ್ಮಗಳನ್ನು ಉದ್ಧರಿಸುತ್ತದೆ. ಈ ರೀತಿ, ಯೆಹೂದಿಗಳ ಶುಭವಾರ್ತೆಯಲ್ಲಿ ಹೇಳಲಾಗಿದೆ... 'ಪ್ರೇಮವೇ ಟೋರನ (ಮೋಸೆಸ್ ಶಾಸನ) ಆದಿ ಮತ್ತು ಅಂತ್ಯವಾಗಿದೆ. ಮತ್ತು ಮೊಹಮದ್ ಹೇಳಿದ್ದಾನೆ: 'ನೀವು ಅಲ್ಲಾವನ್ನು ಪ್ರೀತಿಸುತ್ತಿದ್ದಲ್ಲಿ, ನನ್ನನ್ನು ಅನುಸರಿಸಿರಿ ಮತ್ತು ಅಲ್ಲಾ ನಿಮ್ಮನ್ನು ಪ್ರೀತಿಸುತ್ತಾನೆ...' ಎಂದು. ಆದ್ದರಿಂದಲೇ ಯಾವುದೇ ಪ್ರವಾದಿಯ ಬಗ್ಗೆ ಸೀಮಾನಿರ್ಣಯವನ್ನು ಮಾಡಿ ನಿಂದೆ ಮಾಡಬೇಡಿರಿ. ಇಲ್ಲದಿದ್ದಲ್ಲಿ ಇದು ವಾಸಿಯೇ ಆಗದಂತಹ ಸ್ಥಿರ ಸ್ಥಿತಿಯಲ್ಲಿ ನಿಮ್ಮನ್ನು ಸಿಲುಕಿಸುತ್ತದೆ.."

ಮನವರಿಕೆಯಾಗದ ಯುವಕನು ಒತ್ತಾಯಪೂರ್ವಕವಾಗಿ ಮಾತನಾಡಿದನು. ಆದರೆ ಏಸು, ಬುದ್ಧ ಮತ್ತು ಕೃಷ್ಣ, ಪ್ರೇಮದ ಬಗ್ಗೆ ಪ್ರತಿಪಾದಿಸಿರುವ ವಿಧಾನವನ್ನು ಪರೀಕ್ಷಿಸಿದಾಗ, ಸಾರದಲ್ಲಿ ಇಲ್ಲದಿದ್ದರೂ ಸಹ, ಗುಣದಲ್ಲಿ ನಿಸ್ಸಂದೇಹವಾಗಿ ವ್ಯತ್ಯಾಸವಿದೆಯೆಂದು ನನಗೆ ತೋರುತ್ತದೆ."

"ಆಕಾಶದತ್ತ ನೋಡಿರಿ" ಎಂದು ಥಾಕೂರ್ ಪೂರ್ವ ದಿಗಂತದಲ್ಲಿ ಕಂಡು ಬಂದ ಚಂದ್ರನತ್ತ ಬೆರಳು ತೋರಿಸಿ, "ಇಂದು ರಾತ್ರಿ ಉದಯಿಸಲಿರುವ ಚಂದ್ರನು ನಿನ್ನೆ ಉದಯಿಸಿದ್ದ ಅದೇ ಚಂದ್ರನಾಗಿದ್ದಾನೆ. ಮತ್ತು ನಾಳೆಯೂ ಉದಯಿಸುತ್ತಾನೆ. ಕೆಲವು ದಿನಗಳ ನಂತರ ಆ ಅರ್ಧ ಚಂದ್ರನು ನಮಗೆ ಪೂರ್ಣಚಂದ್ರನಾಗಿ ಕಂಡುಬರುತ್ತಾನೆ. ಆದರೂ ನಾವು ಕಾಣಲಿರುವ ಪೂರ್ಣಚಂದ್ರನು, ನಾವು ಈಗ ಕಾಣುತ್ತಿರುವ ಅದೇ ಅರ್ಧಚಂದ್ರನಾಗಿದ್ದಾನೆ ಮತ್ತು ಪ್ರತಿ ರಾತ್ರಿ ಉದಯಿಸುವ ಚಂದ್ರನೇ ಆಗಿದ್ದಾನೆ. ನಮ್ಮ ದೃಷ್ಟಿಯಿಂದ ಮಾತ್ರ ಅವನ ಬಿಂಬವು ದೊಡ್ಡದಾಗುತ್ತದೆ ಅಥವಾ ಚಿಕ್ಕದಾಗುತ್ತದೆ. ಅಂದರೆ ವಾಸ್ತವಿಕವಾಗಿ ಅದು ತನ್ನ ಗಾತ್ರವನ್ನು ಬದಲಾಯಿಸಿಕೊಳ್ಳುವುದೇ ಇಲ್ಲ. ಪ್ರತಿ ರಾತ್ರಿ ಒಂದೇ ಚಂದ್ರ ಇರುತ್ತಾನೆ. ಇದೇ ಮಾತು ಪ್ರತಿ ಕ್ರಿಸ್ತಾವತಾರ, ಪ್ರವಾದಿಗಳು ಮತ್ತು ದೇವಪುತ್ರನಿಗೆ ಅನ್ವಯಿಸುತ್ತದೆ. ಅವರುಗಳು ಸ್ವತಃ ಪೂರ್ಣರಾಗಿದ್ದರೂ, ಪರಿಸ್ಥಿತಿ, ಕಾಲ ಮತ್ತು ಸ್ಥಳಕ್ಕೆ ಅನುಗುಣವಾಗಿ ಈ ಪೂರ್ಣತೆಯನ್ನು ಪ್ರದರ್ಶಿಸುತ್ತಾರೆ. ಒಂದು ಮಾತು ನೆನಪಿನಲ್ಲಿಡಿ. ದೇವರು ಸರ್ವದಾ ಅಪರಿಮಿತ; ಅನುಯಾಯಿಗಳ ಶ್ರದ್ಧೆ ಮತ್ತು ನಿಲುವಿಗೆ ಅನುಸಾರವಾಗಿ ಒಂದು ನಿರ್ದಿಷ್ಟ ಅಂಶ ಪ್ರಮುಖವಾಗುತ್ತದೆ."

"ಥಾಕೂರ್, ಆದರೂ ಸಹ...... ನನ್ನ ಮುಖೇನ ಹೊರತು ಯಾರೂ ಪಿತನನ್ನು ತಲುಪಲಾರರು ಎನ್ನುವ ಕ್ರಿಸ್ತನ ಹೇಳಿಕೆಯಿದೆ.. ಇದರಿಂದ ಇತರ ಪ್ರವಾದಿಗಳನ್ನು ಅಂಗೀಕರಿಸುವುದು ಕಠಿಣವಾಗುತ್ತದೆ..."

ಥಾಕೂರ್ ಉತ್ತರಿಸಿದರು. 'ಆದರೆ 'ಕ್ರಿಸ್ತ' ಎಂದರೆ ಪವಿತ್ರೀಕೃತವೆಂದು ಅರ್ಥ. ಆದ್ದರಿಂದ ಎಲ್ಲಾ ನಿಜವಾದ ಪ್ರವಾದಿಗಳು, ಪ್ರತಿ ಜೀವಿಯ ಜೀವ, ಸತ್ವವಾದವಾಗಿ ವಾಸಮಾಡುತ್ತಿರುವ ಪರಮೋಚ್ಚಪಿತನ ಪ್ರೇಮದಿಂದ ಪವಿತ್ರೀಕೃತರಾಗಿರುವುದರಿಂದ ಕ್ರಿಸ್ತನಾಗಿರುತ್ತಾರೆ. ನನ್ನ ಪ್ರಕಾರ ಈ ಕಾರಣದಿಂದಲೇ ಏಸುವು 'ನಾನು ಏಬ್ರಹಾಮ್‌ಗಿಂತಲೂ ಮುಂಚಿತವಾಗಿದ್ದೇನೆ, ಹಾಗೂ 'ನೀನು ನನ್ನ ಮೂಲಕ ಮಾತ್ರ ಪಿತನನ್ನು ತಲುಪುತ್ತೀಯೆ' ಎಂದು ಹೇಳಿದ್ದಾನೆ."

ಎಲ್ಲೆಡೆ ಆವರಿಸಿದ ಒಂದು ಆಲೋಚನಾಯುಕ್ತ ಮೌನವು, ಕನ್ನಡಕ ಧರಿಸಿದ್ದ ಯುವಕನ ಅಭಿಪ್ರಾಯದಿಂದ ಕೊನೆಗೊಂಡಿತು. "ಏಷ್ಯಾದಿಂದ ಮತ್ತು ಬಹುಶಃ ಭಾರತದಿಂದ ಒಂದು ಹೊಸ ಸಾರ್ವತ್ರಿಕ ಧರ್ಮ ಹುಟ್ಟಬಹುದೆಂದು ಸಮಕಾಲೀನ ಮಹಾನ್ ಇತಿಹಾಸಜ್ಞ ಟಾಯನ್‌ಬಿ ಹೇಳಿರುವುದರ ಬಗ್ಗೆ ನಾವು ಸಂಜೆ ಊಟದ



ಸಮಯದಲ್ಲಿ ಚರ್ಚಿಸುತ್ತಿದ್ದೆವು..." ಯುವಕನು ಕ್ಷಣಕಾಲ ಸುಮ್ಮನಿದ್ದಂತೆಯೇ ಅವನ ಸಂಗಾತಿಯೊಬ್ಬನು ಮಧ್ಯೆ ಮಾತನಾಡಿದನು. "ಥಾಕೂರ್, ದಿವ್ಯ ತೇಜಸ್ಸು ಪೂರ್ವದಲ್ಲಿ ಹೊಮ್ಮಿ, ಪಶ್ಚಿಮದಲ್ಲಿ ಬೆಳಗುವ ರೀತಿಯಲ್ಲೇ ಮಾನವಪುತ್ರನ ಉದಯವಾಗಲಿದೆಯೆಂದು ಏಸು ಹೇಳಿದ್ದಾನೆ. ಪರಮಾಣು ಬಾಂಬುಗಳ ಇಂದಿನ ಯುಗದಲ್ಲಿ ನಾವು ಸರ್ವನಾಶ ಜಗತ್ತಿನಲ್ಲಿ ಬಾಳುತ್ತಿದ್ದೇವೆಂದು ಕೆಲವರು ಹೇಳುತ್ತಾರೆ. ಒಬ್ಬ ಜಗದೋದ್ಧಾರಕ ಬರಲಿದ್ದಾನೆಂದು ಎಲ್ಲಾ ಮಹಾನ್ ಧರ್ಮಗಳು ಭವಿಷ್ಯವಾಣಿಯನ್ನು ನುಡಿಯುತ್ತಿರುವ ಬಗ್ಗೆ ಇನ್ನೂ ಕೆಲವರು ಟೀಕಿಸಿದ್ದಾರೆ. ಹಿಂದೂಗಳು ಕಲ್ಕಿ ಅವತಾರಕ್ಕಾಗಿ ಕಾಯುತ್ತಿದ್ದಾರೆ ; ಬೌದ್ಧರು ಮೈತ್ರೇಯನಿಗಾಗಿ ಪ್ರಾರ್ಥಿಸುತ್ತಿದ್ದಾರೆ: ಮೊಹಮ್ಮದಿಯರು ಮುಂಟ್‌ಝುರ್‌ಗಾಗಿಯೂ ಕ್ರಿಸ್ತರು ಏಸುವಿನ ದ್ವಿತೀಯಾಗಮನವನ್ನೂ ನಿರೀಕ್ಷಿಸುತ್ತಿದ್ದಾರೆ ಮತ್ತು ಯೆಹೂದಿಗಳು ಈಗಲೂ ತಮ್ಮ ವಿಮೋಚಕನನ್ನು ಅರಸುತ್ತಾರೆ...."

"...ಥಾಕೂರ್, ಅವರುಗಳು ಕೇಳುತ್ತಿರುವುದು ಏನೆಂದರೆ, ಉದ್ಧಾರಕ ಬರುತ್ತಾನೆ ಎಂದಲ್ಲಿ ಅವನು ಯಾವಾಗ ಬರುತ್ತಾನೆ" ಎಂದು. ನೀವು ಏನು ಹೇಳುತ್ತೀರಿ ಎಂದು ತಿಳಿದುಕೊಳ್ಳಲು ಬಯಸುತ್ತಾರೆ ಎಂದಳು ಆ ತರುಣಿ, ಒತ್ತಾಯದ ಉತ್ತರ ಕೋರುವ ರೀತಿಯಲ್ಲಿ.

ಥಾಕೂರ್ ಅವರ ಧ್ವನಿ ಗಂಭೀರಗೊಂಡಿತು. ನನ್ನ ಪ್ರಕಾರ ಅನಿಷ್ಟಸೂಚಕ ದಬ್ಬಾಳಿಕೆಯು ನರಕಸದೃಶ ಅಂಕೆಗೆ ಒಳಪಟ್ಟು ಕಾಮನೆಯೆನ್ನುವ ಪೆಡಂಭೂತದ ಬಲವತ್ತಾದ ದಾಳಿಯ ಮೂಲಕ ಬಿರುಸಾಗಿ ಬಡಿದಾಗ; ಜೀವನವು ಹತಾಶೆಯಿಂದ ಕ್ಷಯಿಸಿ ಬೇಸರದಿಂದ ನರಳಿದಾಗ, ಆತ್ಮವು ಆಗ್ರಹದಿಂದ ಪ್ರತಿಭಟಿಸಿ, ಏದುಸಿರಿನಿಂದ ಬಿಕ್ಕಳಿಸಿದಾಗ ಪರಮಾನಂದಸ್ವರೂಪಿಯಾದ ಭಗವಂತನು ತನ್ನ ಅನಂತ ಬಾಹುಗಳನ್ನು ಚಾಚುತ್ತಾ ಭೂಮಿಗೆ ಇಳಿದುಬರುತ್ತಾನೆ."

"ದೇವರು ಭೂಮಿಗೆ ಇಳಿದುಬರುತ್ತಾನೆಯೇ? ಅವನು ಹೇಗೆ ಬರುತ್ತಾನೆ, ಥಾಕೂರ್?"

ಥಾಕೂರ್ ವಿವರಿಸುತ್ತಾ ನಾನು ಅರಿತಿರುವಂತೆ ಹಠಾತ್ ರೂಪಾಂತರವಾದ ದೇವಪುತ್ರನು ಜನರ ಅತಿಯಾತನೆಯ ಕೇಂದ್ರೀಕೃತ ಆಗ್ರಹದ ಮೊರೆಯಾಗಿರುತ್ತಾನೆ: ಆಗ ಅವನು ಪ್ರವಾದಿಯಾಗಿ ಪರಿಕಲ್ಪಿತನಾಗಿ ಜನಿಸುತ್ತಾನೆ. ಅವನು ಭೂಲೋಕದ ಜನರಿಗಾಗಿ ಮೇಲಿನಿಂದ ಮಾನವಸ್ವರೂಪಿಯಾಗಿ ಇಳಿದುಬರುವ ಪವಾಡವಾಗಿರುತ್ತಾನೆಂದು ನಾನು ನಂಬುತ್ತೇನೆ."

"ಜೀ ಥಾಕೂರ್", ಎನ್ನುವ ಪ್ರತಿಕ್ರಿಯೆ ವ್ಯಕ್ತಪಡಿಸಿದ ಯುವತಿಯು, "ವಿಶ್ವದಲ್ಲಿ ಗೋಳಾಡುತ್ತಾ, ದುಃಖಿಸುತ್ತಾ ಭೀತಗ್ರಸ್ತರಾಗಿರುವ ಅಸಂಖ್ಯಾತ ಜನರಿದ್ದಾರೆ. ದೇವರು ಈಗಾಗಲೇ ಬಂದಿದ್ದಾನೆಂದು ನೀವು ಭಾವಿಸುತ್ತೀರಾ? ಬಂದಿದ್ದಾನೆ

ಎಂದಲ್ಲಿ ಎಲ್ಲಿದ್ದಾನೆ?" ಎಂದು ಕೇಳಿದಳು.

ಥಾಕೂರ್ ಮೃದುವಾಗಿ ಉತ್ತರಿಸುತ್ತಾ, "ಬಹುಶಃ ವಿಶ್ವದ ಒಂದು ಉಪೇಕ್ಷಿತ ಮೂಲೆಯಲ್ಲಿ ತನ್ನ ಕೈಯಲ್ಲಿ ಪ್ರೇಮದ ಅಣುಬಾಂಬ್ ಅನ್ನು ಇಟ್ಟುಕೊಂಡು ಅತ್ಯದ್ಭುತ ಸರಳತೆಯಿಂದ ಅಪಾರ ತಿಳುವಳಿಕೆಯ ಮೂರ್ಖತನದಿಂದ, ಸಾಧಾರಣದಲ್ಲೂ ಸಾಧಾರಣವಾಗಿ ಅವನು ಇಂದು ಕುಳಿತಿದ್ದಾನೆ."

"ವಿಶ್ವದಲ್ಲಿ ಅನೇಕಾನೇಕ ಉಪೇಕ್ಷಿತ ಮೂಲೆಗಳಿವೆ ಥಾಕೂರ್. ಅವನನ್ನು ಗುರುತಿಸುವಂತಹ ಬೇರೆ ಯಾವುದೇ ಸಹಾಯಕ ಅಂಶವಿಲ್ಲವೇ?"

"ತನ್ನ ಮಾತುಗಳಲ್ಲಿ ಮತ್ತು ತನ್ನ ಕಾರ್ಯಗಳಲ್ಲಿ ದೈವಿಕತೆ ಮತ್ತು ಭಾವನಾರೂಪತೆಯನ್ನು ಅರ್ಥಪೂರ್ಣವಾಗಿ ಮೇಳೈಸಿಕೊಂಡು, ಕಾಲ, ಸ್ಥಳ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ಎಲ್ಲಾ ಪರಿಜ್ಞಾನವನ್ನು ಸಾಂಪ್ರದಾಯಿಕವಾಗಿ ಪರಿಪೂರ್ಣಗೊಳಿಸುವವನ್ನು ನೀವು ಕಂಡಾಗ, ಅವನು ಅಸತ್ಯವಲ್ಲ, ಅವನು ನಿರರ್ಥಕನಲ್ಲ ಎನ್ನುವುದನ್ನು ಅರಿಯಬಹುದು. ಅವನು ಪೂರ್ಣತೆಯ ಸಾಕಾರ, ಅವನು ಅತಿ ಶ್ರೇಷ್ಠ, ಅವನು ಪರಮೋಚ್ಚವಾಗಿ ಪ್ರೀತಿಪಾತ್ರ ಮತ್ತು ಅವನು ಎಲ್ಲರ ನಿರ್ದಿಷ್ಟ ಗುಣಗಳನ್ನು ನೆರವೇರಿಸಿ, ಪೂರೈಸುತ್ತಾನೆ. ಅವನು ಪ್ರೇಮದ ಪ್ರವಾಹ, ಅವನು ಮಾನವನ ಉದ್ಧಾರಕ!"

"....ಎಲ್ಲಾ ಪರಿಜ್ಞಾನವನ್ನು ಸಾಂಪ್ರದಾಯಿಕವಾಗಿ ಪರಿಪೂರ್ಣಗೊಳಿಸುತ್ತಾನೆ.... ದೈವಿಕತೆ ಮತ್ತು ಭಾವನಾರೂಪತೆ ಅರ್ಥಪೂರ್ಣವಾಗಿ ಮೇಳೈಸುವಿಕೆ.. ಈ ಪದಗಳು ದೇವರು ಎನ್ನುವ ಪದದಷ್ಟೇ ಅರ್ಥಮಾಡಿಕೊಳ್ಳಲು ಕಠಿಣವಾಗಿವೆ."

ಥಾಕೂರ್ ವಿವರಿಸಿದರು: "ಪ್ರಪಂಚದಲ್ಲಿ ಮನುಷ್ಯನು ಊಟಮಾಡಿ, ಮಲಗಿ, ತಂದೆತಾಯಿ, ಹೆಂಡತಿ ಮತ್ತು ಮಕ್ಕಳನ್ನು ಪ್ರೀತಿಸಿ, ಸುಖದುಃಖಗಳನ್ನು ಅನುಭವಿಸುತ್ತಾ ಅವನು ಸಾಧಾರಣ ಮನುಷ್ಯನಂತೆ ಜೀವಿಸುತ್ತಿದ್ದರೂ, ಅವನ ಪರಮೋಚ್ಚ ಮೂಲವಾದ ಪರಮಾತ್ಮನತ್ತ ಅವನ ಸಕ್ರಿಯ ಒಲವು ಅವನ ವ್ಯಕ್ತಿತ್ವದಲ್ಲಿ ಸಾಮಾನ್ಯ ವಿಧಾನವಾಗಿ ಅಭಿವ್ಯಕ್ತಗೊಂಡು, ಅವನಿಗೆ ಪ್ರತಿ ಕ್ಷಣವೂ ಮಾರ್ಗದರ್ಶನ ನೀಡುತ್ತದೆ. ಇದು ಸಾಮಾನ್ಯ ಜನರಿಗೆ ಉಸಿರಾಟದಷ್ಟೇ ಅವನಿಗೆ ಸಹಜವಾಗಿರುತ್ತದೆ. ಅವನು ಪ್ರತಿ ವಿಧಾನದಲ್ಲೂ ಸಾಮಾನ್ಯವಾಗಿದ್ದಾನೆ; ಎಂದಿಗೂ ನಿರ್ಲಿಪ್ತನಾಗಿದ್ದರೂ, ಎಲ್ಲರನ್ನೂ ಆಕರ್ಷಿಸಿ, ಮಾನವನ ಮುಕ್ತಿಗೆ ರಾಜಪಥವನ್ನು ತೋರಿಸುತ್ತಾನೆ. ಮಿಗಿಲಾಗಿ ಎಲ್ಲಾ ಪ್ರವಾದಿಗಳು ಒಂದೇ ಬಿಂದುವಿನಲ್ಲಿ ಸೇರಿ, ವರ್ತಮಾನದ ಬಗ್ಗೆ ಅವನನ್ನು ಜಾಗೃತಗೊಳಿಸುತ್ತಾರೆ ಎನ್ನುವುದೇ ನನ್ನ ನಂಬಿಕೆ. ಭಗವಂತನತ್ತ ಪ್ರೇಮವು ದೇವರ ಸೇವೆಯಲ್ಲಿ ತೊಡಗಿರುವ ಎಲ್ಲರನ್ನೂ ಪ್ರೀತಿಸುವುದೇ ಆಗಿದೆ. ಹೌದು, ನಾನು ಹೇಳುತ್ತೇನೆ. ಅವನೇ ಮಾರ್ಗ, ಅವನೇ ಸತ್ಯ, ಅವನೇ ಬಾಳ ಬೆಳಕು!"



ಒಂದು ಸುದೀರ್ಘ ಮೌನ ಎಲ್ಲೆಡೆ ಆವರಿಸಿತು. ಥಾಕೂರ್ ಅವರ ಊಟದ ಸಮಯವಾಯಿತೆಂದು ಒಬ್ಬ ಪರಿಚಾರಕ ಬಂದು ತಿಳಿಸಿದಾಗ, ಮಾತು ಮುಗಿಸಬೇಕಾಯಿತು. ಎಲ್ಲರೂ ಥಾಕೂರ್ ಅವರಿಗೆ ಶುಭರಾತ್ರಿಯನ್ನು ಕೋರಿ, ಅತಿಥಿಗೃಹದತ್ತ ತೆರಳಿದರು.

* * * *

# ೬. ಭಕ್ತಿ – ಒಂದು ವಾಸ್ತವಿಕ ವಿಧಾನ

ಅಮೆರಿಕನ್ ಭೇಟಿಗರು ಮಾರನೆಯ ಬೆಳಿಗ್ಗೆ ಮುಂಚಿತವಾಗಿಯೇ ಬಂದು ಥಾಕೂರ್ ಅವರ ಪಕ್ಕದಲ್ಲಿ ಕುಳಿತಾಗ, ಅವರುಗಳ ಎಡೆಬಿಡದ ಪ್ರಶ್ನೆಗಳನ್ನು ಮುಂದುವರೆಸುವಂತೆ, ಥಾಕೂರ್ ಅವರ ಒಲುಮೆಯ ನೋಟ ಆಹ್ವಾನಿಸುವಂತಿತ್ತು. ಅವರುಗಳು ಅಲ್ಲಿಂದ ಹೊರಡುವ ಮೊದಲು ಇದೇ ಅವರ ಅಂತಿಮ ಭೇಟಿಯಾಗಿತ್ತು. ಮತ್ತು ಅವರುಗಳ ಪೈಕಿ ಹಿರಿಯರಾದವರು ತಕ್ಷಣವೇ ಪ್ರಶ್ನೆ ಹಾಕಿದರು, "ಥಾಕೂರ್, ಭಗವಂತನ ಎಲ್ಲಾ ವಿಭಿನ್ನ ಅಂಶಗಳು ಮತ್ತು ಅವನತ್ತ ಭಕ್ತಿ ತೋರುವ ಬಗ್ಗೆ ನೀವು ವಿವರಿಸಿದ್ದೀರಿ. ಇದರಲ್ಲಿರುವ ಸಮಸ್ಯೆಯೆಂದರೆ ಸಾಧಾರಣ ವ್ಯಕ್ತಿಗಳು ಭಗವಂತನನ್ನು ಪ್ರೀತಿಸುವ ಸಾಮರ್ಥ್ಯ ಹೊಂದಿದ್ದಾರೆ ಎನ್ನುವುದನ್ನು ಇದು ಊಹಿಸುತ್ತದೆ. ಅಂತಿಮವಾಗಿ ಹೇಳಬೇಕೆಂದಲ್ಲಿ......ಕಾಯೇನ, ವಾಚಾ, ಮನಸಾ ಸಂಪೂರ್ಣವಾಗಿ ಭಗವಂತನನ್ನು ಪ್ರೀತಿಸಬೇಕು. ಮತ್ತು ತನ್ನ ನೆರೆಹೊರೆಯವರನ್ನು ಪ್ರೀತಿಸಬೇಕು ಎಂದು ಏಸು ಹೇಳಿದ್ದನು. ನೀವು ಇವೆಲ್ಲವನ್ನೂ ಇದೇ ಮಟ್ಟಕ್ಕೆ ತಂದಿರುವಂತೆ ತೋರುತ್ತದೆ. ಆದರೆ ತೊಂದರೆಯೆಂದರೆ, ಇದನ್ನು ಸೈದ್ಧಾಂತಿಕವಾಗಿ ಅಂಗೀಕರಿಸುವುದು ಸುಲಭ, ಅರ್ಥ ಮಾಡಿಕೊಳ್ಳುವುದೂ ಕಠಿಣವಲ್ಲ, ಆದರೆ.. ಮ್‌ಮ್, ನಮ್ಮ ಆಧುನಿಕ ಜಗತ್ತಿನಲ್ಲಿ ಮನೋಭಾವಗಳು ಎಷ್ಟೇ ಸಿದ್ಧವಿದ್ದರೂ ಮಾನವ ಸ್ವಬಾವಗಳು ನಮ್ಮನ್ನು ಬಲಹೀನಗೊಳಿಸುತ್ತವೆ.."

ಥಾಕೂರ್ ಸಹಾನುಭೂತಿಯಿಂದ ಮುಗುಳುನಕ್ಕು, ಮೆಲು ಧ್ವನಿಯಲ್ಲಿ ಆಗ್ರಹಪೂರ್ವಕವಾಗಿ ಮಾತನಾಡಿದರು. "ಆದರೂ ಸಹ, ಜೀವನದ ಧ್ಯೇಯವೆಂದರೆ ವಿಕಸನಯುಕ್ತ ಮತ್ತು ಶಕ್ತಿಯುತ ಇಚ್ಛಾಸಂಕಲ್ಪದ ಮೂಲಕ ಭಗವಂತ, ಮನುಷ್ಯ ಮತ್ತು ಪರಿಸರದ ನಡುವೆ ಒಂದು ಅರ್ಥಪೂರ್ಣ ಸಮನ್ವಯವನ್ನು ಸಾಧಿಸುವುದು. ಇದಲ್ಲದೆ, ಕ್ರಮೇಣ ವೃದ್ಧಿಗೊಳ್ಳುವ ಈ ಸಮನ್ವಯವನ್ನು ನಿಸ್ಸಂದೇಹವಾಗಿ ಮೂಡಿಸುವ ಮೂರು ಅಭ್ಯಾಸಗಳಿವೆ ಎಂದು ನನಗೆ ಗೊತ್ತು."

"ಈ ಅಭ್ಯಾಸಗಳು ಯಾವುವು, ಥಾಕೂರ್?"

"ಮೊಟ್ಟಮೊದಲಿಗೆ" ಎಂದು ಥಾಕೂರ್ ಆರಂಭಿಸಿ "ಯಾವುದೇ ಆಹಾರ ತಿನ್ನುವ ಮೊದಲು ದಿನವೂ ನಿಮ್ಮ ದೇವರಿಗೆ ಯಾವುದೇ ಪದಾರ್ಥವನ್ನು ನೈವೇದ್ಯವಾಗಿ ಸಮರ್ಪಿಸಬೇಕು. ಈ ಪದ್ಧತಿ ಅಸ್ತಿತ್ವದ ಮೂಲ



ಚಲನಾಶಕ್ತಿಯಾಗಿರುತ್ತದೆ ಮತ್ತು ನಾನು ಇದನ್ನು *ಇಸ್ಟೋಬ್ರಿಟ್ಟಿ* ಎಂದು ಕರೆಯುತ್ತೇನೆ" ಎಂದರು.

"ಎರಡನೆಯದಾಗಿ ಶ್ರದ್ಧಾಭಕ್ತಿಯುತ ಆರಾಧನೆಯ ಮೂಲಕ ಭಗವಂತನತ್ತ ತನ್ನನ್ನು ಉದ್ಧಾರಗೊಳಿಸಿಕೊಳ್ಳುವುದನ್ನು ಅಭ್ಯಾಸಮಾಡಿಕೊಳ್ಳಬೇಕು. ಇದನ್ನು ನಾನು *ಜಾಪ್‌ಜೊನ್* ಎಂದು ಕರೆಯುತ್ತೇನೆ."

"ಮತ್ತು ಅಂತಿಮವಾಗಿ ಪುಣ್ಯ ಕಾರ್ಯಗಳ ಮೂಲಕ ಭಗವಂತನತ್ತ ಇತರರನ್ನು ಉದಾತ್ತಗೊಳಿಸುವುದನ್ನು ಪರಿಪಾಟವಾಗಿಸಿಕೊಳ್ಳಬೇಕು. ಇದನ್ನು ನಾನು *ಜಾಡ್‌ಜೊನ್* ಎಂದು ಕರೆಯುತ್ತೇನೆ.

"ಈ ಮೂರು ಪದ್ಧತಿಗಳಾದ *ಇಸ್ಟೋಬ್ರಿಟ್ಟಿ, ಜಾಪ್‌ಜೊನ್* ಮತ್ತು *ಜಾಡ್‌ಜೊನ್*‌ಗಳನ್ನು ಪ್ರಾಮಾಣಿಕವಾಗಿ ಮತ್ತು ಸತತವಾಗಿ ಅನುಸರಿಸಿದಲ್ಲಿ ಯಾವುದೇ ವ್ಯಕ್ತಿಯು ಒಂದೆಡೆ ತನ್ನ ದೇವರತ್ತ ಮತ್ತು ಮತ್ತೊಂದೆಡೆ ತನ್ನ ಪರಿಸರದತ್ತ ಆ ಅರ್ಥಪೂರ್ಣ ಸಮನ್ವಯತೆಯನ್ನು ರೂಢಿಸಿಕೊಳ್ಳುವಲ್ಲಿ ಸಾಧ್ಯವಾಗುತ್ತದೆ."

ಯುವತಿಯ ಕಣ್ಣುಗಳು ಆಶ್ಚರ್ಯದಿಂದ ಅರಳಿದವು. "ಪ್ರತಿದಿನವೂ ದೇವರಿಗೆ ಏನಾದರೂ ಸಮರ್ಪಿಸುವುದೇ, ಥಾಕೂರ್ ? ಅಸ್ತಿತ್ವದ ಮೂಲ ಚಲನಾಶಕ್ತಿಯುತ್ತ? ಇದೆಲ್ಲದರ ಅರ್ಥವೇನು?"

"ನನ್ನ ಅಭಿಪ್ರಾಯದಲ್ಲಿ" ಎಂದು ಆರಂಭಿಸಿದ ಥಾಕೂರ್ , "ಪ್ರತಿದಿನವೂ ನಿಮ್ಮ ದೇವರಿಗೆ ಯಾವುದಾದರೂ ಪದಾರ್ಥವನ್ನು ಸಮರ್ಪಿಸಿದಾಗ ಶಕ್ತಿ ಕಲ್ಪಿತವಾಗುತ್ತದೆ. ಅವನನ್ನು ಸಂತೃಪ್ತಗೊಳಿಸುವ ಮನೋಭಾವ ಕ್ರಮೇಣ ರೂಢಿಗೆ ಬರುತ್ತದೆ. ಇದರಿಂದ ಅವನು ಪರಮೋಚ್ಚನಾಗುತ್ತಾನೆ ಮತ್ತು ಇದು ಸಾಮರಸ್ಯ ಮತ್ತು ಉತ್ತಮ ತಿಳುವಳಿಕೆಯತ್ತ ಭಾವೋದ್ರೇಕಗಳು ಮತ್ತು ಕಾಮನೆಗಳನ್ನು ಖಂಡಿತ ಹೊಂದಾಣಿಸುತ್ತದೆ. ಇದು ನಿಮ್ಮ ಕಾರ್ಯಗಳು ಮತ್ತು ಆಲೋಚನೆಗಳು ಹಾಗೂ ನಿಮ್ಮ ಪ್ರೇಮಭಾವನೆಗಳ ನಡುವೆ ಒಂದು ಸಂಬಂಧವನ್ನು ಸ್ಥಾಪಿಸುವಲ್ಲಿ ನೆರವಾಗುತ್ತದೆ. ಆದ್ದರಿಂದಲೇ ಈ ದೈನಂದಿನ ಶ್ರದ್ಧಾಯುಕ್ತ ನೈವೇದ್ಯ ಅಥವಾ ಇಸ್ಟೋಬ್ರಿಟ್ಟಿ, ವೈಯಕ್ತಿಕ ಪ್ರಯತ್ನವನ್ನು ದೈವಿಕ ಅನುಗ್ರಹದೊಂದಿಗೆ ಒಗ್ಗೂಡಿಸುತ್ತದೆ" ಎಂದರು.

"ಹೇಗೆ?"

"ವೈಯಕ್ತಿಕ ಪ್ರಯತ್ನವು ಪ್ರಚೋದಕ ನರದ ಅಂಗವಾಗಿದೆಯೆಂದು ನಾನು ಭಾವಿಸುತ್ತೇನೆ" ಎಂದು ಥಾಕೂರ್ ವಿವರಿಸಿದರು. "ಅಂದರೆ ಈ ವಿಸ್ತರಣೆಯಿಂದಾಗಿ ನೀವು ಅತ್ಯಂತ ಆತ್ಮತೃಪ್ತಿಯನ್ನು ಅನುಭವಿಸುತ್ತೀರಿ. ಮತ್ತೊಂದು ವಿಷಯ. ಪ್ರಾಮಾಣಿಕ ಹಂಬಲವಿದ್ದಲ್ಲಿ, ವಿಕಸನ ನಿಸ್ಸಂದೇಹವಾಗಿರುತ್ತದೆ. ಆದರೆ ಕ್ರಿಯೆಯಿಲ್ಲದ ಹಂಬಲ ಅಥವಾ ಹಂಬಲವಿಲ್ಲದ ಕ್ರಿಯೆಯು ಅನುಗ್ರಹ ಸ್ಥಿತಿಯನ್ನು ಸಾಧಿಸಲು

ಸಾಧ್ಯವಾಗುವುದಿಲ್ಲ. ನಿಮ್ಮ ಚಟುವಟಿಕೆಗಳ ಹಿಂದೆ ಏಕತೆಗಾಗಿ ಹಂಬಲವಿಲ್ಲದಿದ್ದಲ್ಲಿ. ನೀವು ನಿಮ್ಮ ಸ್ವಂತ ಮನವನ್ನು ಅಥವಾ ಇತರರ ಮನವನ್ನು ತಣಿಸಲಾರಿರಿ. ಆದರೆ ನಿಮ್ಮ ದೇವರ ನಿರ್ವಹಣೆಯತ್ತ ನಿಮ್ಮ ಸ್ವಂತ ಪ್ರಯತ್ನದ ಮೂಲಕ ಗಳಿಸಲಾದ ಆಹಾರ ಅಥವಾ ಹಣವನ್ನು ದಿನವೂ ಅವನಿಗೆ ಸಮರ್ಪಿಸಿದಾಗ ನಿಮ್ಮ ಶ್ರಮದ ಬೆವರಿನ ಮೂಲಕ ಯಾರಿಗೆ ನೀವು ಸೇವೆ ಸಲ್ಲಿಸುತ್ತೀರೋ ಅವನು ಸ್ವಯಂ ಆಗಿ ಉದಯಿಸುತ್ತಾನೆ. ನಿಮ್ಮ ಹೃದಯದಲ್ಲಿ ನಿಮ್ಮವನೇ ಆಗುತ್ತಾನೆ. ಹೆರಿಗೆ ನೋವನ್ನು ಅನುಭವಿಸಿದ ನಂತರವೂ ಒಬ್ಬ ತಾಯಿ ತನ್ನ ಮಕ್ಕಳನ್ನು ಎಷ್ಟು ಆಳವಾದ ಪ್ರೀತಿಯಿಂದ ಸಲಹುತ್ತಾಳೆ ಎನ್ನುವುದನ್ನು ನೋಡಿರಿ. ಆದ್ದರಿಂದಲೇ *ಇಷ್ಟೋಭೃತ್ತಿ* ಮನುಷ್ಯನಲ್ಲಿ ಅವನ ಭಗವಂತನತ್ತ ಭಕ್ತಿಯನ್ನು ವಾಸ್ತವಿಕವಾಗಿ ಪೋಷಿಸುತ್ತದೆ ಎಂದು ನಾನು ನಂಬುತ್ತೇನೆ. ಭಗವಂತನು ಕೇಂದ್ರಬಿಂದುವಾಗುತ್ತಾನೆ. ಮತ್ತು ಮನುಷ್ಯನು ಕೈಗೊಳ್ಳುವ ಎಲ್ಲವನ್ನೂ ತನ್ನೊಂದಿಗೆ ಸ್ಪಂದಿಸುವಂತೆ ಅಪ್ರಜ್ಞಾತವಾಗಿ ಉತ್ತೇಜಿಸಿ, ಸಂಪೂರ್ಣ ಸಮನ್ವಯತೆಯನ್ನು ಕಲ್ಪಿಸುತ್ತಾನೆ . ೧ ಎನ್ನುವ ಸಂಖ್ಯೆಯ ನಂತರ, ನೀವು ಏನು ಕೂಡಿಸಿದರೂ ಸಹ ಅದು ಸೊನ್ನೆಗಳೇ ಆಗಿರಬಹುದು.. ಅದರ ಮೌಲ್ಯ ಹೆಚ್ಚುತ್ತದೆ."

"ಆದರೆ ಥಾಕೂರ್, ಇಂತಹ ಪದ್ಧತಿಯನ್ನು ದಿನವೂ ನಿರ್ವಹಿಸುವುದು ಹೇಗೆ ತಾನೇ ಸಾಧ್ಯ" ಎಂದ ತರುಣಿಯ ಧ್ವನಿಯಲ್ಲಿ ಅಪನಂಬಿಕೆ ತುಂಬಿತ್ತು. "ಒಂದು ದಿನವಾದ ನಂತರ ಮತ್ತೊಂದು, ಒಂದು ತಿಂಗಳ ನಂತರ ಮತ್ತೊಂದು, ಒಂದು ವರ್ಷದ ನಂತರ ಮತ್ತೊಂದು ಎಂದು ಮುಂದುವರೆಸಲು ಸಾಧ್ಯವೇ?"

ಥಾಕೂರ್ ಮುಗುಳುನಕ್ಕರು. "ನೀವು ನಿಮ್ಮ ದೈನಂದಿನ ಆಹಾರದ ಬಗ್ಗೆ ತಳೆದಿರುವ ಒಂದೇ ನಿಲುವಿನಿಂದ ಆರಂಭಿಸಿದಲ್ಲಿ, ಇದು ಸಾದ್ಯ. ಸಾಧಾರಣವಾಗಿ ನಮ್ಮ ಆಹಾರ ಒಂದು ತಿಂಗಳಲ್ಲಿ, ಒಂದು ವರ್ಷದಲ್ಲಿ ಅಥವಾ ಮುಂಬರುವ ಹತ್ತು ವರ್ಷಗಳಲ್ಲಿ ಎಲ್ಲಿಂದ ಬರುತ್ತದೆ ಎನ್ನುವುದು ನಮಗೆ ಗೊತ್ತಿರುವುದಿಲ್ಲ. ಆದರೆ, ಇದೇ ಕಾರಣದಿಂದ ನಾವು ತಿನ್ನುವುದನ್ನು ನಿಲ್ಲಿಸುವುದಿಲ್ಲ. ನೀವು ಇದನ್ನು ಈಗ ಆರಂಭಿಸಿರಿ, ಸಾಕು. ನಂತರ, ಇದನ್ನು ಪ್ರತಿ ದಿನ ಹೇಗೆ ಕೈಗೊಳ್ಳುತ್ತೀರಿ ಎಂದು ಆಯೋಜಿಸಿರಿ. ಒಂದು ಮಾತು ನೆನಪಿನಲ್ಲಿಡಿ. ಮುಖ್ಯ ವಿಷಯವೆಂದರೆ ಭಗವಂತನಿಗಾಗಿ ಬೇಕಾಗಿರುವುದು ಆಹಾರವಲ್ಲ ಅಥವಾ ಹಣವಲ್ಲ. ಇದು ಮೊಬಲಗು ಸಹ ಅಲ್ಲ. ಅತ್ಯವಶ್ಯ ಅಂಶವೆಂದರೆ ಪ್ರೇಮದ ಒಂದು ಹಂಬಲ ಮತ್ತು ಆ ಪ್ರೇಮದಿಂದ ಅವನಿಗೆ ಕೊಡುವುದರ ವಾಸ್ತವಿಕ ಸ್ವರೂಪ. ಅಂದರೆ, ಅವನಿಗೆ ಕೊಡದೇ ಇದ್ದಲ್ಲಿ...... ಅವನಿಗೆ ಉಣಿಸದೇ ಇದ್ದಲ್ಲಿ,...ನಮಗೆ ಸಂತೋಷವಾಗುವುದಿಲ್ಲ. ಇದರಿಂದ ಅಂತರ್ಗತವಾಗುವ ಶಕ್ತಿಯು ವ್ಯಕ್ತಿಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಶಕ್ತನನ್ನಾಗಿಸುತ್ತದೆ. ಈ ಕಾರಣದಿಂದಲೇ ನಾನು ಇದನ್ನು ಅಸ್ತಿತ್ವದ ಮೂಲ ಚಾಲನಾ ಶಕ್ತಿಯೆಂದು ಕರೆಯುತ್ತೇನೆ."



"ಥಾಕೂರ್", ಎಂದು ಹಿರಿಯ ವ್ಯಕ್ತಿ ಆರಂಭಿಸಿ, "ಪುಣ್ಯ ಆರಾಧನೆಯ ಮೂಲಕ ಔನ್ನತ್ಯಕ್ಕೆ ಏರುವುದು ಎಂದಿರಿ. ಇದರ ಅರ್ಥವೇನು?"

ಥಾಕೂರ್ ಉತ್ತರವಾಗಿ, "ಸೂಕ್ತ ಧ್ಯಾನವು ಒಳ ರೋಮಾಂಚನವನ್ನು ಪ್ರಚೋದಿಸಿ, ಅಸ್ತಿತ್ವದ ಬಗ್ಗೆ ಮನುಷ್ಯನ ಸ್ವಪ್ರಜ್ಞೆಯನ್ನು ವಿಸ್ತರಿಸುತ್ತದೆ ಎಂದು ನಾನು ನಂಬುತ್ತೇನೆ," ಎಂದರು.

"ಸೂಕ್ತ ಧ್ಯಾನವೆಂದರೇನು?"

ಥಾಕೂರ್ ಸ್ವಲ್ಪ ಸಮಯ ಆಲೋಚನೆ ಮಾಡಿ, ನಂತರ ಹೇಳಿದರು. "ಒಂದು ನಿರ್ದಿಷ್ಟ ಪದದ ಸತತ ಪುನರುಚ್ಚರಣೆಯು ನಮ್ಮ ಕೇಂದ್ರ ನರವ್ಯೂಹದ ಮೇಲೆ ಪ್ರಭಾವ ಬೀರಿ ಮಿದುಳಿನ ಕೋಶಗಳನ್ನು ಇನ್ನೂ ಹೆಚ್ಚಾಗಿ ಹಿಗ್ಗಿಸುತ್ತವೆ. ಈ ರೀತಿ, ನಮ್ಮ ಗ್ರಹಣಶಕ್ತಿಯನ್ನು ಮೀರಿದ ಪ್ರತಿಕ್ರಿಯೆಯು ಕ್ರಮೇಣ ಅರ್ಥವಾಗುತ್ತದೆ. ಇನ್ನೂ ಹೇಳಬೇಕೆಂದಲ್ಲಿ, ಮತ್ತಷ್ಟು ಸೂಕ್ಷ್ಮಗೊಂಡ ಆ ಮಿದುಳಿನ ಕೋಶಗಳು ಹೊಂದಾಣಿಕೆಯನ್ನು ಮಾಡಲು ತೊಡಗುತ್ತವೆ; ಆದ್ದರಿಂದ ಅವು ಉತ್ತಮ ಪ್ರತಿಕ್ರಿಯೆ ಮಾತ್ರವಲ್ಲದೆ, ಅದನ್ನು ಉಳಿಸಿಕೊಳ್ಳುತ್ತವೆ... ಅವನ ಬಗ್ಗೆ ಆಳವಾಗಿ ಚಿಂತಿಸಿದಲ್ಲಿ ಅವನ ಆಕಾಂಕ್ಷೆಗಳು, ಪರಿಕಲ್ಪನೆಗಳು ಮತ್ತು ನೀತಿಯನ್ನು ನಿಸ್ಸಂದೇಹವಾಗಿ ಗ್ರಹಿಸುತ್ತವೆ."

"ಓಹ್ ಥಾಕೂರ್, ನನಗೇನೂ ಅರ್ಥವೇ ಆಗುತ್ತಿಲ್ಲ" ಎಂದು ದಿಗ್ಭ್ರಾಂತಿಯಿಂದ ಉದ್ಗರಿಸಿದ ತರುಣಿಯು, "ಇದು ನಮ್ಮ ಆಲೋಚನಾ ವಿಧಾನಕ್ಕೆ ಸಂಪೂರ್ಣವಾಗಿ ಪರಕೀಯವಾಗಿದೆ" ಎಂದಳು.

ಥಾಕೂರ್ ತಾಳ್ಮೆಯಿಂದ ಮುಂದುವರೆಸಿದರು: "ನಾವು ನೋಡುವ, ಕೇಳುವ ಮತ್ತು ಯೋಚಿಸುವ ಪ್ರತಿಯೊಂದು ನಮ್ಮ ಮಿದುಳಿನ ಮೇಲೆ ಪ್ರಭಾವ ಬೀರುತ್ತದೆ. ಇದಲ್ಲದೇ ನಮ್ಮಲ್ಲಿ ಕೌಶಲ ಮತ್ತು ಪ್ರವೃತ್ತಿಗಳು ಅಂತರ್ಗತವಾಗಿವೆ. ಇವುಗಳು ನಮ್ಮ ಸುತ್ತಮುತ್ತಲಿನ ಸನ್ನಿವೇಶಗಳೊಂದಿಗೆ ಪರಸ್ಪರ ವರ್ತಿಸಿದಾಗ ನಮ್ಮ ಮನಸ್ಸಿನ ಮೇಲೆ ಆಗುವ ಪರಿಣಾಮಗಳು ಮತ್ತು ಮಾನಸಿಕ ಸಂಕೀರ್ಣಗಳು ಪ್ರತಿಕ್ರಿಯೆಗಳನ್ನು ವ್ಯಕ್ತಿಪಡಿಸುತ್ತವೆ ಮತ್ತು ಈ ಪ್ರತಿಕ್ರಿಯೆಗಳನ್ನು ನಮ್ಮ ಮಿದುಗಳಿನ ವಿಭಿನ್ನ ಭಾಗಗಳಲ್ಲಿ ಸಂಗ್ರಹಿಸಿ ಇಡುತ್ತವೆ. ಈ ರೀತಿ ಸನ್ನಿವೇಶದ ಪರಿಣಾಮವನ್ನು ನಮ್ಮ ದೇಹ, ನಮ್ಮ ಅರಿವು ಮತ್ತು ಮಿದುಳಿನ ಕೋಶಗಳ ನಿರ್ದಿಷ್ಟ ಸ್ಥಿತಿಗೆ ಅನುಸಾರವಾಗಿ ಗ್ರಹಿಸುತ್ತದೆ. ಈ ನಿರ್ದಿಷ್ಟ ಸ್ಥಿತಿ ಉತ್ತಮವಾಗಿದ್ದಷ್ಟೂ ಸನ್ನಿವೇಶ ಪ್ರಭಾವವನ್ನು ಕುರಿತ ನಮ್ಮ ಅರಿವು ಇನ್ನೂ ಸೂಕ್ಷ್ಮಗೊಳ್ಳುತ್ತದೆ. ಮಿಗಿಲಾಗಿ, ನಾವು ಏನು ಮಾಡಿದರೂ ಅಥವಾ ಮಾಡಲು ಬಯಸಿದರೂ ಇದರ ಸಂದೇಶವು ಮಿದುಳನ್ನು ತಲುಪಿದಾಗ, ಈಗಾಗಲೇ ಮನದಲ್ಲಿ ಬೇರೂರಿರುವ ಇತರ ಎಲ್ಲಾ ಭಾವನೆಗಳ ಜೊತೆ ಇದನ್ನು ಪರಿಗಣಿಸಲಾಗುತ್ತದೆ. ಈ ಪರಿಗಣನೆಯ ನಂತರ, ನಮ್ಮ ನರಗಳು

ಮತ್ತು ಸ್ನಾಯುಗಳಿಗೆ ಸೂಕ್ತವಾಗಿ ಆದೇಶ ನೀಡಲಾಗುತ್ತದೆ. ಆದ್ದರಿಂದಲೇ ಮಿದುಳಿನ ಕೋಶಗಳ ಸೂಕ್ಷ್ಮತೆ ಮತ್ತು ಗ್ರಹಣಶಕ್ತಿಯನ್ನು ಅಭಿವೃದ್ಧಿಪಡಿಸಿದಷ್ಟೂ ಬಾಹ್ಯ ಜಗತ್ತನ್ನು ಅರಿತು ಅನುಭವಿಸುವುದು ಮತ್ತು ನಮ್ಮ ಆಂತರಿಕ ಪ್ರಭಾವಗಳನ್ನು ಅರಿತುಕೊಳ್ಳುವುದು ಇನ್ನೂ ಆಳ ಮತ್ತು ಸೂಕ್ಷ್ಮವಾಗುತ್ತದೆ. ಅನಂತರ ಬಾಹ್ಯ ಜಗತ್ತು ಮತ್ತು ನಮ್ಮ ಆಂತರಿಕ ಅಗತ್ಯಗಳ ನಡುವೆ ಸುಸಂಬಂಧ ಮತ್ತು ಹೊಂದಾಣಿಕೆಯನ್ನು ಮಾಡಿಕೊಂಡಾಗ, ನಾವು ತದನುಸಾರವಾಗಿ ತಿಳುವಳಿಕೆ ಮತ್ತು ಪರಿಜ್ಞಾನವನ್ನು ಗಳಿಸುತ್ತೇವೆ. ಕಡೇ ಪಕ್ಷ, ನಾನು ಅರ್ಥಮಾಡಿಕೊಂಡಿರುವುದು ಇದೇ."

"ಯಾರಾದರೂ ಯಾವುದೇ ಹೆಸರನ್ನು ಪುನರುಚ್ಚರಿಸುತ್ತಾ, ಈ ಸೂಕ್ಷ್ಮತೆಯನ್ನು ಸಾಧಿಸಲು ಸಾಧ್ಯವೇ ಥಾಕೂರ್?"

"ಹೌದೆಂದು ನಾನು ಭಾವಿಸುತ್ತೇನೆ," ಎಂದ ಥಾಕೂರ್, "ಯಾವುದೇ ಹೆಸರು ಸ್ವಲ್ಪ ಪ್ರಭಾವ ಹೊಂದಿರುತ್ತದೆಯಾದರೂ, ಹ್ರಿಂಗ್, ಕ್ಲಿಂಗ್, ಓಂ, ಹ್ರೊಂಗ್, ಭ್ರೋಂಗ್ ಮುಂತಾದವು. ಅಂದರೆ ಸಕಾರಾತ್ಮಕ ಶಕ್ತಿ ಹೊಂದಿರುವ ಹೆಸರುಗಳು ಅತ್ಯಧಿಕ ಕಂಪನ ಬೀರುತ್ತವೆ ಎಂದು ನಾನು ನಂಬುತ್ತೇನೆ. ಆದರೆ ಪುನರ್ ಉಚ್ಚಾರಣೆಯನ್ನು ಆದೇಶಾನುಸಾರವಾಗಿ, ಸೂಕ್ತವಾಗಿ ಮತ್ತು ಗುರುವಿನ ಮಾರ್ಗದರ್ಶನದಡಿ ಕೈಗೊಂಡಲ್ಲಿ ಮಾತ್ರ ಇದು ಸಾಧ್ಯ."

"ಥಾಕೂರ್, ಇದು ನಿಜಕ್ಕೂ ಬಹಳ ಕ್ಲಿಷ್ಟವಾಗುತ್ತಿದೆ. ಅಧಿಕ ಸಕಾರಾತ್ಮಕ ಕಂಪನವನ್ನು ಉತ್ಪತ್ತಿ ಮಾಡುವ ಶಬ್ದಗಳೆಂದರೇನು?"

ಥಾಕೂರ್ ನಿಧಾನವಾಗಿ ವಿವರಿಸುತ್ತಾ "ನಮ್ಮ ದೈಹಿಕ ವ್ಯವಸ್ಥೆಯಲ್ಲಿ ಜರುಗುವ ವಿಭಿನ್ನ ಕ್ರಿಯೆಗಳು ಮತ್ತು ಪ್ರತಿಕ್ರಿಯೆಗಳಿಂದ ಈ ಸೂಕ್ಷ್ಮಕಂಪನಗಳು ಉತ್ಪತ್ತಿಯಾಗುತ್ತವೆ ಎಂದು ನಾನು ನಂಬುತ್ತೇನೆ. ಮಿದುಳಿನ ಕೋಶಗಳನ್ನು ಒಂದು ನಿರ್ದಿಷ್ಟ ವಿಧಾನದಲ್ಲಿ ಉತ್ತೇಜಿಸಿದಲ್ಲಿ ಈ ಕಂಪನಗಳು ಹೊರಹೊಮ್ಮಿಸುವ ಶಬ್ದಗಳು ಮನಸ್ಸಿನೊಳಗೆ ಪ್ರತಿಧ್ವನಿಸುತ್ತವೆ. ಇಂತಹ ಶಬ್ದಗಳು ಹಂತಹಂತವಾಗಿ ಸುಪ್ತ ಮನಸ್ಸಿನಲ್ಲಿ ಉತ್ಪತ್ತಿಯಾಗಿ ಸ್ಥೂಲದಿಂದ ಸೂಕ್ಷ್ಮದತ್ತ ರೂಪುಗೊಳ್ಳುತ್ತವೆ. (ಶಬ್ದದ) ಪುನರುಚ್ಚರಣೆಯಿಂದಾಗಿ ಪ್ರಚೋದಿತವಾಗುವ ಮಾನಸಿಕ ಉತ್ತೇಜನದ ಮೂಲಕ ಮಿದುಳಿನ ಕೋಶಗಳು ಚುರುಕುಗೊಳ್ಳುತ್ತವೆ ಮತ್ತು ಅವುಗಳಲ್ಲಿ ದಹನಶಕ್ತಿ ಜರುಗುತ್ತವೆ. ತತ್ಪರಿಣಾಮವಾಗಿ ಮಿದುಳಿನ ಕೋಶಗಳಲ್ಲಿ ಸಂಗ್ರಹಿತವಾಗುವ ಪ್ರಭಾವಗಳು ಬಿಡುಗಡೆಯಾಗುತ್ತವೆ. ಮತ್ತು ವಿಭಿನ್ನ ಸ್ವರೂಪಗಳಾಗಿ ಸ್ವಪ್ರಜ್ಞೆಯಲ್ಲಿ ಬಣ್ಣಗಳು, ಸತ್ವಗಳು, ಶಬ್ದಗಳು ಇತ್ಯಾದಿಯಾಗಿ ಕಾಣಿಸಿಕೊಳ್ಳುತ್ತವೆ. ಇದಲ್ಲದೆ, ಸೂಕ್ತ ಧ್ಯಾನವು ಶಾಖವನ್ನು ಉತ್ಪತ್ತಿಮಾಡುವುದರಿಂದ ಇದನ್ನು ಭಾರತದಲ್ಲಿ ತಪಸ್ಯ (ಶಾಖ–ಕಾರ್ಯವಿಧಾನ) ಎಂದು ಕರೆಯುತ್ತಾರೆ. ಒಂದು ಬಾಹ್ಯ ಮೂಲದಿಂದ ಹೊಮ್ಮುವ ಶಾಖವು



ಮಿದುಳಿನ ಕೋಶಗಳನ್ನು ಉತ್ತೇಜಿಸುವುದರಿಂದ ನಮ್ಮ ದೇಹವು ಬೆಚ್ಚಗಾಗುತ್ತದೆ; ಇದೇ ರೀತಿ, ಈ ಆಂತರಿಕ ಒತ್ತಡವು ಮಿದುಳಿನ ಕೋಶಗಳ ಮೇಲೆ ಬೀರುವ ಒತ್ತಡವು ಚುರುಕುತನವನ್ನು ಕಲ್ಪಿಸಿ, ಶಾಖವನ್ನು ಉತ್ಪತ್ತಿಮಾಡುತ್ತದೆ."

"ಸೂಕ್ತ ಧ್ಯಾನವು ಮಿದುಳಿನ ಕೋಶಗಳಲ್ಲಿ ಹೇಗೆ ಶಾಖೋತ್ಪತ್ತಿಯನ್ನು ಮಾಡುತ್ತದೆ? ಇದರ ಅರ್ಥವೇನು?"

ಥಾಕೂರ್ ಉತ್ತರಿಸುತ್ತಾ, "ನೀವು ಸಕ್ಕರೆ ಹರಳನ್ನು ನಿಮ್ಮ ಹಲ್ಲಿನ ಮಧ್ಯದಲ್ಲಿ ಕಚ್ಚಿದಾಗ, ಕೆಲವೊಮ್ಮೆ ಒಂದು ಕಿಡಿ ಉತ್ಪತ್ತಿಯಾಗುವುದನ್ನು ಅನುಭವಿಸುತ್ತೀರಿ. ಸೂಕ್ತ ಧ್ಯಾನದಿಂದ ಕಲ್ಪಿತವಾಗುವ ಒತ್ತಡವು ಕೋಶಗಳ ನಡುವೆ ಪರಸ್ಪರವಾಗಿ ಇದೇ ರೀತಿ ದಹನಶಕ್ತಿಯನ್ನು ಉಂಟುಮಾಡುತ್ತದೆ. ವಿಭಿನ್ನ ಬಣ್ಣಗಳು ಮೂಡಿಬರುತ್ತವೆ. ಕೆಲವೊಮ್ಮೆ ಅವು ಕೆಂಪಾಗಿರುತ್ತವೆ, ಕೆಲವೊಮ್ಮೆ ಹಳದಿ ಮತ್ತು ಇನ್ನೂ ಕೆಲವು ಸಲ ಹಸಿರು ಪ್ರಮುಖವಾಗಿರುತ್ತದೆ. ಈ ಆಂತರಿಕ ಒತ್ತಡ ಅಧಿಕಗೊಂಡಾಗ, ಕೋಶಗಳು ತಮ್ಮ ಸುಪ್ತ ಮತ್ತು ಸ್ಥಾಯಿ ಸ್ಥಿತಿಯಿಂದ ಬಿಡುಗಡೆಯಾಗಿ ಕ್ರಮೇಣ ಸ್ಥಿತಿಸ್ಥಾಪಕತ್ವದಲ್ಲಿ ವೃದ್ಧಿಯಾಗುತ್ತವೆ. ಈ ಪರಿವರ್ತನೆಯನ್ನು ಆಂತರಿಕ ನರ ವ್ಯವಸ್ಥೆಯು ಒಂದು ದಿವ್ಯ ದೃಶ್ಯವಾಗಿ, ಒಂದು ಬಣ್ಣವಾಗಿ ಅಥವಾ ಒಂದು ತೇಜಸ್ಸಾಗಿ ಪ್ರತಿಬಿಂಬಿಸುತ್ತದೆ. ಮುಂದುವರೆದಂತೆ ಈ ಪ್ರಜ್ವಲ ಪ್ರಚೋದನೆಯು ಶ್ರವಣ ನರಕೇಂದ್ರವನ್ನು ಉತ್ತೇಜಿಸಿ, ಅನುಗುಣವಾಗಿ ಒಂದು ಶಬ್ದವನ್ನು ಉತ್ಪತ್ತಿಮಾಡುತ್ತದೆ. ಈ ರೀತಿ, ಸೃಜನಾತ್ಮಕ ಶಕ್ತಿಯುಳ್ಳ ಒಂದು ಪದದ ಪುನರುಚ್ಚರಣೆಯ ಪರಿಣಾಮವಾಗಿ ಶ್ರವಣ ಕೇಂದ್ರವು ಪ್ರಚೋದಿತವಾಗುವುದರಿಂದ ಯಾವುದೇ ಬಾಹ್ಯ ಪ್ರೋತ್ಸಾಹಕವಿಲ್ಲದೇ ಆಂತರಿಕವಾಗಿ ಒಳಧ್ವನಿ ಕೇಳಿಬರುತ್ತದೆ."

ಹಿರಿಯ ಭೇಟಿಗರು ಆಸಕ್ತಿಯನ್ನು ಪ್ರಕಟಿಸಿ, "ಥಾಕೂರ್, ಇದು ಬಹಳ ಕುತೂಹಲಕಾರಿಯಾಗಿದೆಯಾದರೂ, ನಮ್ಮ ದೇವತಾಶಾಸ್ತ್ರಜ್ಞರ ಪೈಕಿ ಅನೇಕರು ಇದನ್ನು ಮೆಚ್ಚುವುದಿಲ್ಲವೆಂದು ನನಗೆ ತೋರುತ್ತದೆ" ಎಂದರು.

"ನನಗೆ ದೇವತಾಶಾಸ್ತ್ರ ಅರ್ಥವಾಗುವುದಿಲ್ಲ," ಎಂದ ಥಾಕೂರ್, "ಆದರೆ ನನಗೆ ದೇವವಾಕ್ಕುಗಳು ಅಂದರೆ ಅಸ್ತಿತ್ವವನ್ನು ಕೊಡುವಂತಹ ಜೀವನದ ಪ್ರಾರ್ಥನಾ ಹಂಬಲ ಅರ್ಥವಾಗುತ್ತದೆ. ಇದು ವಿಭಿನ್ನ ವಿಧಾನಗಳು ಮತ್ತು ಕ್ರಿಯೆಗಳು ಹಾಗೂ ಹಲವಾರು ವಿಶೇಷಣಗಳಾಗಿ ಎಲ್ಲದರಲ್ಲಿಯೂ ಅಂತರ್ಗತವಾಗಿರುವ ಉತ್ತೇಜಕ ಶಕ್ತಿಯಾಗಿದೆ. ಮಿಗಿಲಾಗಿ ಜೀವ ತರುವುದು ಎಂದರೆ ಆ ದೇವವಾಕ್ಕಿನ ಅಥವಾ ಉತ್ತೇಜಕದ ಅಥವಾ ಕಂಪನದ ಪ್ರತಿ ಕೋಶದ ಅಂತರಾತ್ಮವನ್ನು ಅಭಿಷಿಕ್ತಗೊಳಿಸುವುದು ಎಂದೇ ನಾನು ಭಾವಿಸುತ್ತೇನೆ."

"ಉತ್ತೇಜಕವೇ, ಥಾಕೂರ್?" ಎಂದು ಭಾರತೀಯ ಕೇಳುಗರೊಬ್ಬರು ಮಧ್ಯೆ ಮಾತನಾಡಿ, "ಆ ಪದದ ಬಳಕೆಯು ಒಬ್ಬ ಆಧುನಿಕ ಯುವ ಸೋವಿಯತ್

ಬರಹಗಾರರು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಬಹಳ ವ್ಯತ್ಯಾಸವಾಗಿಲ್ಲ. ವಿ. ಟೆಂಡೆಯಕೋವ್ ಎನ್ನುವವರು ಹೇಳಿರುವುದೇನೆಂದರೆ, ಪ್ರತಿಮೆಗಳಲ್ಲಿ ಬಿತ್ತರಿಸಿರುವಂತೆ ದೇವರು ಇರುತ್ತಾನೆ ಎಂದು ನಾವು ಊಹಿಸುವುದಿಲ್ಲ ಎಂದು. ಅವರ ಪ್ರಕಾರ ದೇವರು ಒಂದು ಬಗೆಯ ಆಧ್ಯಾತ್ಮಿಕ ತತ್ವವಾಗಿದ್ದು, ಆಕಾಶಗಂಗೆಗಳು, ತಾರಾಗಣಗಳು, ಗ್ರಹಗಳು ಮತ್ತು ಅತ್ಯಂತ ಪ್ರಾಥಮಿಕ ಕೋಶಗಳಿಂದ ಆರಂಭಿಸಿ ಮಾವನವನರೆಗೆ ಈ ಗ್ರಹಗಳ ಮೇಲೆ ಜೀವಿಸಿ ಸಂತಾನೋತ್ಪತ್ತಿ ಮಾಡುವ ಎಲ್ಲದಕ್ಕೂ ಉತ್ತೇಜಕವಾಗಿದ್ದಾನೆ. ಇದು ನಿಮ್ಮ ವರ್ಣನೆಗೆ ಬಹಳ ದೂರವಾಗಿಲ್ಲ, ಅಲ್ಲವೇ?"

ಅಮೆರಿಕನ್ ಯುವತಿಯು ಆಗ್ರಹಪಡಿಸುವಂತೆ ಮಾತನಾಡಿ "ಥಾಕೂರ್, ನೀವು ಇದುವರೆಗೂ ಹೇಳಿರುವುದೆಲ್ಲವೂ ಯೋಗ ರೀತಿಯಲ್ಲೇ ಇದೆ. ಇದು ನಮ್ಮ ಪಾಶ್ಚಿಮಾತ್ಯ ಕ್ರಿಸ್ತ ಸಂಪ್ರದಾಯದ ಅಂಶವಲ್ಲ. ಅಡ್ಡಗಾಲಿನಲ್ಲಿ ಕುಳಿತು ಕಣ್ಣು ಮುಚ್ಚಿಕೊಳ್ಳುವುದು ಭಾರತದ ವೈಶಿಷ್ಟ್ಯವಲ್ಲವೇ?"

ಥಾಕೂರ್ ಇದನ್ನು ಒಪ್ಪಲಿಲ್ಲ. "ಆದರೆ ನಾನು ಅರಿತಿರುವಂತೆ 'ಯೋಗ' ಎನ್ನುವ ಪದವು ಸಂಸ್ಕೃತ ಮೂಲದ 'ಯುಜ್' ಅಂದರೆ ಕೂಡು ಅಥವಾ ವಿಲೀನಗೊಳ್ಳು ಎನ್ನುವುದರಿಂದ ಉತ್ಪತ್ತಿಯಾಗಿದೆ. ಭಗವಂತನತ್ತ ಅನುರಾಗವು ಜ್ಞಾನ ಮತ್ತು ಶಕ್ತಿಯನ್ನು ಕೊಡುತ್ತದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದಲೇ ಏಸು ಹೇಳಿದನು.... 'ನನ್ನ ನೊಗವು ಸುಲಭವಾಗಿದೆ ಮತ್ತು ನನ್ನ ಹೊರೆ ಹಗುರವಾಗಿದೆ' ಎಂದು. ನನ್ನ ಪ್ರಕಾರ ಇದರರ್ಥವೆಂದರೆ... "ನನ್ನ ಯೋಗ ಅಥವಾ ಅನುರಾಗವು ನಿನ್ನಲ್ಲಿ ನೆಲೆಸಲಿ ಮತ್ತು ಇಂತಹ ಭಕ್ತಿಯು ನಿನ್ನ ಹೊರೆಯನ್ನು ಹಗುರಗೊಳಿಸಲಿ.' ಚುಟುಕಾಗಿ ಹೇಳುವುದಾದರೆ, ನಾನು ಯಾವುದೇ ವಸ್ತುವಿನಲ್ಲಿ ಅನುರಾಗ ಅಥವಾ ಆಸಕ್ತಿ ಬೆಳೆಸಿದಲ್ಲಿ; ಅದರ ಬಗ್ಗೆ ನಾನು ಆಲೋಚಿಸಿದಲ್ಲಿ, ವಿಶ್ಲೇಷಿಸಿದಲ್ಲಿ ಮತ್ತು ಪುನಃ ಸಂಯೋಜಿಸಿದಲ್ಲಿ ಅದನ್ನು ಕುರಿತ ಜ್ಞಾನವು ವೃದ್ಧಿಯಾಗುತ್ತದೆ. ಅಡ್ಡಗಾಲಿನಲ್ಲಿ ಕೂರುವುದು ದೇಹದ ಮೇಲು ಭಾಗದಲ್ಲಿ ರಕ್ತಸಂಚಾರವನ್ನು ಕೇಂದ್ರೀಕರಿಸುತ್ತದೆ. ಮತ್ತು ಕಣ್ಣು ಮುಚ್ಚುವುದರಿಂದ ತುಮುಲಗಳನ್ನು ಕನಿಷ್ಠಗೊಳಿಸುತ್ತದೆ ಎಂದು ನಾನು ನಂಬುತ್ತೇನೆ."

"ಆದರೆ ಮನಸ್ಸನ್ನು ಕಣ್ಣುಗಳ ಮಧ್ಯೆ ಮೂಗಿನ ತುದಿಯಲ್ಲಿ ಕೇಂದ್ರೀಕರಿಸಬೇಕೆಂದು ಯಾಕೆ ಸಲಹೆ ಮಾಡುತ್ತಾರೆ? ಅನೇಕ ಯೋಗಿಗಳು ಹೇಳಿಕೊಳ್ಳುವಂತೆ ಮೂರನೆಯ ಕಣ್ಣು ಇದೆಯೆಂದು ನೀವು ನಂಬುತ್ತೀರಾ?"

ಥಾಕೂರ್ ಉತ್ತರ ನೀಡಿ, "ಒಬ್ಬ ವ್ಯಕ್ತಿಯು ಆಳ ಚಿಂತನೆಯಲ್ಲಿದ್ದಾಗ ಅವನು ಅಭ್ಯಾಸಬಲವಾಗಿ ತನ್ನ ಬೆರಳನ್ನು ಅಲ್ಲಿ ಇಟ್ಟುಕೊಳ್ಳುತ್ತಾನೆ. ಸೂಕ್ತ ಮಾರ್ಗದರ್ಶನದೊಂದಿಗೆ, ಸರಿಯಾದ ಧ್ಯಾನಪದ್ಧತಿಯನ್ನು ಅನುಸರಿಸಿದಾಗ



ಮಿದುಳಿನ ಆಧಾರಭಾಗವು ಉತ್ತೇಜಿತಗೊಳ್ಳುವುದರಿಂದ ಮನಸ್ಸನ್ನು ಮೂರನೆಯ ಕಣ್ಣು ಅಥವಾ ಮೂರನೆಯ ಕುಕ್ಷಿಯ ಹಿಂದುಗಡೆ ಇರುವ ಒಂದು ಚಿಕ್ಕ ಗ್ರಂಥಿಯ ಮೇಲೆ ಕೇಂದ್ರೀಕರಿಸಬೇಕೆಂದು ಶಿಫಾರಸು ಮಾಡಲಾಗುತ್ತದೆ. ಈ ಉತ್ತೇಜನವು ಮೂರನೆಯ ಕುಕ್ಷಿಯ ಮೇಲೆ ಪ್ರಭಾವ ಬೀರುವುದರಿಂದ ಮನದಾಳದಲ್ಲಿ ಅದುಮಿಟ್ಟ ಹಲವಾರು ಭಾವನೆಗಳು ಜಾಗೃತ ಮನಸ್ಸಿನೊಳಗೆ ಮೇಲೇಳುತ್ತವೆ. ಆಗ ಕೆಲಸ ಮತ್ತು ಚಟುವಟಿಕೆಯ ಮೂಲಕ, ಅವುಗಳು ಸೂಕ್ತ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ," ಎಂದರು.

"ಕೆಲಸದ ಮೂಲಕವೇ?" ಎಂದು ಕೇಳಿದಾಗ ಯುವತಿಯ ಧ್ವನಿಯಲ್ಲಿ ನಿರಾಸೆ ತುಂಬಿತ್ತು. "ಯಾರಾದರೂ ಬಹಳ ಕೆಲಸ ಮಾಡಿದರೂ ಧ್ಯಾನ ಮಾಡುವುದಿಲ್ಲವೆಂದಲ್ಲಿ ಏನಾಗುತ್ತದೆ?"

"ಆಗ ಆಂತರಿಕ ಪ್ರಜ್ಞೆ ಮತ್ತು ಅಪ್ರಜ್ಞಾತಗಳಲ್ಲಿ ಪರಿಹಾರವಾಗದಂತಹ ಆಲೋಚನೆಗಳು ಮತ್ತು ಅನಿಸಿಕೆಗಳನ್ನು ಗುರುತಿಸಿ, ಅವುಗಳನ್ನು ಹೊಂದಾಣಿಸಿಕೊಳ್ಳುವುದು ಕಷ್ಟವಾಗುತ್ತದೆ. ಈ ಕಾರಣದಿಂದಾಗಿಯೇ ಇಂಗ್ಲಿಷಿನಲ್ಲಿ ಮೂರನೆಯ ಕುಕ್ಷಿ ಎಂದಲ್ಲಿ ಪರಮೋಚ್ಚ ಜ್ಞಾನದ ಪರಾಕಾಷ್ಠೆ ಅಥವಾ ಇಂದ್ರಿಯಗಳ ಅತಿ ಉಚ್ಚ ಸಂವೇದನೆ ಎನ್ನುವ ಅರ್ಥವಿದೆ ಎಂದು ನಾನು ಭಾವಿಸುತ್ತೇನೆ."

"ಆದರೂ ಥಾಕೂರ್ ಈ ಮಂತ್ರಗಳನ್ನು ಲಕ್ಷಾಂತರ ವರ್ಷಗಳಿಗಾಗಿ ಪುನರುಚ್ಚರಿಸುತ್ತಾ ಕಳೆದರೂ, ಇವು ಮನುಷ್ಯನನ್ನು ಪರಮೋಚ್ಚಜ್ಞಾನದ ಪರಾಕಾಷ್ಠೆಗೆ ತರುವುದಿಲ್ಲವೆಂದು ನಾನು ಕೇಳಿದ್ದೇನೆ. ಇದಲ್ಲದೆ ಏಸು ಹೇಳಿದ್ದಾನೆ... ಯೆಹೂದ್ಯೇತರರು ಮಾಡುವಂತೆ, ನಿಷ್ಫಲ ಪುನರುಚ್ಚರಣೆಯನ್ನು ಮಾಡಬೇಡ," ಎಂದು ಹಿರಿಯ ಮಹಿಳೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಥಾಕೂರ್ ಹೌದೆನ್ನುವಂತೆ ತಲೆಯಾಡಿಸಿದರು. "ಹೌದು, ಹೌದು. ಯಾಕೆಂದರೆ ನಾಮಕ್ಕೂ, ನಾಮದ ಮಹತ್ವವನ್ನು ಅರಿತವನಿಗೂ ಯಾವುದೇ ವ್ಯತ್ಯಾಸವಿಲ್ಲ. ರಾಮ, ಕೃಷ್ಣ, ಏಸು, ಬುದ್ಧ........ ನಾಮವು ಸಾಕ್ಷಾತ್ಕಾರಗೊಂಡವನು ಪೂರ್ಣತೆಯ ಪ್ರತೀಕವಾಗಿದೆ. ಅವನು ನಿಜವಾದ ಮಾಲಿಕನಾಗಿರದಿದ್ದಲ್ಲಿ, ಕೇವಲ ಪವಿತ್ರ ಹೆಸರು ಮಾತ್ರ ಫಲಪ್ರದವಾಗುವುದಿಲ್ಲ. ಆದ್ದರಿಂದಲೇ ಹೆಸರನ್ನು ಉಚ್ಚರಿಸುತ್ತಾ ಲಕ್ಷಾಂತರ ವರ್ಷಗಳು ಕಳೆದರೂ, ಸಾಕ್ಷಾತ್ಕಾರವಾಗುವುದಿಲ್ಲ. ಸಾಕ್ಷಾತ್ಕಾರಗೊಂಡ ವ್ಯಕ್ತಿತ್ವದತ್ತ ಭಕ್ತಿ ಇಲ್ಲದಿದ್ದಲ್ಲಿ ಏಸು ಎಚ್ಚರಿಸಿರುವಂತೆ ಇದು ಪೊಳ್ಳುಪದಗಳ ನಿಷ್ಫಲ ಪುನರುಚ್ಚರಣೆ ಮಾತ್ರವಾಗಿರುತ್ತದೆ. ಆದರೂ, ಇದು ಸಹ ನಿಜ : ಏಸು ಸೂಚಿಸಿದ ವಿನಾಯಿತಿಯೆಂದರೆ ಆದೇಶಾನುಸಾರದ ಸೂಕ್ತ ಉಚ್ಚಾರಣೆ. ಏಕೆಂದರೆ ಅವನು ಪ್ರಭುವಿನ ಪ್ರಾರ್ಥನೆಯಲ್ಲಿ... 'ನಿನ್ನ ನಾಮವು ಪವಿತ್ರವಾಗಿರಲಿ'... ಎಂದು

ಆರಂಭಿಸಿದ್ದಾನೆ. ನಾವು ಇದನ್ನು ಪುನರುಚ್ಚರಿಸದಿದ್ದಲ್ಲಿ, ಇದು ನಮ್ಮನ್ನು ಹೇಗೆ ಪವಿತ್ರಗೊಳಿಸಲು ಸಾಧ್ಯ?"

"ಥಾಕೂರ್", ಎಂದು ಹಿಂಜರಿಯುತ್ತಾ ಮಾತನಾಡಿದ ಯುವತಿಯು, "ಈ ಧ್ಯಾನವು ವ್ಯಕ್ತಿಯ ಮಿದುಳನ್ನು ಸಂಪೂರ್ಣವಾಗಿ ಪಲ್ಲಟಗೊಳಿಸಬಹುದು ಮತ್ತು ಇದು ಅಪಾಯಕಾರಿಯೆಂದು ಇಲ್ಲಿ ಕೆಲವು ಮಂದಿ ನನಗೆ ಹೇಳಿದ್ದಾರೆ. ನೀವು ಇದನ್ನು ಒಪ್ಪಿಕೊಳ್ಳುತ್ತೀರಾ?"

ಥಾಕೂರ್ ಮುಗುಳುನಕ್ಕರು, "ಆ ರೀತಿ ಸಂಭವಿಸಿದಲ್ಲಿ ಧ್ಯಾನವೆಂದರೇನು ಎಂದು ಆ ವ್ಯಕ್ತಿಗೆ ಗೊತ್ತಿರಲಿಲ್ಲವೆಂದು ಅರ್ಥೈಸಬಹುದು. ಚಿತ್ತೈಕಾಗ್ರತೆ ಇಲ್ಲದಿದ್ದಲ್ಲಿ, ಅಂದರೆ, ಎಲ್ಲಾ ಅನಿಸಿಕೆಗಳು, ಎಲ್ಲ ಭಾವನೆಗಳು ಮತ್ತು ಎಲ್ಲಾ ಆಲೋಚನೆಗಳನ್ನು ಒಗ್ಗೂಡಿಸಿ, ಒಂದೇ ಕೇಂದ್ರದಲ್ಲಿ ನೆಲೆಸದಿದ್ದಲ್ಲಿ, ಆಗ ಗಮನ ಸೆಟೆದುಕೊಳ್ಳುತ್ತದೆ ಮತ್ತು ಇದು ಮಿದುಳಿಗೆ ಅಪಾಯಕಾರಿಯಾಗುತ್ತದೆ. ಆದರೆ, ಕಸರತ್ತು ಸಲಕರಣೆಯಿಂದ ಸೂಕ್ತವಲ್ಲದ ವ್ಯಾಯಾಮವು ದೈಹಿಕ ಆರೋಗ್ಯಕ್ಕೆ ಸರಿಪಡಿಸಲಾದಷ್ಟು ಹಾನಿಯನ್ನು ಉಂಟುಮಾಡುತ್ತದೆ. ಇದೇ ಮಾತು ಮಾನಸಿಕ ವ್ಯಾಯಾಮಗಳಿಗೂ ಅನ್ವಯಿಸುತ್ತದೆ. ಒಂದು ವಿಷಯ ನಿಜ. ಧ್ಯಾನವನ್ನು ಗುರುವಿನ ಮಾರ್ಗದರ್ಶನದಡಿ ಸೂಕ್ತವಾಗಿ ಅನುಸರಿಸಿದಲ್ಲಿ ಇದರಿಂದ ಸರಿಸಾಟಿಯಿಲ್ಲದ ಪ್ರಯೋಜನಗಳು ಲಭಿಸುತ್ತವೆ ಎನ್ನುವದು ನಿಸ್ಸಂದೇಹ."

ತರುಣಿಗೆ ಸ್ವಲ್ಪ ಸಮಾಧಾನವಾಯಿತು. "ಈ ನಾಮವನ್ನು ಹೇಗೆ ಅರಿತುಕೊಳ್ಳುವುದು, ಥಾಕೂರ್?"

"ಪ್ರೇಮದ ಸತ್ವಪೂರ್ಣ ಕೊಂಡಿಯಾದ ಪವಿತ್ರ ಹೆಸರನ್ನು, ಇದನ್ನು ಸಾಕ್ಷಾತ್ಕಾರಗೊಳಿಸಿಕೊಂಡಿರುವ ಗುರುವಿನಿಂದ ಪಡೆಯುವುದೇ ದೀಕ್ಷೆಯಾಗಿರುತ್ತದೆ ಎಂದು ನಾನು ಅರಿತಿದ್ದೇನೆ. ಅಕ್ಷರಶಃ ಇದು 'ಆತ್ಮಪ್ರವೇಶವಾಗಿರುತ್ತದೆ'. ಆದ್ದರಿಂದ ಸಾಕ್ಷಾತ್ಕಾರ ಪಡೆದ ಗುರುವಿನಿಂದ ಲಭಿಸುವ ದೀಕ್ಷೆಯು ಭಗವಂತನ ನಾಮವನ್ನು ಅರಿಯುವ ನೊಗವಾಗಿದ್ದು, 'ಪುನರ್ಜನ್ಮ ಪಡೆಯುವ ವಿಧಾನವಾಗಿದೆ'," ಎಂದು ಥಾಕೂರ್ ನುಡಿದರು.

"ಸರಿ, ಥಾಕೂರ್, ಆದರೆ ಸಾಕ್ಷಾತ್ಕಾರ ಗಳಿಸಿರುವ ಗುರುವನ್ನು ಹೇಗೆ ಗುರುತಿಸುವುದು?"

ಆ ಹುಡುಗಿ ಪಟ್ಟುಬಿಡದೆ ಮಾತನಾಡಿದ್ದನ್ನು ಕೇಳಿ ಥಾಕೂರ್ ಮುಗುಳುನಕ್ಕರು. "ಯಾವುದೇ ಪೂರ್ವಕಲ್ಪಿತ ಮನೋಭಾವನೆಗಳಿಲ್ಲದೆ, ನಮ್ರತೆ, ವಿನಯ, ಸ್ವತಂತ್ರ ಆಲೋಚನೆಯಿಂದ ಅರಸಿದರೆ ಸಾಕು. ಪ್ರಾಮಾಣಿಕವಾಗಿ ಕರುಣೆಗಾಗಿ ಹಾತೊರೆಯುವ ಮನಸ್ಸನ್ನು ಸಹ ಹೊಂದಿರಿ. ಆದರೆ ಎಚ್ಚರಿಕೆ. ಭಗವಂತನನ್ನು ಅಹಂಕಾರದ ಒರೆಗಲ್ಲಿನಲ್ಲಿ ಪರೀಕ್ಷಿಸಬೇಡಿರಿ. ಬದಲಿಗೆ, ಟಗರಿನ ಕೊಂಬುಗಳಿಗೆ



ಛಿದ್ರವಾಗುವಂತೆ ಅವನನ್ನು ಸಾಚಾ ವಿನಮ್ರತೆಯಿಂದ ಸೀಳುಸೀಳಾಗಿ ಹರಿಯಬಹುದು."

"ಥಾಕೂರ್, ನಿಮ್ಮ ಪ್ರಕಾರ, ದಿನವೂ ಇಷ್ಟೋಬ್ರಿಟ್ಟಿ ಅಥವಾ ನೈವೇದ್ಯವನ್ನು ಸಲ್ಲಿಸುವುದರಿಂದ ದೇವರನ್ನು ಪ್ರೀತಿಸುವಂತಾಗುತ್ತದೆ ಮತ್ತು ಧ್ಯಾನವು ಪರಿಹಾರವಾಗದೆ ಮನದಾಳದಲ್ಲಿ ತುಂಬಿರುವ ಆಲೋಚನೆಗಳು ಮತ್ತು ನಿಗ್ರಹಿತ ಭಾವನೆಗಳನ್ನು ಬಿಡುಗಡೆ ಮಾಡುತ್ತದೆ. ಮತ್ತೆ ಇನ್ನೇನು ಬೇಕು?" ಎಂದ ಹಿರಿಯ ವ್ಯಕ್ತಿಯ ಧ್ವನಿಯಲ್ಲಿ ಆಸಕ್ತಿ ತುಂಬಿತ್ತು.

"ಮತ್ತೊಂದು ಮೂರನೆಯ ಮತ್ತು ಅತ್ಯಾವಶ್ಯಕ ಅಂಶವಿದೆ : ಭಗವಂತನಿಗೆ ಸೇವೆ ಸಲ್ಲಿಸಿ, ಪರಿಸರವನ್ನು ಔನ್ನತ್ಯಕ್ಕೆ ಏರಿಸುವುದು."

"ಇದು ಏಕೆ ಇಷ್ಟು ಅತ್ಯಾವಶ್ಯಕ?"

ಥಾಕೂರ್ ಉತ್ತರಿಸಿದರು: "ವಿಭಿನ್ನ ಆಲೋಚನೆಗಳು ಮತ್ತು ಭಾವನೆಗಳನ್ನು ಕಲ್ಪಿಸುವ ವಿವಿಧ ಅಂತಃಪ್ರೇರಣೆಗಳನ್ನು ಮೂಡಿಸುವುದು ಪರಿಸರಕ್ಕೆ ಸಕ್ರಿಯ ಸೇವೆ ಸಲ್ಲಿಸುವ ಮೂಲಕ ಮಾತ್ರ ಸಾಧ್ಯವೆಂದು ನಾನು ಭಾವಿಸುತ್ತೇನೆ. ಘರ್ಷಣೆಗಳು ತಲೆದೋರುತ್ತವೆ, ನಿರ್ಣಯಗಳನ್ನು ಕೈಗೊಳ್ಳಬೇಕು ಮತ್ತು ಇದರ ಮೂಲಕ, ಕಗ್ಗಂಟುಗಳನ್ನು ಬಿಡಿಸಬೇಕು. ಆಗ ನಿಮ್ಮ ಭಗವಂತನು ತನ್ನೊಳಗೆ ಎಲ್ಲರನ್ನೂ ಅಪ್ಪಿಕೊಳ್ಳುವ ರೀತಿಯಲ್ಲೇ ನೀವೂ ಸಹ ಎಲ್ಲರನ್ನೂ ಅಪ್ಪಿಕೊಂಡಾಗ, ಪರಿಜ್ಞಾನ ಮತ್ತು ಅನುಭವ ವಿಸ್ತರಿಸುತ್ತವೆ. ಆದ್ದರಿಂದಲೇ ನಿಮ್ಮ ಆರಾಧನೆಯ ಕೊನೆಯ ಸುಗಂಧವೆಂದರೆ ನಿಮ್ಮ ಪರಿಸರದಲ್ಲಿನ ಕಠಿಣತೆಗಳನ್ನು ಅರಸಿ, ಗುರುತಿಸಿ, ನಂತರ ಅವುಗಳನ್ನು ನಿವಾರಿಸುವುದು ಮತ್ತು ಪರಿಹರಿಸುವುದು. ಈ ಕಾರ್ಯವನ್ನು ನೀವು ಪ್ರೇಮ ಮತ್ತು ದಯೆಯಿಂದ ಸಂಪೂರ್ಣಗೊಳಿಸದಿದ್ದಲ್ಲಿ, ನಿಮ್ಮ ಆರಾಧನೆ ಕಿವುಡಾಗಿರುತ್ತದೆ, ನಿಸ್ತೇಜವಾಗಿರುತ್ತದೆ ಮತ್ತು ಮೂಕವಾಗಿರುತ್ತದೆ."

"ಆದರೆ ಥಾಕೂರ್", ಎಂದ ತರುಣಿಯ ಮುಖದಲ್ಲಿ ಮತ್ತೆ ನಿರಾಸೆ ಕಂಡುಬಂದಿತು, "ಒಬ್ಬ ವ್ಯಕ್ತಿಯು ಸದಾ ಬೇರೊಬ್ಬರ ಸಮಸ್ಯೆಗಳಲ್ಲಿ ಮಗ್ನನಾದಲ್ಲಿ, ಅವನ ಸ್ವಂತ ಧ್ಯಾನವು ಒಂದು ಮಟ್ಟಿಗೆ ಮೂಕ ಮತ್ತು ನಿಸ್ತೇಜವಾಗಿ... ಅವನ ಏಕಾಗ್ರತೆಯನ್ನು ನಾಶಮಾಡುತ್ತದೆಯಲ್ಲವೇ?"

ಥಾಕೂರ್ ಇದನ್ನು ಒಪ್ಪಿಕೊಳ್ಳಲಿಲ್ಲ. "ನೀವು ನಿಮ್ಮ ಪರಿಸರವನ್ನು ಅಸಡ್ಡೆಮಾಡಿದಲ್ಲಿ, ನಿಮ್ಮ ಭಕ್ತಿಯುತ ಜೀವನವು ಸಮೃದ್ಧಗೊಳ್ಳುವುದಕ್ಕೆ ಬದಲಾಗಿ, ನಿಮ್ಮ ಬಾಳನ್ನು ಬಡವಾಗಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಆದರೆ ಭಗವಂತನನ್ನು ಸಂಪನ್ನಗೊಳಿಸುವುದನ್ನು ಒಂದು ಸಂಪರ್ಕವಾಗಿಸಿಕೊಂಡು ನಿಮ್ಮ ಸುತ್ತಮುತ್ತಲಿನ ಜಗತ್ತಿನೊಂದಿಗೆ ಇನ್ನೂ ಹೆಚ್ಚುಹೆಚ್ಚಾಗಿ ಸಂಬಂಧ ಕಲ್ಪಿಸಿಕೊಂಡಲ್ಲಿ, ನಿಮಗೆ ಪ್ರಾಪ್ತವಾಗುವ ಲಾಭ ಅಪಾರವಾಗಿರುತ್ತದೆ. ಈ ವಿಧಾನವಾಗಿ ಮಾತ್ರ ನೀವು

ವಿವಿಧ ಜನರು, ಸನ್ನಿವೇಶಗಳು ಮತ್ತು ವಸ್ತುಗಳನ್ನು ಭಗವಂತನತ್ತ ಸಂಪನ್ನಗೊಳಿಸಲು ನಿಯಂತ್ರಿಸಬಹುದಾಗಿದೆ. ಮಿಗಿಲಾಗಿ ನಿಮ್ಮ ವ್ಯಕಿತ್ವ ವಿಸ್ತರಿಸುತ್ತದೆ. ಮತ್ತು ಭಗವಂತನತ್ತ ನಿಮ್ಮ ಪ್ರೇಮ ಗಹನಗೊಳ್ಳುತ್ತದೆ."

ಕ್ಷಣ ಕಾಲ ಮೌನಗೊಂಡ ಥಾಕೂರ್ ಅವರ ಕಣ್ಣುಗಳು ಶ್ರದ್ಧಾಪೂರ್ವಕವಾಗಿ ಮಿಂಚಿದವು. 'ನಾನು ಮತ್ತೊಮ್ಮೆ ಹೇಳುತ್ತೇನೆ : ದಿನನಿತ್ಯದ ನೈವೇದ್ಯವಾದ ಇಷ್ಟೋಬ್ರಿಟ್ಟಿ ಧ್ಯಾನವಾದ ಜಾವ್‌ಜೋನ್ ; ಮತ್ತು ಜಾಡ್‌ಜೊನ್ ಅಥವಾ ಪರಿಸರದತ್ತ ವಾಸ್ತವಿಕ ಸೇವೆ ಈ ಮೂರು ಪದ್ಧತಿಗಳನ್ನು ಆತ್ಮಸಾಕ್ಷಿಯಾಗಿ ಅವಿರತವಾಗಿ ಅನುಸರಿಸಿರಿ. ಇದು ಮಾತ್ರ ನಿಮ್ಮ ನಿಮ್ಮ ನೆರೆಹೊರೆಯವರು ಮತ್ತು ನಿಮ್ಮ ಭಗವಂತನ ಮಧ್ಯೆ ಯಾವುದೇ ಅಡ್ಡಗೋಡೆಗಳಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳುತ್ತದೆ. ಮತ್ತು ನಿಮ್ಮ ಭಗವಂತ, ನಿಮ್ಮ ನೆರೆಹೊರೆಯವರು ಹಾಗು ನಿಮ್ಮ ಮಧ್ಯೆ ಜೀವನವನ್ನು ಉದ್ಧರಿಸುವ ಉತ್ಸಾಹಪೂರ್ಣ ಸಾಂಗತ್ಯ ಏರ್ಪಟ್ಟಾಗ, ಪರಿಪೂರ್ಣತೆ ತಾನಾಗಿಯೇ ನಿಮ್ಮನ್ನು ಅಪ್ಪಿಕೊಳ್ಳುತ್ತದೆ. ಇದು ಖಂಡಿತ ನಿಮ್ಮ ಜನ್ಮಸಿದ್ಧ ಹಕ್ಕು ಮತ್ತು ನಿಮ್ಮ ಜೀವನದ ಧ್ಯೇಯ."

"ಥಾಕೂರ್, ಇಂತಹ ಧ್ಯೇಯವನ್ನು ಸಾಧಿಸಲು ಎಲ್ಲಾ ಯುಗಗಳಲ್ಲೂ ಯತ್ನಿಸಿ ವಿಫಲಗೊಂಡವರು ಇರುವುದರಿಂದ ಇಂತಹ ಅಭ್ಯಾಸಗಳು ಮಾತ್ರ ನನ್ನಂತಹ ಸಾಧಾರಣ ವ್ಯಕ್ತಿಯನ್ನು ಶಕ್ತಿಯುತಗೊಳಿಸಬಲ್ಲವು ಎಂದು ನಂಬಲು ಕಷ್ಟವಾಗುತ್ತಿದೆ," ಎಂದು ಆ ತರುಣಿಯು ನಿಟ್ಟುಸಿರುಬಿಟ್ಟಳು.

ಥಾಕೂರ್ ಮೃದುವಾಗಿ ಅವಳ ಮಾತನ್ನು ಮೊಟಕುಗೊಳಿಸಿ, "ನೀವು ಪುಕ್ಕಲು ಮತ್ತು ಹೇಡಿಗಳೆಂದು ಹೇಳಬೇಡಿರಿ! ನೀವು ಬಲಹೀನರು ಅಥವಾ ದುಷ್ಟರು ಎನ್ನಬೇಡಿ. ಅವನತ್ತ ನೋಡಿರಿ ಮತ್ತು ಉತ್ಕಟತೆಯಿಂದ ಪ್ರಾರ್ಥಿಸಿರಿ."

ಓಹ್ ಭಗವಂತನೇ,
ನಿನ್ನ ಅನುಗ್ರಹದಿಂದ ನನ್ನನ್ನು ಶಕ್ತಗೊಳಿಸುವಂತೆ
ನಿನ್ನನ್ನು ಅವಿರತವಾಗಿ, ಉತ್ಕಂಠೆಯಿಂದ ಅಲಂಕರಿಸುವಂತೆ
ಪರಿಸರದೊಂದಿಗೆ ಸಾಂಗತ್ಯವಾಗಿರುವಂತೆ
ನಾನು ನಿನ್ನ ಶಕ್ತಿಯ ಪ್ರಚೋದನೆಗಾಗಿ ಪ್ರಾರ್ಥಿಸುತ್ತೇನೆ.
ನಾನು ನಿಜಕ್ಕೂ ನಿನ್ನ ಸಂತತಿಯೇ ಆಗಿದ್ದೇನೆ.
ಮತ್ತು ನನ್ನೊಳಗೆ ಯಾವುದೇ ಮಂದತೆಯಿಲ್ಲ. ಯಾವುದೇ ಬಲಹೀನತೆಯಿಲ್ಲ
ಅಥವಾ ಭೀತಿಯಿಲ್ಲ.
ಇನ್ನೆಂದೂ ನಿನ್ನನ್ನು ಮರೆತು ನಾನು ನರಕದತ್ತ ಓಡುವುದಿಲ್ಲ.
ಎಂದೂ ನಿನ್ನ ದಿವ್ಯ ತೇಜಸ್ಸಿನತ್ತ ಬೆನ್ನು ಮಾಡುವುದಿಲ್ಲ.
ಎಂದೂ 'ಕಗ್ಗತ್ತಲು ಕಗ್ಗತ್ತಲು ಕಗ್ಗತ್ತಲು' ಎಂದು ಶೋಕಿಸುವುದಿಲ್ಲ."



ಥಾಕೂರ್ ತಮ್ಮ ತೋಳನ್ನು ಮೇಲೆತ್ತಿ ಬಳ್ಳಿ ಸುತ್ತಿಕೊಂಡಿದ್ದ ಮರದತ್ತ ಬೆಟ್ಟು ಮಾಡಿ ತೋರಿಸಿದರು. "ಆ ಬಳ್ಳಿಯ ಅಭ್ಯಾಸವನ್ನು ನೋಡಿರಿ. ನೀವೂ ಸಹ ಇದೇ ರೀತಿ, ನಿಮ್ಮ ಒಡೆಯನ ಮತ್ತು ನಿಮ್ಮ ಭಗವಂತನೆಂಬ ವೃಕ್ಷವನ್ನು ಬಳ್ಳಿಯಾಗಿ ಅವಲಂಬಿಸಬಹುದು. ನಿಮ್ಮ ಪ್ರತಿಯೊಂದು ನುಡಿ ಮತ್ತು ನಡೆಯಲ್ಲಿ ನಿಷ್ಠರಾಗಿ, ಜೀವನ ಮತ್ತು ಬೆಳೆವಣಿಗೆಯ ದೈವಾನುಗ್ರಹವನ್ನು ಎಲ್ಲರಲ್ಲೂ ಉದಾತ್ತಗೊಳಿಸಿರಿ. ನೀವು ಎಲ್ಲೇ ಹೋದರೂ, ನೀವು ಏನೇ ಮಾಡಿದರೂ, ಸದಾ ಅವನ ಪವಿತ್ರ ನಾಮವನ್ನು ಜಪಿಸುತ್ತಾ ಮತ್ತೊಬ್ಬರಿಗಾಗಿ ಒಂದು ಕೊಡುಗೆಯನ್ನು ತನ್ನಿರಿ. ನಿಸ್ಸಂದೇಹವಾಗಿ, ನಿಸ್ಸಂದೇಹವಾಗಿ ಭಗವಂತನ ಪ್ರಭುತ್ವ ಮತ್ತು ಅವನ ಸಂಕಲ್ಪವು ಸ್ವರ್ಗದಲ್ಲಿರುವಂತೆಯೇ ಈ ಧರೆಯ ಮೇಲೂ ಈಡೇರುತ್ತದೆ !"

ಆ ಕ್ಷಣದಲ್ಲಿ ಅಲ್ಲಿ ನೆರೆದಿದ್ದ ಅಮೆರಿಕನ್ನರು ಥಾಕೂರ್ ಅವರ ಕಣ್ಣುಗಳಲ್ಲಿ ಪ್ರಜ್ವಲಿಸಿದ ಅಪಾರ ವಿಶ್ವಾಸವನ್ನು ವೀಕ್ಷಿಸಿದಾಗ ಆ ದೂರದ ಕನಸು ಇನ್ನೂ ಸ್ವಲ್ಪ ನಿಕಟವಾದಂತೆ ಭಾಸವಾಯಿತು. ಆಗ ಅವರುಗಳನ್ನು ರೈಲ್ವೆ ನಿಲ್ದಾಣಕ್ಕೆ ಒಯ್ಯಲು ಬಂದಿದ್ದ ಕಾರ್‌ನ ಹಾರ್ನ್ ಕೇಳಿಬಂದಿತು. ಅಮೆರಿಕನ್ನರು ಒಬ್ಬೊಬ್ಬರಾಗಿ ಥಾಕೂರ್ ಅವರಿಗೆ ಪ್ರಣಾಮ ಮಾಡಿದರು. ಥಾಕೂರ್ ಕೈ ಜೋಡಿಸಿ ತಲೆ ಎತ್ತಿ ನೋಡಿದಾಗ, ಅವರ ದೃಷ್ಟಿಯು ಕಾಯುತ್ತಿರುವ ಕಾರಿನತ್ತ ತೆರಳಿದ ಆ ಮಂದಿಯನ್ನು ಪ್ರೀತಿಯಿಂದ ಬೀಳ್ಕೊಟ್ಟಿತು.

* * * *